ಅದ್ವೈತ ವಿಜ್ಞಾನ ಸಾರ



ತೆಲುಗು ಮೂಲ : ಬ್ರಹ್ಮಶ್ರೀ ಯಲ್ಲಮರಾಜು ಶ್ರೀನಿವಾಸರಾವ್

ಅಂತಃಪೂರ್ಣಂ ಬಹಿಃಪೂರ್ಣಂ ಪೂರ್ಣ ಕುಂಭಮಿವಾಂಭಸೇ ।
ಅಂತಃಶೂನ್ಯಂ ಬಹಿಃಶೂನ್ಯಂ ಶೂನ್ಯ ಕುಂಭಮಿವಾಂಬರೇ ॥

(ಒಳಗೆ ಪೂರ್ಣ ಹೊರಗೆ ಪೂರ್ಣ ಕುಂಭ ಪೂರ್ಣ ಕಡಲಲಿ ।
ಒಳಗೆ ಶೂನ್ಯ ಹೊರಗೆ ಶೂನ್ಯ ಶೂನ್ಯ ಕುಂಭ ನಭದಲಿ ॥)

ಇರುವುದು ಒಂದೇ. ಅದು ಪೂರ್ಣ. ಕಡಲಲ್ಲಿ ಮುಳುಗಿಸಿದ ಕೊಡದ ಒಳಗೆ ಹೊರಗೆ ಎಲ್ಲೆಲ್ಲೂ ಜಲವೇ. ಆಕಾಶದಲ್ಲಿಟ್ಟ ಬರಿದಾದ ಕೊಡದ ಒಳಗೂ ಹೊರಗೂ ಖಾಲಿ - ಅಂದರೆ ಒಳಗೂಹೊರಗೂ ಆಕಾಶ ತುಂಬಿ ಅದೂ ಪೂರ್ಣವೆ. ಅದ್ವಯವಾದ ಪರಮಾರ್ಥ ತತ್ತ್ವ ಹಾಗೆ ಪರಿಪೂರ್ಣ. ಅದೇ ನಮ್ಮ ನಿಜ ಸ್ವರೂಪ. ಗೀತೋಕ್ತಿಯಂತೆ ಅದು ಒಳಗೂ ಹೊರಗೂ, ಎಲ್ಲೆಲ್ಲೂ ಸೂಕ್ಷ್ಮವಾಗಿ, ಅವಿಜ್ಞೇಯವಾಗಿ, (ತಿಳಿದಾಗ) ಬಹಳ ಹತ್ತಿರವಾಗಿ ಇರುವ, (ತಿಳಿಯದೆ) ಬಹಳ ದೂರವಾಗಿ ಇರುವ ತತ್ತ್ವ.

(ಬಹಿರಂತರಶ್ಚ ಭೂತಾನಾಮಚರಂಚರಮೇವ ಚ ।
ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂಚಾಂತಿಕೇ ಚ ತತ್ ॥)



ಕನ್ನಡ ಭಾವಾನುವಾದ : ಮತ್ತಕೂರು ರಾಜಣ್ಣ ಚಂದ್ರಮೌಳಿ

ಅದ್ವೈತ ವಿಜ್ಞಾನ ಸಾರ

ಮೂಲ : ಯಲ್ಲಮರಾಜು ಶ್ರೀನಿವಾಸರಾವ್



ಕನ್ನಡ ಭಾವಾನುವಾದ :
ಮತ್ತಕೂರು ರಾಜಣ್ಣ ಚಂದ್ರಮೌಳಿ

ಅದ್ವೈತ ವಿಜ್ಞಾನ ಸಾರ

ಅದ್ವೈತ ವಿಜ್ಞಾನ ಸಾರ

ಮೂಲ : ಯಲ್ಲಮರಾಜು ಶ್ರೀನಿವಾಸರಾವ್

ಕನ್ನಡ ಭಾವಾನುವಾದ : ಮತ್ತಕೂರು ರಾಜಣ್ಣ ಚಂದ್ರಮೌಳಿ

ಪ್ರಕಾಶಕರು :

ದಿವ್ಯಚಂದ್ರ ಪ್ರಕಾಶನ

ನಂ. 45, ಪಾಪಣ್ಣ ಗಾರ್ಡನ್, 1ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ,
ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, 2ನೇ ಹಂತ
ಬಸವೇಶ್ವರನಗರ, ಬೆಂಗಳೂರು – 560079
ಮೊಬೈಲ್ : 6360743298, 9448259595

Adyitha Vignana Sara
Written by **Yallamaraju Srinivasarao**
Kannada Translation by **Mattakuru Rajanna Chandramowly**
Bengaluru.

Published by : **Smt. B.M. Komala** for
M/s Divyachandra Prakashana
No. 45, Papaiah Garden, 1st Main Road,
2nd Cross, K.H.B. Colony, 2nd Stage, Basaveshwaranagara,
Bengaluru - 560079.

ಪ್ರಥಮ ಮುದ್ರಣ	:	2023
ಹಕ್ಕುಗಳು	:	**ಲೇಖಕರದು**
ಮಾರಾಟದ ಹಕ್ಕುಗಳು	:	**ಪ್ರಕಾಶಕರದು**
ಪುಟಗಳ ವಿನ್ಯಾಸ	:	**ಹ. ಶಂಕರ ನಾರಾಯಣ**
ಪ್ರಕಾಶನ ನಿರ್ವಹಣೆ	:	**ವಿ.ಎನ್. ರೀನಾ ಜಗದೀಶ್**
ಬಳಸಿದ ಕಾಗದ	:	70 ಜಿಎಸ್ಎಂ ಬಿಳಿ ಕಾಗದ
ಅಳತೆ	:	$^1/_8$ ಡೆಮ್ಮಿ
ಪುಟಗಳು	:	56
ಬೆಲೆ	:	ರೂ. **100/-**

ಪುಸ್ತಕ ಮಾರಾಟ ಮಳಿಗೆ ವಿಳಾಸ :

ದಿವ್ಯಚಂದ್ರ ಪ್ರಕಾಶನ
ನಂ. 6/7, ಕಾಳಿಕಾಸೌಧ,
(ಕಾರ್ಪೊರೇಷನ್ ವಾರ್ಡ್ ಆಫೀಸ್ ಎದುರು)
ಪೂರ್ಣಯ್ಯ ಛತ್ರದ ರಸ್ತೆ, ಬಳೇಪೇಟೆ ಕ್ರಾಸ್
ಬೆಂಗಳೂರು – 560053
ಮೊಬೈಲ್ : 6360743298, 9448259595

ಮುದ್ರಣ :
ಸತ್ಯಾನಂದ ಪ್ರಿಂಟರ್ಸ್
ಅರಳೇಪೇಟೆ, ಬೆಂಗಳೂರು – 560053



–: ಸಮರ್ಪಣೆ :–

ಕೀರ್ತಿಶೇಷ

ಮತ್ತಕೂರು ರಾಜಣ್ಣನವರ

ಜನ್ಮಶತಾಬ್ದಿ ಸ್ಮರಣಾರ್ಥ

ಹರಿಕಥಾ ವಿದ್ವಾನ್
ವೇ. ಬ್ರ. ಶ್ರೀ ಮತ್ತಕೂರು ರಾಜಣ್ಣನವರು



(14.07.1923 - 26.06.1998)

ಮತ್ತಕೂರು ರಾಜಣ್ಣನವರು



ತನ್ನ ತಂದೆಯ ಬಗ್ಗೆ ಹೇಳಲು ಯಾರಿಗಾದರು ಸರಿ, ಎರಡು ಆತಂಕಗಳು ತೋರಬಹುದು. ಭಾವಾವೇಶ ಮತ್ತು ಉತ್ಪ್ರೇಕ್ಷೆ. ಅವೆರಡನ್ನೂ ಬದಿಗಿಟ್ಟು ಹೇಳಬೇಕಾದರೆ ಆ ತಂದೆಯೆಂಬ ವ್ಯಕ್ತಿಯಲ್ಲೊಂದು ಪ್ರತ್ಯೇಕತೆ ಇರಬೇಕು. ಅಂಥ ವಿಶೇಷ ವ್ಯಕ್ತಿ ರಾಜಣ್ಣನವರು.

ಬೆಂಗಳೂರು ಉತ್ತರ ತಾಲ್ಲೋಕು ಹೆಸರುಘಟ್ಟ ಹೋಬಳಿ ಮತ್ತಕೂರಿನ ದೇವತಾರ್ಚನೆ ಶ್ರೀಕಂಠಶಾಸ್ತ್ರಿ ಮತ್ತು ನರಸಮ್ಮನವರಿಗೆ ಜನಿಸಿದ ಈ ಕನಿಷ್ಠ ಪುತ್ರನಿಗೆ ರಾಮಯ್ಯ, ನಾರಾಯಣರಾವ್, ಸೀತಾರಾಮಯ್ಯ – ಮೂವರು ಅಣ್ಣಂದಿರು; ಅಕ್ಕಯ್ಯಮ್ಮ, ಸೀತಮ್ಮ, ಗೌರಮ್ಮ, ಶಾರದಮ್ಮ ಇವರು ಅಕ್ಕತಂಗಿಯರು. ಶೂನ್ಯ ಆರ್ಥಿಕ ಹಿನ್ನೆಲೆಯ ತಂದೆ ಶ್ರೀಕಂಠಶಾಸ್ತ್ರಿಗಳು ಬಡತನದಲ್ಲಿ ಬೇಯುತ್ತಿದ್ದರೆ, ಕುಟುಂಬ ನಿರ್ವಹಣೆ ಚಿಕ್ಕ ಮಗನ ತಕ್ಷಣ ಕರ್ತವ್ಯವಾಯಿತು. ಇದು ಅಪ್ಪನ ಆತ್ಮಕಥನವಲ್ಲ. ಅವರ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ಸದಾ ನೆನಪಿನಲ್ಲಿ ಉಳಿದಿರುವ ಅಪ್ಪನ ವೈಶಿಷ್ಟ್ಯಗಳನ್ನು ಮೆಲುಕುಹಾಕುವುದಷ್ಟೆ.

ಅಪ್ಪ ಆರಡಿ ಆಜಾನುಬಾಹು. ಎಲ್ಲಿದ್ದರೂ ಎದ್ದು ಕಾಣುವ ಸ್ವರೂಪ. ಸಾಹಸ ಪ್ರವೃತ್ತಿಯಂತೂ ಅಪ್ಪನಿಗೆ ಉಸಿರಾಟ ಆಗಿತ್ತು. ಬಾಳಿನರ್ಧದ ಕಷ್ಟ, ಬಡತನ ಅವರನ್ನೆಂದೂ ಕುಗ್ಗಿಸಲಿಲ್ಲ. ಜಾತಿಜನ್ಯವಾದ ದಾನಗ್ರಹಣ ಸ್ವಭಾವಕ್ಕಿಂತ ಪರೋಪಕಾರದ ಕ್ಷಾತ್ರವೇ ಅವರಲ್ಲಿ ಹೆಚ್ಚು. ಈ ಗುಣ ಅವರ ಇಡೀ ಜೀವನದ ಮುಖ್ಯ ಘಟನೆಗಳ ಅಂತಃಸೂತ್ರವೆಂದರೆ ತಪ್ಪಲ್ಲ. ಪುಳಿಚಾರು ಬ್ರಾಹ್ಮಣನಾಗಿದ್ದರೂ ಬಲದಲ್ಲಿ ಅಪ್ಪ ಎಲ್ಲರಿಗೂ ಮಿಗಿಲು ಎಂಬುದನ್ನು ಊರಿನವರಿಂದಲೇ ಕೇಳಿ ಆಶ್ಚರ್ಯಗೊಂಡಿದ್ದೆ.

ಊರಿನ ಹೊರಗಿದ್ದ ಒಂದು ಬಂಡೆಯನ್ನು ತೋರಿಸಿ ಅದನ್ನು ಅಪ್ಪ ಒಬ್ಬರೇ ಎತ್ತುತ್ತಿದ್ದರು ಎಂದು ಹಲವಾರು ಮಂದಿ, ಅವರ ಸಮವಯಸ್ಕರು

ಹೇಳಿದ್ದನ್ನು ಕೇಳಿದ್ದೇನೆ, ಮತ್ತೆ ಮತ್ತೆ ವಿಚಾರಿಸಿ ನಿಷ್ಕರ್ಷೆಯಾದ ಸಂಗತಿಯದು...! ಹದಿನೆಂಟು ಮೈಲಿ ದೂರದ ಬೆಂಗಳೂರಿಗೆ ಸೈಕಲ್ಲಿನಲ್ಲೇ ಹೋಗಿಬರುತ್ತಿದ್ದರು. ಹಣ್ಣುಗಳು, ದಿನಸಿ, ಸಾಧನ ಔಷಧಾಲಯದಿಂದ ಆಯುರ್ವೇದದ ಸರುಕು ಇವಲ್ಲಾ ಮನೆಯನ್ನು ತಲುಪುತ್ತಿದ್ದುದು ಹೀಗೆ. ಅವರೇ ಹೇಳುತ್ತಿದ್ದ ಈ ಸಾಹಸ ಕಾರ್ಯ ಆಗ ನಡೆದದ್ದು.

ಒಮ್ಮೆ ನಗರದಿಂದ ಸೈಕಲ್ಲಿನ ಮೇಲೆ ಸರಂಜಾಮನ್ನು ಹೊತ್ತು ಬರುತ್ತಿರಬೇಕಾದರೆ ಸೈಕಲ್ಲಿನ ಹಿಂದಿನ ಚಕ್ರದ ಟ್ಯೂಬ್ ಸಿಡಿದು ವಾಹನ ಸಾಗದಾಯಿತು. ಆಗ ಸುಮಾರು ರಾತ್ರಿ ಹತ್ತು ಗಂಟೆ. ರಸ್ತೆಯಲ್ಲಿ ವಿದ್ಯುತ್ ದೀಪಗಳು ಇಲ್ಲದ ಕಾಲವದು. ಸಾಗಬೇಕಾದ ದೂರವೋ ಇನ್ನೂ ಹದಿನೈದು ಮೈಲಿ! ಸೈಕಲನ್ನು ತಳ್ಳಿಕೊಂಡು ಹೋದರೂ, ಮನೆ ತಲುಪುವುದು ಯಾವಾಗ? ಅತ್ತಿತ್ತ ನೋಡಿದರು! ಸಂಕ್ರಾಂತಿಯ ಕಾಲವಾದ್ದರಿಂದ, ರಸ್ತೆಯ ಬದಿಯಲ್ಲಿ ವಿಶಾಲವಾದ ಕಣಗಳು, ಅಲ್ಲಿನ ಹುಲ್ಲಿನ ಮೆದೆಗಳು ಕಂಡವು. ಅಪ್ಪ ಅಲ್ಲಿ ನಿಂತು, ಪೂರ್ತಿ ಚಪ್ಪಟೆಯಾಗಿದ್ದ ಸೈಕಲಿನ ಹಿಂದಿನ ಚಕ್ರದ ಒಳಕ್ಕೆ ಆ ಬಣವೆಯಲ್ಲಿದ್ದ ಹುಲ್ಲನ್ನು ಹಗ್ಗದಂತೆ ಹೊಸೆದು ಚಕ್ರದೊಳಗೆ ತುಂಬಿ, ಸರಾಗವಾಗಿ ಸೈಕಲ್ ಅನ್ನು ತುಳಿದುಕೊಂಡು ಊರಿಗೆ ಬಂದರಂತೆ!

ರಾಜಣ್ಣನವರ ಕ್ರಿಯಾತ್ಮಕ ಜೀವನದಲ್ಲಿ ದೇವತಾರ್ಚನೆ, ಪೌರೋಹಿತ್ಯಗಳು ವೃತ್ತಿಯಾದರೆ ಸಾಹಿತ್ಯ ಮತ್ತು ಸಂಗೀತಗಳು ಅವರ ಪ್ರವೃತ್ತಿ. ಅಣ್ಣಂದಿರು ಹೆಚ್ಚಿನ ಓದಿಗೆಂದು ಬೆಂಗಳೂರನ್ನು ಸೇರಿ ಅಲ್ಲೇ ನೆಲೆಸಿದರೆ, ವೃದ್ಧ ಮಾತಾಪಿತೃ ರಕ್ಷಣೆಗೆ ಅಪ್ಪ ಹಳ್ಳಿಯಲ್ಲೇ ನಿಂತರು.

ಅರ್ಚಕ ವೃತ್ತಿಯಿಂದ ಕುಟುಂಬ ನಿರ್ವಹಣೆ ಸಾಗದೆ ಅವರ ವಿದ್ಯಾಭ್ಯಾಸವೂ ನಿಲುಗಡೆಯಾಯಿತು. ಶಾಲೆಗೆ ಸ್ವಸ್ತಿ ಹೇಳಿ ಅಪ್ಪ ನೇಗಿಲನ್ನು ಹಿಡಿದರು. ಏಕಾಂಗಿಯಾಗಿ ವ್ಯವಸಾಯ ಮಾಡಿದರು. ಹೊತ್ತಿಗಷ್ಟು ಅನ್ನಕ್ಕೆ ದಾರಿಯಾಯಿತು.

ಹಳ್ಳಿಯಲ್ಲೇ ನೆಲಸಿ, ಪೌರೋಹಿತ್ಯ, ಪ್ರಾಥಮಿಕ ಶಾಲಾ ಉಪಾಧ್ಯಾಯ ವೃತ್ತಿ, ಜ್ಯೋತಿಷ, ಹರಿಕಥೆ ಮತ್ತು ವಾಸ್ತು ವಿದ್ಯೆಗಳನ್ನು ಸ್ವಾಧ್ಯಾಯದಿಂದಲೇ

ಕ್ರಮವಾಗಿ ಕರಗತ ಮಾಡಿಕೊಂಡರು. ಅಪ್ಪನ ಜೀವನದ ವಿಶೇಷಗಳನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ; 1. ಮನೆಗೆ ಮಲ್ಲಿಗೆಯಾಗಿ ಬಂಧುಗಳ ಕಣ್ಮಣಿಯಾಗಿ ಕೊನೆಯ ಉಸಿರಿನವರೆಗೂ ಉತ್ಸಾಹ ಮತ್ತು ಭಾವಶಕ್ತಿಯನ್ನು ಬಿಡದೆ ಸಾಗಿದ್ದು, 2. ಏಕೋಪಾಧ್ಯಾಯವೃತ್ತಿಯ ಸವಾಲುಗಳ ಸಮರ್ಥ ನಿರ್ವಹಣೆ. 3. ಸುತ್ತಣ ಗ್ರಾಮೀಣ ಜನರ ಹಿತೈಷಿಯಾಗಿ ವೃತ್ತಿಯಂತಲ್ಲದೆ ಸೇವೆಯಂತೆ ಸಾಗಿಸಿದ ಪೌರೋಹಿತ್ಯ. 4. ದೀರ್ಘಕಾಲ ನಡೆಸಿದ ಶ್ರೀ ವೀರಭದ್ರಸ್ವಾಮಿ ಮತ್ತು ಶ್ರೀ ಸೋಮೇಶ್ವರ ಸ್ವಾಮಿಯ ಪೂಜಾ ಕೈಂಕರ್ಯ. 5. ತನ್ನ ಸಂಗೀತ–ಸಾಹಿತ್ಯಾಭಿರುಚಿಯಿಂದ ಆತ್ಮಾನಂದಕ್ಕಾಗಿ ಸಾಧಿಸಿಕೊಂಡ ಕಾವ್ಯವ್ಯಾಸಂಗ ಮತ್ತ ಹರಿಕಥಾ ಪ್ರಕ್ರಿಯೆ, ಅಪ್ಪನ ಈ ಐದು ಮುಖಗಳು, ತಮ್ಮ ಇಷ್ಟದೈವವಾದ ಶಿವನ ಪಂಚವಕ್ತ್ರಗಳ ಸಂಕೇತವೆನ್ನಬಹುದು.

1. ಮತ್ತಕೂರು ಸುತ್ತಣ ಹತ್ತಾರು ಗ್ರಾಮಗಳ ಪೌರೋಹಿತ್ಯ ಬರಿಯ ಸಂಪಾದನೆಯ ವೃತ್ತಿಯಾಗಿರಲಿಲ್ಲ. ಆಯಾ ಗ್ರಾಮದ ಕುಟುಂಬ ಸಂಘರ್ಷಗಳು, ಸಾಂದರ್ಭಿಕ ಕಲಹಗಳು ಇತ್ಯರ್ಥವಾಗುತ್ತಿದ್ದು ರಾಜಣ್ಣನವರ ನೇತೃತ್ವದಲ್ಲಿಯೇ.

ನಮ್ಮೂರಿನ ಒಂದು ವೀರಶೈವ ಕುಟುಂಬದ ಅಣ್ಣ ತಮ್ಮಂದಿರ ನಡುವೆ ಅಡಗಿದ್ದ ಮನಸ್ತಾಪ ಒಮ್ಮೆ ಭುಗಿಲೆದ್ದಿತು. ಗೃಹಕಲಹದಿಂದ ಮುನಿಸಿಕೊಂಡ ತಮ್ಮ ಎತ್ತಿನಗಾಡಿ ಕಟ್ಟಿಕೊಂಡು ಹೆಂಡತಿ ಮಕ್ಕಳ ಜೊತೆ ಊರನ್ನೇ ಬಿಟ್ಟು ಹೊರಟ. ಆ ಕ್ಷಣದಲ್ಲಿ ಅಪ್ಪ ಬೇರೆಲ್ಲೋ ಕಾರ್ಯಾರ್ಥವಾಗಿ ತೆರಳಿದ್ದರು. ಮನೆಗೆ ಬರುತ್ತಲೇ ವಿಷಯವನ್ನು ತಿಳಿದು, ಆ ಕೂಡಲೇ ಸೈಕಲನ್ನೇರಿ ಒಂದಷ್ಟು ದೂರ ಊರನ್ನು ಬಿಟ್ಟು ಸಾಗಿದ್ದ ಆ ತಮ್ಮನ ಗಾಡಿಯನ್ನು ನಿಲ್ಲಿಸಿ, ಅಲ್ಲೇ ಅವನಿಗೆ ಬುದ್ಧಿಹೇಳಿ, ತನ್ನ ಜೊತೆಯಲ್ಲೇ ಆ ಸಂಸಾರವನ್ನು ಊರಿಗೆ ಕರೆತಂದರು. ಅವರ ಅಣ್ಣನಿಗೂ ಹಿತವನ್ನು ನುಡಿದು ಕುಟುಂಬವನ್ನು ಒಂದಾಗಿಸಿದರು. ಇಂಥ ಹಲವಾರು ಘಟನೆಗಳು ಆ ಗ್ರಾಮ ಜೀವನದಲ್ಲಿ ರಾಜಣ್ಣನವರಿಗೆ ಒಂದು ಉನ್ನತ ವ್ಯಕ್ತಿತ್ವವನ್ನು ತುಂಬಿಕೊಟ್ಟಿತು.

ಇನ್ನು ನಮ್ಮ ಮನೆಯ ವಿಷಯದಲ್ಲಿ, ನಮ್ಮೆಲ್ಲರ ಬಗ್ಗೆ ಅವರಿಗಿದ್ದ ಪ್ರೇಮದ ಬಗ್ಗೆ ಹೇಳುವದು ಇಲ್ಲಿ ಔಚಿತ್ಯವಲ್ಲ. ತನ್ನ ಕುಟುಂಬ

ಪೋಷಣೆಯನ್ನು ಮಾಡುವುದು ತನ್ನ ಮಕ್ಕಳಿಗೆ ಮದುವೆ, ಉಪನಯನವನ್ನು ಮಾಡುವುದು ಕರ್ತವ್ಯವೇ ಹೊರತು ಅದೊಂದು ವಿಶೇಷವೆಂದು ಗಣಿಸಲಾಗದು. ರಾಜಣ್ಣನವರ ಧರ್ಮಪತ್ನಿ ಶ್ರೀಮತಿ ಲಲಿತಮ್ಮ. ಆಕೆ ಶಿವಗಂಗೆಯ ಶಾರಾದಾದೇವಿಯ ಅರ್ಚಕರಾಗಿದ್ದ ದಿವಾಕರ ನರಸಿಂಹಶಾಸ್ತ್ರಿಗಳ ಪುತ್ರಿ. ಮಕ್ಕಳಾದ ಚಂದ್ರಮೌಳಿ, ಸಾವಿತ್ರಿ, ಶ್ರೀನಿವಾಸಮೂರ್ತಿ, ಉಮಾ, ಮಂಜುಳ ಇವರ ವಿದ್ಯೆ ವಿವಾಹಾದಿಗಳನ್ನು ಬಡತನದಲ್ಲಿದ್ದೂ ಸಹ ಯಥಾರೀತಿಯಿಂದ ನೆರವೇರಿಸಿದರು. ಇವರೆಲ್ಲಾ ಇಂದಿಗೂ ಸೌಖ್ಯವಾಗಿ ಬಾಳುತ್ತಿರುವುದು ರಾಜಣ್ಣನವರ ಸಾತ್ವಿಕ ಸಂಸ್ಕಾರ ಬಲದಿಂದ ಎಂದು ಆಗಾಗ ನಮ್ಮ ಹಿರಿಯರು ಹೇಳುತ್ತಿರುತ್ತಾರೆ.

ಪ್ರಾಥಮಿಕ ಶಾಲಾ ಶಿಕ್ಷಕನ ಆಗಿನ ವರಮಾನದಲ್ಲಿ ಸಂಸಾರ ನಿರ್ವಹಣೆ ಸಾಲವಿಲ್ಲದೆ ಸಾಗುವಂಥದ್ದಲ್ಲ. ತಾನು ಬಡತನದಲ್ಲಿದ್ದರೂ ವಿಧವೆಯಾದ ತನ್ನ ಅಕ್ಕನ ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ದು, ಪಿತೃವಿಯೋಗ ಹೊಂದಿದ ತನ್ನ ನಾದಿನಿಯ ವಿವಾಹವನ್ನು ನೆರವೇರಿಸಿದ್ದು ಇಂಥವು ಈಗಿನ ಸ್ವಾರ್ಥ ಜಗತ್ತಿನ ಕಣ್ಣಿಗೆ ವಿಚಿತ್ರವೆನಿಸುತ್ತವೆ. ಅಷ್ಟು ಗಾಢವಾದ ಭಾವನೈಕಟ್ಯ ಮತ್ತು ಸ್ವಾರ್ಥವನ್ನೆಲ್ಲಾ ಬದಿಗೊತ್ತಿ ತಕ್ಷಣ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡು ನಿರ್ವಹಿಸುವ ಬಂಧು ಪ್ರೀತಿ ರಾಜಣ್ಣನವರ ಸಹಜ ಶಕ್ತಿ ಮತ್ತು ದೌರ್ಬಲ್ಯವೂ ಹೌದು.

2. ಉತ್ಸಾಹದ ಚಿಲುಮೆಯಾಗಿ ಹಲವು ಗ್ರಾಮಗಳಲ್ಲಿ ಅವರು ನಿರ್ವಹಿಸಿದ ಏಕೋಪಾಧ್ಯಾಯ ವೃತ್ತಿ, ಇಂದು ಕಲ್ಪಿಸಲು ಸಾಧ್ಯವೆನಿಸದ ಸಾಹಸ. ಐದು ಕ್ಲಾಸುಗಳ ಮಕ್ಕಳು ಕೂಡಲು ಒಂದು ಸಣ್ಣ ಹೆಂಚಿನ ಸೂರಿನಡಿಯ ಕೊಠಡಿ. ಐದು ಗುಂಪುಗಳನ್ನು ಪ್ರತ್ಯೇಕಿಸಿ, ಒಂದೇ ವೇಳೆಯಲ್ಲಿ ಒಬ್ಬನೇ ಉಪಾಧ್ಯಾಯ ಎಲ್ಲರಿಗೂ ಪಾಠ ಪ್ರವಚನ ನಡೆಸಬೇಕಾದ ಪಂಚಾವಧಾನವದು. ಒಂದನೇ ಕ್ಲಾಸಿಗೆ ಅಕ್ಷರಾಭ್ಯಾಸ, ಎರಡು ಮೂರರ ಇಯತ್ತೆಯ ಮಕ್ಕಳಿಗೆ ಉಕ್ತಲೇಖನ, ನಾಲ್ಕರ ಮಕ್ಕಳಿಗೆ ವಿಜ್ಞಾನ, ಗಣಿತ ಬೋಧನೆ ಹೀಗೆ ಎಲ್ಲ ಕ್ಲಾಸಿನ ಮಕ್ಕಳಮೇಲೆ ಗಮನವಿರಿಸಿ ಶಿಕ್ಷಣ ಸಾಗಬೇಕು. ಮೇಲಾಗಿ ಸರ್ಕಾರದ ನಿಯಮದಂತೆ ಮಕ್ಕಳಿಗೆ ಉಪ್ಪಿಟ್ಟು ಮತ್ತು ಹಾಲಿನ ತಯಾರಿ, ಕ್ರೀಡಾವಿನೋದಗಳು ಇಂಥ ಸರ್ವವನ್ನೂ

ನಿಭಾಯಿಸಿ ಆ ವಲಯದ ಶ್ರೇಷ್ಠ ಏಕೋಪಾಧ್ಯಾಯರೆಂಬ ಪ್ರಶಸ್ತಿಯನ್ನೂ ಪಡೆದರು.

ಅಪ್ಪ ಶಿಕ್ಷಕರ ಸಂಘದಲ್ಲೂ ಕ್ರಿಯಾಶೀಲರಾಗಿದ್ದು, ಅವರ ವಾರ್ಷಿಕ ಸಭೆಗೆ ಅಧ್ಯಕ್ಷರಾಗಿ ಜಿ.ಪಿ. ರಾಜರತ್ನಂ ಅವರಂಥ ಮಹನೀಯರನ್ನು ಕರೆತಂದ ಭಾಗ್ಯ ನನ್ನದಾಗಿತ್ತು. ತಮ್ಮ ಉಪಾಧ್ಯಾಯ ಮಿತ್ರರೊಂದಿಗೆ ನಡೆಯುತ್ತಿದ್ದ ಪ್ರವಾಸಗಳು ಮತ್ತು ಅವರನ್ನು ಮನೆಗೆ ಕರೆತಂದು ಅಲ್ಲಿ ನಡೆಸುತ್ತಿದ್ದ ಲೋಕಾಭಿರಾಮ ಸಂಭಾಷಣೆ, ವಿನೋದ ಗೋಷ್ಠಿಗಳು, ಇವನ್ನು ನೋಡುತ್ತಿದ್ದ ನನಗೆ ಅಪ್ಪನ ವಿಜ್ಞಾನ, ಸಂಭಾಷಣಾ ಚಾತುರ್ಯ, ಹಾಸ್ಯ ಪ್ರವೃತ್ತಿ, ಗಮಕ ವಾಚನ, ಶ್ಲೋಕ ವಾಚಕತ್ವ, ಪರೇಂಗಿತಜ್ಞತೆ, ಇವು ನನ್ನಲ್ಲಿ ಗಾಢಪರಿಣಾಮವನ್ನು ಬೀರಿದವು. ಅಲ್ಲದೆ, ರೇಡಿಯೋ, ಟೀವಿ, ವಿದ್ಯುತ್ ಇಲ್ಲದ ಅಂದಿನ ಹಳ್ಳಿಯ ಬದುಕಿನಲ್ಲಿ ಇವೆಲ್ಲ ನಮಗೆ ಬಹು ವಿಸ್ಮಯಕಾರಿಯಾದ ರಂಜನೆಗೆ ಆಕರವಾಗಿದ್ದವು.

3. ಪೌರೋಹಿತ್ಯ ಅಪ್ಪನಿಗೆ ವೃತ್ತಿಯಲ್ಲ, ಸೇವೆಯಾಗಿತ್ತು ಎಂದದ್ದು ದಿಟವಾಗಿ ನಾನು ನೋಡಿದ್ದ ವಾಸ್ತವ. ಬಡ ಕುಟುಂಬಗಳ ವಿವಾಹ, ಗೃಹಪ್ರವೇಶ ಪುಣ್ಯಾಹಾದಿ ಕಾರ್ಯಗಳಲ್ಲಿ ಅವರು ಕಾಣುತ್ತಿದ್ದುದು ವೈದಿಕ ಸಂಪ್ರದಾಯದ ನಿಷ್ಠೆಯನ್ನಲ್ಲದೆ ನಾಲ್ಕೆಂಟಾಣೆಯ ವರಮಾನವನ್ನಲ್ಲ. ಬಡವರ ಮನೆಯ ಅಪರಕಾರ್ಯಗಳ ಸಂದರ್ಭಗಳಲ್ಲಿ, ಮನೆಯಲ್ಲೇ ಇದ್ದ ಕೊಡೆ, ಪಾದರಕ್ಷೆ, ಕಳಶಗಳು, ವಸ್ತ್ರಗಳು ಇವನ್ನೆಲ್ಲಾ ನಾಲ್ಕಾರು ಮೈಲಿ ದೂರದ ಹಳ್ಳಿಗೆ ಕೊಂಡುಹೋಗಿ, ಅಲ್ಲಿನ ಕರ್ತನಿಗೆ ಕೊಟ್ಟು, ಅದನ್ನೇ ಅವನಿಂದ ದಾನವಾಗಿ ಪಡೆದು, ಆತ ಕಷ್ಟದಲ್ಲಿದ್ದುದನ್ನು ಕಂಡು, ತಾನೇ ಆತನಿಗಷ್ಟು ಧನಸಹಾಯ ಮಾಡಿ ಬಂದದ್ದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಎಷ್ಟೋ ವೇಳೆ ಗೋದಾನಕ್ಕಾಗಿ ತತ್ಸಂದರ್ಭಕ್ಕೆ ನಮ್ಮ ಹಸುವನ್ನೇ ನಾನು ಕೊಂಡು ಹೋದದ್ದುಂಟು. ಇದಲ್ಲದೆ ವಧೂ-ವರರ 'ಸಾಲಾವಳಿ'ಗೆಂದು ಹತ್ತೂರುಗಳ ಸಮಸ್ತರೂ ಅಪ್ಪನಲ್ಲಿಗೆ ಬರುತ್ತಿದ್ದರು. ನೂರಾರು ಮದುವೆಗಳ ಪುರೋಹಿತನಾಗಿ, ಇಂದಿಗೂ ಆ ಗ್ರಾಮಗಳ ಹಿರಿಯರು ಅಪ್ಪನನ್ನು ಸ್ಮರಿಸಿಕೊಳ್ಳುತ್ತಾರೆ.

4. ಅಪ್ಪ, ಅರ್ಚಕತ್ವದ ವಿಷಯದಲ್ಲಿ ಎಂದೂ ತಪ್ಪದೆ ಶಿವಾರ್ಚನೆ ನಡೆಸಿಕೊಂಡು ಬಂದರು. ನೈಮಿತ್ತಿಕ ದಿನಗಳಂದು ಏಕಾದಶವಾರ ರುದ್ರಾಭಿಷೇಕ, ಹೋಮಗಳು ನಡೆಯುತ್ತಿದ್ದವು. ಆ ದಿನಗಳ ವಿಜಯ ದಶಮಿಯ ಉತ್ಸವಗಳದ್ದೇ ಒಂದು ವಿಶೇಷ. ಸೋಮೇಶ್ವರ, ವೀರಭದ್ರ, ವೇಂಕಟರಮಣ, ಆಂಜನೇಯ, ಮಾರಮ್ಮ ಹೀಗೆ ಅಂತರ್ಭೇದಗಳಿಲ್ಲದೆ ಸರ್ವ ದೇವತಾ ಮೂರ್ತಿಗಳ ಉತ್ಸವವೆಂದರೆ ಊರಿನ ಹಬ್ಬವೇ ಆಗಿತ್ತು. ಗಾಣದೆಣ್ಣೆಯ ಪಾತ್ರೆಯನ್ನು ಹೆಗಲಿಗೇರಿಸಿದ ಗಂಗಪ್ಪ ಪಂಜು ಹಿಡಿದರೆ, ಮುಂದೆ ಪರಿಶಿಷ್ಟರೆಂದು ನಾವೀಗ ಹೇಳುವ ಜನರಿಂದ ನೃತ್ಯ ಸಮೇತ (ಕೆಲವರು ಮತ್ತರಾಗಿ) ಬಾರಿಸುವ ತಮ್ಮಟೆ ಸದ್ದು; ಶೈವರು, ಕೃಷಿಕರು ಉತ್ಸವ ಮೂರ್ತಿಗಳಿಗೆ ನಾಲ್ಕೂ ಕಡೆ ಹೆಗಲು ಕೊಟ್ಟರೆ, ಅಪ್ಪನ ಮಂತ್ರ ಘೋಷ, ಮಂಗಳಾರತಿ, ನೈವೇದ್ಯ, ಆಯಾ ಮನೆಗೆ ಪ್ರಸಾದ ವಿನಿಯೋಗದ ಸವ್ಯಸಾಚಿತ್ವ. ಎಲ್ಲಕ್ಕೂ ಮೊದಲು ಗ್ರಾಮದ ಕ್ಷುರಕರ್ಮಕಾರ ಮತ್ತು ಅವನ ಮಕ್ಕಳಿಂದ ಜೋಡಿ ನಾಗಸ್ವರ ವಾದನ.

ಸಂಜೆಗೆ ಸಜ್ಜಾಗಿ, ಸಾಲಾಗಿ ಸಾಗುತ್ತಿದ್ದ ಮೆರವಣಿಗೆ ಮತ್ತಕೂರಿನ ಪ್ರದಕ್ಷಿಣೆ ಮುಗಿಸಿ, ಉತ್ಸವದ ಮುಕ್ತಾಯವಾಗುತ್ತಿದ್ದುದು ಊರ ಹೊರಗಿನ ಸೋಮೇಶ್ವರ ಸನ್ನಿಧಿಯಲ್ಲಿ. ದೇಗುಲದ ಹತ್ತಿರದಲ್ಲೇ ವಿಶಾಲವಾದ ಅಶ್ವತ್ಥ ಕಟ್ಟೆ. ಅದರ ಎದುರಿಗೆ ಬನ್ನಿಮರ, ಪಕ್ಕದಲ್ಲಿ ಗ್ರಾಮ ದೇವತೆ ಕಾಟಮರಾಯ.

ಮೊದಲಿಗೆ ಆ ಬನ್ನಿ ಮರದ ಎದುರಿನಲ್ಲಿ ಉತ್ಸವಮೂರ್ತಿಗಳನ್ನೆಲ್ಲ ಇಳಿಸುವುದು; ಬನ್ನಿ ಮರದ ಮುಂದೆ ಕುಂಬಾರ ತಂದು ಮೊಳದಷ್ಟು ದಪ್ಪ ಹರಡಿದ ಜೇಡಿ ಮಣ್ಣಿನ ಮೇಲೆ ಗಟ್ಟಿಯಾಗಿ ಇರಿಸಿದ ದೀರ್ಘವಾದ ಹತ್ತಾರು ಬಾಳೆಕಂಬಗಳು ಇರುತ್ತಿದ್ದವು. ಪೂಜೆಗೊಂಡ ದೇವತೆಗಳ ಶಸ್ತ್ರಾದಿಗಳನ್ನು ಅಪ್ಪ ಆಗ ಹೊರಕ್ಕೆ ತೆಗೆಯುತ್ತಿದ್ದರು.

ಮೊದಲಿಗೆ ನಡೆಯುತ್ತಿದ್ದುದು ಧನುರ್ವಿದ್ಯಾ ಸೇವೆ. ಊರಿನ ಹಿರಿಯರು ಒಬ್ಬೊಬ್ಬರೇ ಬಾಣ ಪ್ರಯೋಗ ಮಾಡಿ ಸುಮಾರು ಹದಿನೈದು, ಇಪ್ಪತ್ತು ಅಡಿ ದೂರದ ಆ ಬಾಳೆಕಂಬಳಿಗೆ ಚುಚ್ಚಿಕೊಳ್ಳುವಂತೆ ಮೂರು ಬಾಣಗಳನ್ನು ಹೊಡೆಯಬೇಕು. ಮಕ್ಕಳಾದ ನಮಗೆಲ್ಲಾ ಅದೊಂದು ದೊಡ್ಡ ಸಂಭ್ರಮ.

ನೋಡಿ ಆನಂದಿಸುವುದೇ ಹೊರತು ಅಲ್ಲಿ ದೊಡ್ಡವರಿಗೆ ಮಾತ್ರ ಪ್ರವೇಶ. ಅವರು ಬಾಣ ಪ್ರಯೋಗ ಮಾಡುತ್ತಿದ್ದರೆ, ಓಹೋ ನೋಡಿ ಭೀಷ್ಮಾಚಾರ್ಯರು ಹೇಗೆ ಹೊಡೆದರು! ಇಗೋ ಈಗ ದ್ರೋಣರು ಬಂದರು, ಎಂದು ಅಪ್ಪ ಕಾಮೆಂಟರಿ ಕೊಡುತ್ತಿದ್ದಾಗ ಜನರ ಉತ್ಸಾಹ ಕರತಾಡನ ನೂರ್ಮಡಿಯಾಗುತ್ತಿತ್ತು.

ಕೊನೆಗೆ ಊರಿನ ಪಟೇಲರು ಬಂದು ಆ ಬಾಳೆಕಂಬಗಳನ್ನು ಖಡ್ಗದಿಂದ ವೀರಾವೇಷಗೊಂಡು ಕತ್ತರಿಸಿದಾಗ ಉತ್ಸವದ ಮುಕ್ತಾಯ. ನಂತರ ಸೋಮೇಶ್ವರನಿಗೆ ಮಂಗಳಾರತಿ, ಸರ್ವರಿಗೂ ಬುಟ್ಟಿಗಳಲ್ಲಿ ಬಂದಿದ್ದ ತೆಂಗಿನಕಾಯಿ ಹೋಳುಗಳು, ಬಾಳೆ ಹಣ್ಣು, ಹುರಿಗಡಲೆ ಮತ್ತು ಪುರಿ ಇವುಗಳ ಪ್ರಸಾದ ವಿನಿಯೋಗ ಹಬ್ಬದ ಪತಾಕ ಸನ್ನಿವೇಶ. ಇವೆಲ್ಲಾ ಮುಗಿದು ಮನೆಯನ್ನು ತಲುಪುತ್ತಿದ್ದುದು ರಾತ್ರಿ ಹನ್ನೊಂದಕ್ಕೆ! ಇದು ಸರ್ವಜನಾಂಗದ ಮೇಳವಿಕೆಯ ಕುರುಹಾಗಿ ನಡೆಯುತ್ತಿದ್ದ ವರ್ಷೋತ್ಸವಗಳಲ್ಲೊಂದು. ಊರಿನ ಹಿರಿಯರು ಮಾತ್ರವಲ್ಲ, ಊರಿನ ಪುಂಡರೂ ಅಪ್ಪನಿಗೆ ಆಪ್ತರೇ. ಅವರನ್ನೆಲ್ಲಾ ಕಟ್ಟಿ ಕಾಮನ ಹಬ್ಬಕ್ಕೆ ಗಿಳಿಯನ್ನೇರಿ ಕಬ್ಬಿನ ಬಿಲ್ಲನ್ನು ಹಿಡಿದ ಮನ್ಮಥನ ಚಿತ್ರವನ್ನು ಬರೆದುಕೊಟ್ಟರೆ, ಅದರ ಮರವಣಿಗೆ ನಡೆದು, ಊರಿನ ನಿರುಪಯುಕ್ತ ವಸ್ತುಗಳಿಂದ ಮನ್ಮಥ ದಹನ ನಡೆಸುತ್ತಿದ್ದವರು ಈ ಯುವಕರೇ.

ಮತ್ತೊಂದು ಪ್ರಮುಖ ಪರ್ವ ಗೌರಿ ಗಣೇಶರದು. ಸಾರ್ವಜನಿಕ ಗಣೇಶೋತ್ಸವ, ಬೀದಿ ವಿನಾಯಕರು ಆಗ ಇರಲಿಲ್ಲ. ಶಾಸ್ತ್ರೋಕ್ತವಾಗಿ ಗಣೇಶನ ಪೂಜೆ ನಡೆಯುತ್ತಿದ್ದುದು ಐದಾರು ವಿಪ್ರ ಕುಟುಂಬಗಳಲ್ಲಿ ಮಾತ್ರ. ಆ ಐದು ಮನೆಗಳಲ್ಲಿ ಗಣೇಶನ ಪೂಜೆಯನ್ನು ಮಾಡಿಸಿ, ದೇವಸ್ಥಾನಗಳ ಪೂಜೆ ಮುಗಿಸಿ, ಮನೆಯಲ್ಲಿ ಅಪ್ಪ ಪೂಜೆ ಮಾಡಿಸುವಷ್ಟು ಹೊತ್ತಿಗೆ ಕಡುಬು ಹೋಳಿಗೆಯ ತಯಾರಿ ಮುಗಿದು ನೈವೇದ್ಯಕ್ಕೆ ಅಣಿಯಾಗಿರುತ್ತಿತ್ತು.

ಬೆಳಿಗ್ಗೆ ಆರೇಳುಗಂಟೆಯಿಂದ ಮಧ್ಯಾಹ್ನ ಮೂರರವರೆಗೂ ಊರೆಲ್ಲಾ ಅಪ್ಪನ ಧ್ವನಿಯೇ ಅನುರಣಿಸುತ್ತಿತ್ತು. ಹಿಂದನ ದಿನದ ಸ್ವರ್ಣಗೌರಿ ಪ್ರತಿಷ್ಠಾಪನೆ ಮಾತ್ರ ನಮ್ಮ ಮನೆಯಲ್ಲೇ. ಆ ದಿನ ಊರಿನವರೂ ಸೇರಿದಂತೆ ಸುತ್ತಣ ಹಳ್ಳಿಗಳಿಂದ ನವದಂಪತಿಗಳಾದಿಯಾಗಿ ಕುಟುಂಬಗಳು ಬಂದು

ಗೌರೀ ಪೂಜೆಯನ್ನು ಮಾಡಿಸಿಕೊಂಡು ಹೋಗುತ್ತಿದ್ದರು. ಇವುಗಳ ನಡುವೆ ನಾವೆಲ್ಲಾ ಪೆಟ್ಲಂಗೋವಿ ಎಂಬ ಉಪಕರಣದಿಂದ ಶ್ರೀಗಂಧದ ಕಾಯಿಗಳನ್ನು ಬಳಸಿ, ಸಿಡಿಸಿ, ಸದ್ದು ಮಾಡುವ ಸಂಭ್ರಮ, ಜೊತೆಗೆ ದೊಡ್ಡವರಿಂದ ಬೈಗುಳ. ಅವರಿವರ ಆಯವಾದ ಸ್ಥಳಗಳಿಗೆ ಢಾಂ ಎಂದು ಗಟ್ಟಿಯಾದ ಕಾಯಿ ಬಡಿದಾಗ ಹಾವಳಿಯೋ ಹಾವಳಿ! ಈ ಹಬ್ಬಗಳಲ್ಲದೆ, ವಿಪ್ರ ಕುಟುಂಬಗಳಿಗೇ ಪರಿಮಿತವಾದ ಅನಂತನ ವ್ರತ, ಭೀಮೇಶ್ವರ ವ್ರತ, ಬಲಿಪಾಡ್ಯಮಿ ಇವುಗಳ ಆಚರಣೆಯನ್ನು ಅಪ್ಪ, ಕ್ರಮ ತಪ್ಪದೆ ಮಾಡಿಸುತ್ತಿದ್ದರು.

ಇನ್ನು ಶ್ರಾದ್ಧ ದಿನಗಳಂದು ಬಂಧುಗಳ ಸಮಾವೇಶ. ಬೆಂಗಳೂರಿನಿಂದ ಇನ್ನಿತರ ಸ್ಥಳಗಳಿಂದ ನಮ್ಮ ದೊಡ್ಡಪ್ಪಂದಿರು, ಸೋದರತ್ತೆಯಂದಿರು, ಕೆಲವು ವೇಳೆ ಅವರ ಮಕ್ಕಳು ಸಹ ಬಂದಾಗ ಮನೆಯೆಲ್ಲಾ ಚಟುವಟಿಕೆಯ, ಸ್ವಾರಸ್ಯವಾದ ಹರಟೆಗಳ, ಸ್ವಾದಿಷ್ಟವಾದ ತಿಂಡಿಗಳ ಸಮಾರಾಧನೆಯೇ ನಡೆಯುತ್ತಿತ್ತು.

5. ಅಪ್ಪ ಹರಿಕಥೆಯನ್ನು ಹೇಗೆ ಕಲಿತರೋ ನೆನಪಿಲ್ಲ. ಕುಮಾರವ್ಯಾಸ ಭಾರತವಂತೂ ಅವರ ಹೃದಯದ ಭಾಗವೇ ಆಗಿತ್ತು. ಹಾರ್ಮೋನಿಯಂ ನುಡಿಸುತ್ತಾ ತಾರಸ್ಥಾಯಿಯಲ್ಲಿ 'ಅರಸುಗಳಿಗಿದು ವೀರ' ಎಂದರೆ ಸಾಕು, ಎಲ್ಲೋ ಇದ್ದು ಏನೋ ಮಾಡುತ್ತಿದ್ದ ನಾನು, ಅದನ್ನು ಹಾಗೇ ಬಿಟ್ಟು ಓಡಿಬಂದು ಅಪ್ಪನ ಜೊತೆಗೆ ಧ್ವನಿಗೂಡಿಸುತ್ತಿದ್ದೆ. ಅಪ್ಪನ ಗಮಕವಾಚನ ಹೆಸರುಘಟ್ಟ ಹೋಬಳಿಯಲ್ಲಿ ಪ್ರಸಿದ್ಧವಾಗಿತ್ತು. ಅಪ್ಪ ಸಭೆಯಲ್ಲಿದ್ದರೆ ಅವರಿಂದ ಪದ್ಯವಾಚನ ತಪ್ಪದೆ ನಡೆಯುತ್ತಿತ್ತು. ಆಗಾಗ ನನ್ನನ್ನೇ ಕೆಲವೆಡೆ ಕಳುಹಿಸುತ್ತಿದ್ದರು.

ಜಿ.ಪಿ. ರಾಜರತ್ನಂ ಅವರ ಮುಂದೆ ನಾವಿಬ್ಬರೂ ಕಾವ್ಯವಾಚನ ಮಾಡುವ ಭಾಗ್ಯ ಒದಗಿತ್ತು. ಹಾಗೆಯೆ ದೇವರಾಜ ಅರಸ್ ಅವರ ಒಂದು ಸಭೆಯಲ್ಲೂ ಸ್ವಾಗತ ಪದ್ಯಗಳನ್ನು ಷಟ್ಪದಿಯಲ್ಲಿ ರಚಿಸಿ ಇಬ್ಬರೂ ಹಾಡಿದ್ದೆವು. ಆದರೆ ಹರಿಕಥೆ ಎಂಬ ಪ್ರಕ್ರಿಯೆ ಆಗ್ಗೆ ಬಹಳ ಪ್ರಸಿದ್ಧವಾದ ರಂಜಕ ಕಲೆ. ಟಿವಿ, ಸಿನೆಮಾ ಸುಳಿವಿಲ್ಲದ, ಗ್ರಾಮೀಣ ಜೀವನದಲ್ಲಿ ಎಂದೋ ವರ್ಷಕ್ಕೊಮ್ಮೆ ಆಡುವ ಬಯಲಾಟ ಬಿಟ್ಟರೆ ಹರಿಕಥೆಯೇ

ಜನಪ್ರಿಯವಾಗಿತ್ತು. ಅಪ್ಪ 'ಚಿಟಿಕೆ' ನುಡಿಸಿ ಲಯವನ್ನು ಗಣಿಸುತ್ತಾ, ರಾಗಯುಕ್ತವಾಗಿ ವಚನವನ್ನೂ, ಸ್ವಾರಸ್ಯಕರವಾಗಿ ಉಪಕಥೆಗಳನ್ನೂ ಹೇಳುತ್ತಿದ್ದರೆ ಹಳ್ಳಿಯ ಸಮಸ್ತ ಆಬಾಲವೃದ್ಧರೂ ತದೇಕಚಿತ್ತದಿಂದ ಕೇಳುತ್ತಿದ್ದರು. ಆರೇಳು ಗಂಟೆಗಳ ಕಾರ್ಯಕ್ರಮ ಮುಗಿಯುತ್ತಿದ್ದುದು ಮುಂಜಾನೆಗೇ. ಹರಿಕಥೆ ಎಂಬುದು ಸಕಲ ಕಲೆಗಳ ಸಮಾಹಾರ ಎಂದು ಪ್ರತ್ಯಕ್ಷವಾಗಿಯೇ ಕಾಣಬಹುದಾಗಿತ್ತು.

ಅಪ್ಪ ತನ್ನ ಕಾವ್ಯವ್ಯಾಸಂಗಗಳಿಂದ ತಾವೇ ಹತ್ತಾರು ಹರಿಕಥೆಗಳನ್ನು ರಚಿಸಿ ಪ್ರಯೋಗಿಸುತ್ತಿದ್ದರು. ಅವುಗಳಲ್ಲಿ ಮುಖ್ಯವಾದವು; ಭೀಷ್ಮ ಪ್ರತಿಜ್ಞೆ, ಶಬರ ಶಂಕರ ವಿಲಾಸ, ಸತೀ ಅನುಸೂಯ, ದಾನವೀರ ಕರ್ಣ, ವಿರಾಟ ಪರ್ವ, ಸೀತಾಕಲ್ಯಾಣ ಇತ್ಯಾದಿ. ಅಪ್ಪನ ಕಂಠ ತಾರಸ್ಥಾಯಿ ಪ್ರಧಾನವಾಗಿಯೇ ನುಡಿಯುತ್ತಿತ್ತು. ಧ್ವನಿವರ್ಧಕಗಳಿಲ್ಲದ ಆ ಕಾಲದಲ್ಲಿ ಹಿಂದೆ ಕುಳಿತ ಶ್ರೋತೃಗಳಿಗೂ ಕೇಳಿಸಬೇಕಾದ ಅಗತ್ಯವೇ ತಾರಸ್ಥಾಯಿ ಪ್ರಧಾನ ಗಾಯನಕ್ಕೆ ಕಾರಣ. ನೆರೆಯೂರಿನಲ್ಲಿ ಹರಿಕಥೆ ನಡೆಯುತ್ತಿದ್ದರೆ, ನಮ್ಮೂರಿನ ಕೆರೆಯ ದಂಡೆಯ ಮೇಲೆ ಕುಳಿತು ಕೇಳಿಸಿಕೊಂಡ ನೆನಪಿದೆ.

ಹರಿಕಥೆಯ ದಿನ ಶ್ವೇತ ವರ್ಣದ ಜುಬ್ಬಾ, ಕಚ್ಚೆ ಪಂಚೆ ಶಲ್ಯವನ್ನು ಇದ್ದಿಲಿನ ಐರನ್ ಬಾಕ್ಸ್‌ನಿಂದ ಗರಿಗರಿಯಾಗಿ ಇಸ್ತ್ರಿ ಮಾಡಿ ಸಂಜೆ ಸುಮಾರು ನಾಲ್ಕು ಗಂಟೆಗೆಲ್ಲ ಸಿದ್ಧವಾಗುತ್ತಿದ್ದರು. ಆಗ ಆಗಮಿಸುತ್ತಿದ್ದವರು ಅಪ್ಪನಿಗೆ ಶಾಶ್ವತ ತಬಲಾ ಸಾಥಿ ಕಾಕೋಳು ನಾರಾಯಣರಾವ್. ಹಾರ್ಮೋನಿಯಂ ವಾದಕ ಹರಿಕಥೆಯ ಸ್ಥಳಕ್ಕೇ ಬಂದು ಸೇರುತ್ತಿದರು. ಅವರ ಎಲ್ಲಾ ಹರಿಕಥೆಗಳನ್ನೂ ಜೊತೆಯಲ್ಲಿದ್ದು ಕೇಳುವ ಅವಕಾಶ ಆಗಾಗ ನನಗೂ ಒದಗುತ್ತಿತ್ತು. ಅಪ್ಪನ ಹರಿಕಥೆಗಳು ಬೆಂಗಳೂರಿನ ಹಲವು ಗಣೇಶೋತ್ಸವಗಳಲ್ಲೂ ನಡೆಯುತ್ತಿದ್ದವು.

ಉತ್ಸಾಹ, ಅಭಿಮಾನ, ಪ್ರೀತಿ ಮತ್ತು ಭಾವುಕತೆಯಿಂದ ಬಂಧುಗಳಿಗೆ ಪರಮಾಪ್ತರಾಗಿದ್ದದ್ದು, ಸೇವಾಭಾವ, ಕಾರ್ಯ ನಿಷ್ಠೆ, ಗ್ರಾಮೀಣ ಪರಿಸರಕ್ಕೆ ಸಂಸ್ಕೃತಿಯನ್ನು ಸಮನ್ವಯಿಸಿದ ಉಪಾಧ್ಯಾಯ ವೃತ್ತಿಯನ್ನು ನಿರ್ವಹಿಸಿದ್ದು, ಜನರ ಹಿತೈಷಿಯಾಗಿ ಮತಭೇದವಿಲ್ಲದೆ ಸೇವಾದೃಷ್ಟಿಯಿಂದ ಸಾಗಿಸಿದ ಪೌರೋಹಿತ್ಯ, ತಾವು ಸಾಗುವಳಿ ಮಾಡುತ್ತಿದ್ದ ಹತ್ತಾರು ಎಕರೆ ತರಿ ಮತ್ತು

ಖುಷ್ಕಿ ಜಮೀನನ್ನು, 'ಉಳುವವನಿಗೇ ಭೂಮಿ' ಎಂಬ ಕಾಯ್ದೆ ನುಂಗಿದರೂ ಧೃತಿಗೆಡದೆ ಸ್ವಂತದ ಜಮೀನನ್ನೂ ವಿಕ್ರಯಿಸಿ ಹುಲ್ಲುಮೆದೆಯ ವೀರಭದ್ರನ ಗುಡಿಯ ಜೀರ್ಣೋದ್ಧಾರ ಮಾಡಿಸಿದ್ದು, ಹೀಗೆ ಜೀವನೋತ್ಸಾಹ, ದಾತೃತ್ವ, ನಾಯಕತ್ವ, ಕಾವ್ಯಪ್ರೇಮ, ಸಹೃದಯತೆ, ಶ್ರೀಮಂತ ಕಂಠದ ಗಾನ ಮತ್ತು ವಾಗ್ಝರಿ ಇವು ನನ್ನ ಬಾಳಿನ ಸ್ಫೂರ್ತಿಯ ಬತ್ತದ ಚಿಲುಮೆಗಳು. ಅಪ್ಪನ ಆದರ್ಶದ ಎತ್ತರ, ನನಗೆಂದಿಗೂ ಏರಲಾಗದ ಶಿಖರ. ಅವರ ಸಂಸ್ಮರಣೆ, ಹತಾಶೆಗಳನ್ನು ಹತ್ತಿಕ್ಕುವ ಸ್ಫೂರ್ತಿ ತೀರ್ಥ.

ಅದ್ವೈತ–ಆದಿಶಂಕರ–ವೇದಾಂತ ಈ ವಿಚಾರಗಳನ್ನು ಅಪ್ಪ ಹಾಸಿಗೆ ಹಿಡಿಯುವ ಮುಂಚಿನ ವರ್ಷಗಳಲ್ಲಿ ಆಗಾಗ ಚರ್ಚಿಸಿದ್ದುಂಟು. ರಮಣ ಮಹರ್ಷಿಗಳ 'ಸದ್ದರ್ಶನ'ದ ನನ್ನ ಕನ್ನಡದ ಅನುವಾದವನ್ನು ಅವರು ನೋಡಿದ್ದರು. ಈಚೆಗೆ ಕುವೆಂಪು ಭಾಷಾಭಾರತಿ ಪ್ರಕಟಿಸಿದ 'ಮಂಕುತಿಮ್ಮನ ಮಿನುಕು' ತೆಲುಗು ಪದ್ಯಾನುವಾದವನ್ನು ನನ್ನ ತಂದೆಯವರಿಗೇ ಅರ್ಪಿಸಲು ಶತಾವಧಾನಿ ಗಣೇಶರು ಸೂಚಿಸಿದ್ದರು. ಆದರೆ ಸರ್ಕಾರಿ ಪ್ರಕಟನ ಸಂಸ್ಥೆಯಲ್ಲಿ ಗ್ರಂಥಾರ್ಪಣೆಯ ಅವಕಾಶ ಇರಲಿಲ್ಲ. ಅಪ್ಪ ಇಂದು ಇದ್ದಿದ್ದರೆ ಈ 'ಅದ್ವೈತ ವಿಜ್ಞಾನ ಸಾರ'ವನ್ನು ಇಷ್ಟಪಡುತ್ತಿದ್ದರೆಂದು ನನ್ನ ಭಾವನೆ. ಪುಸ್ತಕ ಪುಟ್ಟದು. ಒಳಗಿನ ವಿಚಾರ ಸಾಗರೋಪಮವಾದದ್ದು. ಇದರಿಂದ ಪ್ರಾರಂಭಿಕ ಸಾಧಕರಾದ ಓದುಗರಿಗೆ ಅದ್ವೈತದ ಬಗ್ಗೆ ಸ್ಪಷ್ಟವಾದ ಮನವರಿಕೆ ಆದೀತು. ಅವಿಸ್ಮರಣೀಯರಾದ ಪೂಜ್ಯ ತಂದೆಯವರ ನೂರನೆಯ ಹುಟ್ಟುಹಬ್ಬದ ನೆನಪಿಗಾಗಿ ಈ ಹೊತ್ತಗೆ ಸಮರ್ಪಿತ.

–ಎಂ.ಆರ್. ಚಂದ್ರಮೌಳಿ

ಬ್ರಹ್ಮಶ್ರೀ ಯಲ್ಲಮರಾಜು ಶ್ರೀನಿವಾಸರಾವು



ಬ್ರಹ್ಮಶ್ರೀ ಯಲ್ಲಮರಾಜು ಶ್ರೀನಿವಾಸರಾಯರು ಆಂಧ್ರದ ಪ್ರಕಾಶಂ ಜಿಲ್ಲೆಯ ಮಾರ್ಕಾಪುರದಲ್ಲಿ ಶ್ರೀಮತಿ ಸೀತಮ್ಮ ಮತ್ತು ಶ್ರೀ ಸುಂದರರಾವ್ ದಂಪತಿಗಳಿಗೆ ಜನಿಸಿದರು (15.06.1927–19.02.2015).

ಆಂಧ್ರ ವಿಶ್ವವಿದ್ಯಾನಿಲಯಗಳಲ್ಲಿ ತೆಲುಗು ಅಧ್ಯಾಪಕರಾಗಿ, ಪ್ರಧಾನೋಪಾಧ್ಯಾಯರಾಗಿ ಕಾರ್ಯ ನಿರ್ವಹಿಸುತ್ತಲೇ, ಸಾಹಿತ್ಯ–ವೇದಾಂತೋಪನ್ಯಾಸಗಳನ್ನೂ ನಡೆಸಿಕೊಡುತ್ತಿದ್ದರು.

ನಿವೃತ್ತರಾದನಂತರ ಹೈದರಾಬಾದಿನಲ್ಲಿದ್ದು, ಉಪನಿಷತ್ತುಗಳು, ಬ್ರಹ್ಮಸೂತ್ರ, ಭಗವದ್ಗೀತೆಯನ್ನು ಕುರಿತು ಹೃದಯಂಗಮವಾಗಿ ಪ್ರವಚನ ಮಾಡುತ್ತಾ ಅನೇಕ ಮಂದಿ ಶಿಷ್ಯರಿಗೆ ಮಾರ್ಗದರ್ಶಕರಾದರು. ಸ್ವಲ್ಪ ಕಾಲದ ನಂತರ ವಿಜಯವಾಡದಲ್ಲಿ ನೆಲಸಿ, ಅಲ್ಲಿ ಪ್ರಸ್ಥಾನತ್ರಯ ಶಂಕರ ಭಾಷ್ಯವಲ್ಲದೆ, ಮಾನಸೋಲ್ಲಾಸ, ವೇದಾಂತ ಪಂಚದಶಿ, ತ್ರಿಪುರಾರಹಸ್ಯಾದಿ ಅನೇಕ ವೇದಾಂತ ಪ್ರಕರಣ ಗ್ರಂಥಗಳನ್ನು ಶಾಂಕರಾದ್ವೈತ ದೃಷ್ಟಿಯಿಂದ ಸಮನ್ವಯ ಮಾಡುತ್ತಾ ಶುದ್ಧಾದ್ವೈತ ಜ್ಞಾನ ಪ್ರಸರಣಕ್ಕೆ ಕಾರಣರಾದರು.

ವೇದಾಂತ ಗ್ರಂಥಗಳೇ ಅಲ್ಲದೆ, ಲಲಿತಾ ಸಹಸ್ರನಾಮ, ವಿಷ್ಣು ಸಹಸ್ರನಾಮ ಮುಂತಾದ ಉಪಾಸನಾ ಗ್ರಂಥಗಳನ್ನೂ ಅದ್ವೈತ ಪರವಾಗಿ ಸಮನ್ವಯಿಸಿ, ರಾಯರು ತಮ್ಮ ಪ್ರವಚನ ಮತ್ತು ಗ್ರಂಥರಚನೆಗಳ ಮೂಲಕ ಅದ್ವೈತದ ನಿತ್ಯಾನುಸಂಧಾನ ಮಾಡಿದ ಮಹನೀಯರು. 60 ವರ್ಷಗಳಷ್ಟು ದೀರ್ಘ ಕಾಲ ತಮ್ಮ ಅನುಭವಗಮ್ಯವಾದ ವೇದಾಂತ ಪ್ರವಚನಗಳಿಂದ ಶ್ರುತಿ–ತರ್ಕ–ಅನುಭವಗಳನ್ನೇ ಪ್ರಮಾಣವಾಗಿರಿಸಿಕೊಂಡು ಅದ್ವೈತಾನುಭವವನ್ನು, ತಮ್ಮ ಅಪೂರ್ವವಾದ ಬೋಧನಾ ರೀತಿಯಿಂದ ಅತ್ಯಂತ ಪರಿಣಾಮಕಾರಿಯಾಗಿ ಸರಳವಾಗಿ ಬಿಡಿಸಿಟ್ಟು, ಬ್ರಹ್ಮಾನುಭವವನ್ನು ಆ ಕ್ಷಣದಲ್ಲಿ ಕೇಳುಗರಿಗೆ ಲಭಿಸುವಂತೆ ಮಾಡುತ್ತಿದ್ದರೆಂದು ಅವರ ಶಿಷ್ಯರಲ್ಲೇನಕರು ಹೇಳಿದ್ದನ್ನು ಕೇಳಿದ್ದೇನೆ.

ಅದ್ವೈತ ವಿಚಾರ, ಅಧ್ಯಯನ, ಪ್ರವಚನ, ಗ್ರಂಥ ರಚನೆಯೇ ಜೀವನ ಧ್ಯೇಯವಾಗಿದ್ದು, ಪ್ರಚಾರಕ್ಕೆ ದೂರವಾಗಿ, ಸಾಧನೆಯನ್ನು ಸಾಗಿಸಿದ ಸಿದ್ಧಪುರುಷರು ಯಲ್ಲಮರಾಜು ಶ್ರೀನಿವಾಸರಾಯರು.

ಈಗಲೂ ನೂರಾರು ಗಂಟೆಗಳ ಅವರ ಪ್ರವಚನಗಳು ಅಂತರ್ಜಾಲದಲ್ಲಿ ಲಭ್ಯ. ಬ್ರಹ್ಮಸೂತ್ರ ಭಾಷ್ಯವನ್ನು ಕುರಿತು ಒಮ್ಮೆ ಅವರು ಮಾಡಿರುವ 192 ಉಪನ್ಯಾಸಗಳಲ್ಲಿ ಅವರ ಅದ್ವೈತ ದರ್ಶನ, ಸಾಧನೆ ಮತ್ತು ಜೀವನ್ಮುಕ್ತ ದೃಷ್ಟಿಯನ್ನು ಕಾಣಬಹುದು.

ಖಂಡಿತವಾದಿಯಾದ ರಾಯರು ಸತ್ಯವನ್ನಷ್ಟೇ ಒಪ್ಪಿ ಸತ್ಯದೂರವಾದ, ತರ್ಕದೂರವಾದ, ಅನುಭವಕ್ಕೆ ಒಗ್ಗದ ಯಾವ ಬೋಧನೆಗಳನ್ನೂ ಒಪ್ಪಿದವರಲ್ಲ. ತೆಲುಗು, ಸಂಸ್ಕೃತ, ಆಂಗ್ಲವಲ್ಲದೆ ಉರ್ದು ಪರ್ಷಿಯನ್ ಮುಂತಾದ ಭಾಷೆಗಳಲ್ಲೂ ಪಾಂಡಿತ್ಯವನ್ನು ಗಳಿಸಿದ್ದ ರಾಯರು, ಅದ್ವೈತದೊಡನೆ, ಬೈಬಲ್, ಖುರಾನ, ದ್ವೈತ, ವಿಶಿಷ್ಟಾದ್ವೈತ ತತ್ತ್ವಗಳನ್ನೂ ನಿಕಷಕ್ಕಿಟ್ಟು ವೇದಾಂತದ ಔನ್ನತ್ಯವನ್ನು, ವೈಜ್ಞಾನಿಕ ವಿಧಾನವನ್ನು, ಅನುಭವೈಕ ಪ್ರಮಾಣದಿಂದ ಹೃದಯಂಗಮವಾಗಿ ವಿವರಿಸಿರುವುದನ್ನು ಕೇಳುವುದೇ ಒಂದು ಮಹಾಯೋಗ.

ಇವರ ಪ್ರವಚನಗಳಲ್ಲಿನ ಮುಖ್ಯ ವೈಶಿಷ್ಟ್ಯವೆಂದರೆ ಅದ್ವೈತದ ಒಂದು ಅಂಶವನ್ನೋ, ಪ್ರಶ್ನೆಯನ್ನೋ ತೆಗೆದುಕೊಂಡು ಅದಕ್ಕೆ ಶಂಕರರ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಎಲ್ಲೆಲ್ಲೋ ಅಡಗಿರುವ ಭಾಷ್ಯವಾಕ್ಯಗಳಿಂದ ಸಮರ್ಪಕವಾದ ಉತ್ತರವನ್ನು ತರ್ಕಬದ್ಧವಾಗಿ ನೀಡಿ ತತ್ತ್ವ ನಮ್ಮಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆಯೂರುವಂತೆ ಮಾಡುವುದು. ನಾನು ಬಲ್ಲಂತೆ ಅವರ ವೇದಾಂತ ಪ್ರವಚನಗಳು ಸಾರ್ವಜನಿಕರಿಗೆ ಮುಕ್ತವಾಗಿ ಎಂದೂ ನಡೆಯಲಿಲ್ಲ. ವೇದಾಂತ ಸಾಧಕರನ್ನು ಗುರುತಿಸಿ, ಆಸಕ್ತಿಯೋ, ಕಾಲಕ್ಷೇಪವೋ ಇಲ್ಲವೆ ನಿಜವಾದ ಜಿಜ್ಞಾಸೆಯ ಅಧಿಕಾರಿಭೇದವನ್ನು ಪರಿಗಣಿಸಿ, ಸೂಕ್ತರಾದವರಿಗೆ ಮಾತ್ರ ಅವರ ಸಭೆಗಳಿಗೆ ಪ್ರವೇಶ ನೀಡುತ್ತಿದ್ದರು. ಶುದ್ಧಾದ್ವೈದತ ಬಗ್ಗೆ ಅರಿವೇ ಇಲ್ಲದೆ, ವಾಕ್ಚಾತುರ್ಯದಿಂದ ಖ್ಯಾತರಾದವರನ್ನು ನೇರವಾಗಿಯೇ ವಿಮರ್ಶಿಸಿ, ಬಾಬಾಗಳ, ಮಠಾಧಿಪತಿಗಳ, ಮತ ಪ್ರಚಾರಕರ ಜ್ಞಾನದ ಜೊಳ್ಳುತನವನ್ನು ಗಾಳಿಯಲ್ಲಿ

ತೂರಿ ತೋರಿಸಿ, ವೈಜ್ಞಾನಿಕ ಮನೋಭಾವದಿಂದ, ಶಾಸ್ತ್ರ ಶ್ರದ್ಧೆಯನ್ನು ಸ್ವಲ್ಪವೂ ಸಡಿಲಿಸದೆ, ತರ್ಕ ಮತ್ತು ಸಾರ್ವತ್ರಿಕಾನುಭವಗಳ ಬೆಳಕಿನಲ್ಲೇ ಶ್ರೀನಿವಾಸರಾಯರ ವಿಶ್ಲೇಷಣಾತ್ಮಕ ಪ್ರವಚನಗಳು ನಡೆದವು.

'ಜಗದ್ಗುರು ಮಹೋಪದೇಶಮು' 'ಪ್ರಸ್ಥಾನತ್ರಯ ಸಾರಮು', 'ಭಗವದ್ಗೀತಾ ಸರ್ವಸ್ವಮು', ಅದ್ವೈತ ಪಂಚಾಯತನಮು, ವೇದಾಂತ ಪರಿಭಾಷಾ ವಿವರಣಮು, ರಾಮಗೀತ, ಶ್ರೀ ಸೂಕ್ತ–ಪುರುಷ ಸೂಕ್ತ ಮಂತ್ರಪುಷ್ಪ ರಹಸ್ಯಾರ್ಥಮು, ಸಾಧಕ ಗೀತ, ಮುಂತಾದ ತೆಲುಗು ಗ್ರಂಥಗಳಲ್ಲದೆ, ಅದ್ವೈತಾನುಭವಃ, ಅದ್ವೈತಾಮೃತ ಸಾರಃ, ಸರ್ವಾತ್ಮ ಭಾವಃ, ಶಂಕರಾದ್ವೈತ ದರ್ಶನಮ್ ಮುಂತಾದ ಸಂಸ್ಕೃತ ಪ್ರೌಢಗ್ರಂಥಗಳನ್ನು ಅವರು ರಚಿಸಿದ್ದಾರೆ. ಕವಿ ಸಾಮ್ರಾಟ್ ವಿಶ್ವನಾಥ ಸತ್ಯನಾರಾಯಣರಂಥವರ ಸ್ನೇಹವನ್ನುಂಡ ಶ್ರೀನಿವಾಸರಾಯರು ಅಪೂರ್ವವಾದ ಸಾಹಿತ್ಯಕೃತಿಗಳನ್ನೂ ಲೋಕಾರ್ಪಣೆ ಮಾಡಿದ್ದಾರೆ.

ಅವುಗಳಲ್ಲಿ ಪ್ರಮುಖವಾದವು – ರಾಮಾಯಣ ರಮಣೀಯಕಮು, ಮಹಾಭಾರತ ವೈಭವಮು, ಶ್ರೀಮತ್ ಭಾಗವತ ಸಾಮ್ರಾಜ್ಯಮು, ಕಾಳಿದಾಸ ಪ್ರತ್ಯಭಿಜ್ಞ, ವಿಚಿತ್ರ ತರಂಗಿಣಿ ಮೊದಲಾದುವು.

'ವೇದಾಂತ ವಿಜ್ಞಾನ ಸಾರ' ಶ್ರೀನಿವಾಸರಾಯರ ಕಿರುಹೊತ್ತಗೆಗಳಲ್ಲೊಂದು. ಅದ್ವೈತ ವೇದಾಂತವನ್ನು ಒಂದು ವಿಜ್ಞಾನವೆಂದೇ ತೋರಿಸಿಕೊಟ್ಟು, ಉಪನಿಷದ್ರಹಸ್ಯಗಳನ್ನೆಲ್ಲಾ ಒಂದು ಕ್ರಮವಾಗಿ ಅನುಭವಕ್ಕೆ ಒದಗುವಂತೆ, ಬುದ್ಧಿಗೆ ಹೊಳೆಯುವಂತೆ ಈ ಪುಟ್ಟ ಗ್ರಂಥದಲ್ಲಿ ಪ್ರಾರಂಭಿಕ ಸಾಧಕರಿಗಾಗಿ ಕಟ್ಟಿಕೊಟ್ಟಿದ್ದಾರೆ. ಯಲ್ಲಮರಾಜು ಶ್ರೀನಿವಾಸರಾಯರ ಎಲ್ಲಾ ಗ್ರಂಥಗಳನ್ನೂ, ಪ್ರವಚನಗಳನ್ನೂ ಅಂತರ್ಜಾಲಾದಲ್ಲಿ ಸ್ಥಾಪಿಸಿ ನಿರ್ವಹಿಸುತ್ತಿರುವ ಶ್ರೀ ಸುಧಾಕರ್ ಅವರ ಕೋರಿಕೆಯಂತೆ ಮತ್ತು ಈ ಗ್ರಂಥ ನಮ್ಮ ಸಾಧಕಜನಕ್ಕೆ ಉಪಯೋಗವಾದೀತೆಂಬ ದೃಷ್ಟಿಯಿಂದ ಕನ್ನಡಿಸಲಾಗಿದೆ.

–ಎಂ.ಆರ್. ಚಂದ್ರಮೌಳಿ

ಪರಿವಿಡಿ

ಅದ್ವೈತ ವಿಜ್ಞಾನ ಸಾರ

ಸೃಷ್ಟಿಯಲ್ಲಿ ಮಾನವ ವಿಶಿಷ್ಟ. ಮಾನವನಲ್ಲಿ ಜ್ಞಾನ ಉತ್ತಮವಾದದ್ದು. ಜ್ಞಾನದಲ್ಲಿ ಅದ್ವೈತ ವಿಜ್ಞಾನ ಉತ್ತಮೋತ್ತಮ. ಅದ್ವೈತ, ದ್ವೈತ ಎರಡೂ ಅವಳಿ ಸೋದರರಂತೆ ಪ್ರತಿ ಪದಾರ್ಥದಲ್ಲೂ ಜೋಡಿಯಾಗಿ ಪ್ರತ್ಯಕ್ಷವಾಗುತ್ತವೆ. ಸಾಮಾನ್ಯಜ್ಞಾನ ಅದ್ವೈತವಾದರೆ, ವಿಶೇಷಜ್ಞಾನ ದ್ವೈತ. ಸಾಮಾನ್ಯಕ್ಕೆ ಕಾರಣವೆಂದು ಹೆಸರು. ಅದರಿಂದ ಮೂಡಿಬಂದ ವಿಶೇಷವೇ ಕಾರ್ಯ. ಕಾರಣವೇ ಕಾರ್ಯಕ್ಕೆ ಮೂಲಪದಾರ್ಥ. ಕಾರ್ಯಗಳು ಅನೇಕವಾದರೆ ಅವಕ್ಕೆ ಕಾರಣ ಈ ಸಾಮಾನ್ಯವೆಂಬ ಏಕ. ಏಕವಾದ ಸಾಮಾನ್ಯವೇ ಅನೇಕವಾಗಿ ತೋರುವ ವಿಶೇಷಗಳನ್ನೆಲ್ಲ ವ್ಯಾಪಿಸಿದೆ. ಈ ವ್ಯಾಪ್ತಿಗೇ ಅನ್ವಯವೆಂದೂ ಅನುವೃತ್ತಿಯೆಂದೂ ಹೆಸರು. ಇದಕ್ಕೆ ಭಿನ್ನವಾಗಿ ವಿಶೇಷಗಳು ಎಲ್ಲಿಗಲ್ಲಿಗೆ ಒಂದಕ್ಕೊಂದು ಭಿನ್ನವಾಗಿ ತೋರುವುದರಿಂದ ಇವಕ್ಕೆ ವ್ಯತಿರೇಕ, ವ್ಯಾವೃತ್ತಿ ಎಂದು ಹೆಸರಿಟ್ಟರು. ವ್ಯಾಪಕವಾದ್ದರಿಂದ ಇರುವ ಪದಾರ್ಥ ನಿಜಕ್ಕೂ ಸಾಮಾನ್ಯವೇ. ಅದಕ್ಕೆಂದೇ ಅದನ್ನು ವಸ್ತುವೆಂದರು. ವಸ್ತುವೆಂದರೆ ಯಾವುದಿದೆಯೋ ಅದು. ಈ ವಸ್ತುವೇ ಸಾಮಾನ್ಯ. ಆ ಇರುವ ಒಂದು ವಸ್ತುವೇ ನಮ್ಮ ಸ್ವಭಾವದಿಂದಲೋ ಅಜ್ಞಾನದಿಂದಲೋ ವಿಶೇಷರೂಪದಿಂದ ಭಾಸಿಸುತ್ತಿದೆ. ಇದನ್ನೇ ಆಭಾಸ ಎಂದು ವ್ಯವಹರಿಸುತ್ತಾರೆ. ವಿಶೇಷಗಳೆಲ್ಲ ಸಾಮಾನ್ಯಕ್ಕೆ ಸಂಬಂಧಿಸಿದ ಆಭಾಸಗಳೇ. ಅಷ್ಟುಮಾತ್ರಕ್ಕೆ ಆಭಾಸ ಎಂಬುದು ತನ್ನ ಪಾಡಿಗೆ ತಾನು ಸ್ವತಂತ್ರವಾಗಿರುವ ಒಂದು ಪದಾರ್ಥವೆಂದು ಭಾವಿಸಬಾರದು. ಸ್ವತಃಸ್ಸಿದ್ಧವಾದ ಸಾಮಾನ್ಯರೂಪ ವಸ್ತುವೇ, ಸಾಮಾನ್ಯವಾಗಿರುತ್ತಾ ವಿಶೇಷ ರೂಪವಾಗಿಯೂ ಭಾಸಿಸುತ್ತದೆ. ಇದು ಸಾಮಾನ್ಯ ರೂಪವಾಗಿ ಮಾತ್ರ ಸತ್ಯ. ವಿಶೇಷ ರೂಪವಾಗಿ ಸತ್ಯವಲ್ಲ, ಅನೃತ. ನಿದರ್ಶನಕ್ಕಾಗಿ ಘಟಶರಾವಾದಿಗಳನ್ನು ಸಾಮಾನ್ಯ ರೂಪವಾದ ಮೃತ್ತಿಕೆಯಾಗಿ ನೋಡಿದಾಗಲೇ ಸತ್ಯವಲ್ಲದೆ, ಮಣ್ಣನ್ನು ಹೊರತಪಡಿಸಿ ಮಡಕೆ ಅದರಪಾಡಿಗೆ ಅದು ಇದೆ ಎಂದು ಎಷ್ಟು ಭಾವಿಸಿದರೂ ಅಸತ್ಯವೇ.

ಲೋಕದಲ್ಲಿನ ಎಲ್ಲ ಪದಾರ್ಥಗಳ ಸಂಗತಿಯೂ ಇಷ್ಟೇ. ಸಾಮಾನ್ಯ–ವಿಶೇಷಾತ್ಮಕವಾಗಿ ತೋರಿಕೊಳ್ಳುವುದು. ವಿಚಿತ್ರವೆಂದರೆ ಈ ಸಾಮಾನ್ಯ ವಿಶೇಷಗಳ ಅನುಕ್ರಮ ಒಂದು ಕಡೆ ನಿಂತುಹೋಗುವಂಥದ್ದಲ್ಲ. ಪ್ರತಿಯೊಂದೂ ಕೆಳಸ್ತರದ ವಸ್ತುವಿಗೆ ಸಾಮಾನ್ಯವೆನಿಸಿದರೆ, ಮೇಲಿನ ಸ್ತರದ ವಸ್ತುವಿಗೆ ವಿಶೇಷವೆನಿಸುತ್ತದೆ. ಘಟಶರಾವಾದಿಗಳ ದೃಷ್ಟಿಯಿಂದ ಪೃಥ್ವಿ ಸಾಮಾನ್ಯವಾದರೆ ಮಹಾಭೂತಗಳ ದೃಷ್ಟಿಯಿಂದ ಅದು ವಿಶೇಷ. ಕಾರಣವು ಸಾಮಾನ್ಯವಾದಾಗ ಕಾರ್ಯವು ಅದಕ್ಕೆ ವಿಶೇಷ ಎಂದಲ್ಲವೆ ಮೊದಲಿಗೆ ಹೇಳಿದ್ದು? ಇದನ್ನು ಆಧರಿಸಿ ಪೃಥ್ವಿಯೂ ಸಹ ಜಲವೆಂಬ ಭೂತದ ಕಾರ್ಯ. ತೇಜಸ್ಸಿನ ದೃಷ್ಟಿಯಿಂದ ಜಲ ವಿಶೇಷವಾಗುತ್ತದೆ. ಹಾಗೆಯೇ ವಾಯು ಸಹಾ ಆಕಾಶಕ್ಕೆ ವಿಶೇಷವಾಗುತ್ತದೆ.

ಇನ್ನು ಆಕಾಶ ಯಾವುದಕ್ಕೂ ವಿಶೇಷವಲ್ಲ ಎಂದು ನಮಗೆ ಅನಿಸಬಹುದು. ಆದರೆ ಅದೂ ಸಹ ಒಂದು ಕಾರಣಕ್ಕೆ ಕಾರ್ಯವೇ. ಆ ಕಾರಣ ಮತ್ತಾವುದೋ ಅಲ್ಲ, ಆಕಾಶಕ್ಕೆ ಸಾಕ್ಷಿಯಾದ ಚೈತನ್ಯವೇ. ಚೈತನ್ಯವು, ಇದು 'ಆಕಾಶ' ಎಂದು ಗುರುತಿಸಿದಾಗಲೇ ಆಕಾಶಕ್ಕೆ ಅಸ್ತಿತ್ವ ಬರುವುದು. ಆದ್ದರಿಂದ ಉಳಿದ ಭೂತಗಳಂತೆಯೇ ಆಕಾಶಕ್ಕೂ ಸಹ ಸ್ವತಂತ್ರವಾದ ಅಸ್ತಿತ್ವವಿಲ್ಲ. ಸ್ವತಃಸ್ಸಿದ್ಧವಾದದ್ದು ಚೈತನ್ಯವೊಂದೇ. ಅದು ತನಗೆ ತಾನಿದ್ದೇನೆಂದು ಭಾವಿಸುತ್ತಾ ತಾನು ಗ್ರಹಿಸುವ ಮಿಕ್ಕ ಪದಾರ್ಥಗಳೆಲ್ಲವನ್ನೂ ಇದೆ, ಇದೆ ಎಂದು ಗ್ರಹಿಸುತ್ತಿದೆ. ಈ ಸ್ವತಃ ಪ್ರಮಾಣ ಚೈತನ್ಯವೇ ಮಾಹಾಸಾಮಾನ್ಯ. ಅದಕ್ಕೆ ಅತೀತವಾದದ್ದು ಯಾವುದೂ ಇಲ್ಲವಾದ್ದರಿಂದ ಅದು ಯಾವುದಕ್ಕೂ ವಿಶೇಷವಲ್ಲ. ಮೇಲಾಗಿ ಚೈತನ್ಯದಿಂದಲೇ ಆಕಾಶಾದಿಯಾದ ಕಾರ್ಯಗಳೆಲ್ಲ ಏರ್ಪಡಬೇಕಾದ್ದರಿಂದ ಎಲ್ಲವೂ ಅದರ ವಿಶೇಷಗಳೇ. ಎಂದರೆ ಸಾಮಾನ್ಯ ವಿಶೇಷ ರೂಪದಿಂದ ವಿಭಕ್ತವಾಗಿ ತೋರುವ ಪ್ರಪಂಚವೆಲ್ಲಾ ಚೈತನ್ಯದ ದೃಷ್ಟಿಯಿಂದ ವಿಶೇಷವೇ. ಎಲ್ಲವನ್ನೂ ಸೇರಿಸಿ ಅದೇ ಏಕೈಕವಾದ ಕಾರಣವಾದ್ದರಿಂದ ಮೂಲಕಾರಣವೆಂದೂ, ಸಾಮಾನ್ಯವಾದ್ದರಿಂದ ಮಹಾಸಾಮಾನ್ಯವೆಂದೂ ವೇದಾಂತದ ಪರಿಭಾಷೆ.

ಜ್ಞಾನಕ್ಕೆ ಪ್ರಮಾಣ ?

ಮಿಕ್ಕವೆಲ್ಲಾ ಸ್ವತಃಸಿದ್ಧವಲ್ಲ, ಚೈತನ್ಯವೊಂದೇ ಸ್ವತಃಸಿದ್ಧ ಎಂದು ಹೇಗೆ ನಿರೂಪಿಸಬಲ್ಲೆವೆಂಬ ಸಂದೇಹ ಅನಗತ್ಯ. ಲೋಕದಲ್ಲಿ ಇರುವ, ಕಾಣುವ ಪ್ರತಿಯೊಂದರ ಅಸ್ತಿತ್ವಕ್ಕೂ ಯಾವುದೋ ಒಂದು ಪ್ರಮಾಣ ಇದ್ದೇ ಇರಬೇಕು. ಪ್ರಮೇಯವಾಗಿಯೇ ಯಾವುದಕ್ಕಾದರೂ ಸಿದ್ಧಿತ್ವವೇ ಹೊರತು ತನ್ನ ಪಾಡಿಗೆ ತಾನು ಸಿದ್ಧವಾಗದು. ಪ್ರಮಾಣಕ್ಕೆ ಗೋಚರಿಸುವುದೇ ಪ್ರಮೇಯ. ಪ್ರಮಾಣವೆಂದರೆ ಜ್ಞಾನವೇ. ಆಕಾಶದಿಂದ ಮೊದಲ್ಗೊಂಡು ಎಲ್ಲಾ ಗೋಚರಿಸುವಂಥವೇ ಆದ್ದರಿಂದ ಎಲ್ಲವೂ ಪ್ರಮೇಯಗಳ ಕೋಟಿಯಲ್ಲೇ ಸೇರಿಹೋಗುತ್ತವೆ. ಅದಕ್ಕೆಂದೇ ಅವಕ್ಕೆ ಸ್ವತಃಸಿದ್ಧಿಯಿಲ್ಲ ಎಂದದ್ದು. ಅದಕ್ಕೆ ಭಿನ್ನವಾಗಿ ಜ್ಞಾನ ಎಂದಿಗೂ ಪ್ರಮೇಯವಲ್ಲ. ಎಂದರೆ ? ಯಾವ ಪ್ರಮಾಣಕ್ಕೂ ಗೋಚರಿಸದು. ಜ್ಞಾನವೇ ಪ್ರಮಾಣ, ಅದಕ್ಕೆ ಬೇರೆ ಪ್ರಮಾಣದ ಅಗತ್ಯವಿಲ್ಲ. ಮತ್ತೊಂದು ಪ್ರಮಾಣವಿದ್ದರೆ ಅದೂ ಜ್ಞಾನಸ್ವರೂಪವೆನಿಸಿ ಎರಡೂ ಸಜಾತೀಯವಾಗುತ್ತವೆ. ಜ್ಞಾನ ಎಂಬುದು ಜ್ಞೇಯವನ್ನು ತೋರಿಸುತ್ತದಲ್ಲದೆ, ಜ್ಞಾನವು ಜ್ಞಾನವನ್ನು ತೋರಿಸದು. ತೋರಿಸುವ ಮೊದಲೇ ಅದು ಸಿದ್ಧವಾಗಿದೆಯಾದ್ದರಿಂದ ತೋರಿಸಲು ಯತ್ನಿಸಿದರೂ ಹೊಂದದೆ ಆತ್ಮಾಶ್ರಯ ದೋಷ ಬಂದೊದಗುತ್ತದೆ. ಅಗ್ನಿ ತನ್ನನ್ನು ತಾನೇ ಸುಟ್ಟುಕೊಳ್ಳದು. ಆಟಗಾರ ತನ್ನ ಭುಜದಮೇಲೆ ತಾನೇ ಹತ್ತಿ ಕೂಡಲಾರ. ಅಂತೆಯೇ ಜ್ಞಾನಕ್ಕೆ ಜ್ಞಾನದ ಅಗತ್ಯವಿಲ್ಲ. ಅದು ಸ್ವತಃ ಪ್ರಮಾಣ. ಆದ್ದರಿಂದಲೇ ಸ್ವತಃಸಿದ್ಧ. ಇದನ್ನೇ ಆತ್ಮವೆಂದೂ ಚೈತನ್ಯವೆಂದೂ ವ್ಯವಹರಿಸುತ್ತಾರೆ.

ನಾನೆಂಬುದು ಚಿತ್ - ನಾನಿದ್ದೇನೆ ಎಂಬುದು ಸತ್

ಆತ್ಮ ? ಏನದು ? ಅದು ಹೇಗಿರುತ್ತದೆ ? ಎಂದು ಕೇಳಬಹುದು. ಆತ್ಮವೆಂದರೆ ಏನೋ ಅಲ್ಲ, ನಾನೆಂಬ ಸ್ಫುರಣೆ ಮಾತ್ರವೇ. ಪ್ರಸ್ತುತ ಈ ಸ್ಫುರಣೆ ನಮ್ಮ ಪ್ರತಿಯೊಬ್ಬರ ಅನುಭವದಲ್ಲೇ ಇದೆ. ಯಾರು ನೀನು ?

ಎಂದು ಕೇಳಿದರೆ 'ನಾನು' ಎಂದೇ ಪ್ರತಿಯೊಬ್ಬನೂ ಉತ್ತರಿಸುತ್ತಾನೆ. ನಾನೆಂಬ ಜ್ಞಾನವೇ ಆತ್ಮ ಅಥವಾ ಚೈತನ್ಯ. ಜ್ಞಾನ ಸದಾ ನಾನಿದ್ದೇನೆ – (ಅಹಮಸ್ಮಿ) ಎಂಬ ರೂಪದಲ್ಲೇ ಇರುತ್ತದೆ. ಆಕಾಶದವರೆಗೆ, ಅದು–ಇದು ಎಂದು ಪರೋಕ್ಷವಾಗಿಯೇ ನಿರ್ದೇಶಿಸಿದರೂ, ನಾನು ಎಂಬ ಜ್ಞಾನವನ್ನು ಎಂದೂ ಪರೋಕ್ಷವಾಗಿ ನಿರ್ದೇಶಿಸುವುದಿಲ್ಲ. ಅಪರೋಕ್ಷವಾಗಿಯೇ ನಮ್ಮ ಸ್ವರೂಪವೆಂದೇ ಭಾವಿಸುತ್ತೇವೆ. ಇದೇ ಇದರ ವೈಲಕ್ಷಣ. ಆದ್ದರಿಂದ ಇದೊಂದಕ್ಕೇ ಆತ್ಮವೆಂಬ ಹೆಸರು. ಉಳಿದೆಲ್ಲಾ ಆಕಾಶದವರೆಗಿನ ವಸ್ತುಗಳು ಆತ್ಮವಲ್ಲ. ಅನಾತ್ಮ. ಇದು ಜ್ಞಾನದ, ಆತ್ಮದ ಮಹತ್ತ್ವ.

ಇಲ್ಲಿ 'ನಾನು' ಎಂಬುದು ಜ್ಞಾನವಾದ್ದರಿಂದ ಅದು ಚಿತ್; 'ನಾನಿದ್ದೇನೆ' ಎಂಬುದು ಸತ್. ಅದೇ ಚಿತಿ ಮತ್ತು ಸ್ಥಿತಿ. ಸ್ಥಿತಿಯನ್ನು ಬಿಟ್ಟು ನಾನಿಲ್ಲ. ನನ್ನನ್ನು ಬಿಟ್ಟು ಸ್ಥಿತಿಯಿಲ್ಲ. ಎರಡಾಗಿ ನಿರ್ದೇಶಿತವಾದರೂ ಇರುವುದೊಂದೇ ಆತ್ಮಪದಾರ್ಥ. ಇದೇ ಸಾಮಾನ್ಯ, ಮಹಾಸಾಮಾನ್ಯ. ಅನಾತ್ಮ ಪ್ರಪಂಚವೆಲ್ಲಾ ಇದಕ್ಕೆ ವಿಶೇಷ.

ವಿಸ್ತರಿಸಿದರೆ ವಿಭೂತಿ

'ಸಾಮಾನ್ಯ' ಎಂದಾಗ ಅದಕ್ಕೆ ಕೆಲವು ಲಕ್ಷಣಗಳು ಸಹಜವಾಗಿಯೆ ಇರುತ್ತವೆ. ಅದರಲ್ಲೂ ಈ ಆತ್ಮವೆಂಬುದು ಮಹಾಸಾಮಾನ್ಯವಾದ್ದರಿಂದ ಆ ಲಕ್ಷಣಗಳು ತಪ್ಪದೆ ನಮಗೆ ತೋರಿಕೊಳ್ಳಬೇಕು. ಏನಾ ಲಕ್ಷಣಗಳು ? ವಿಶೇಷಗಳು ಒಂದನ್ನೊಂದು ವ್ಯಾಪಿಸಲಾರವು. ಅವುಗಳ ಸಾಮಾನ್ಯವನ್ನು ಅಸಲಿಗೇ ವ್ಯಾಪಿಸಲಾರವು. ಆದರೆ ಸಾಮಾನ್ಯ ಮಾತ್ರ ಸರ್ವವಿಶೇಷಗಳನ್ನೂ ಅವಶ್ಯವಾಗಿ ವ್ಯಾಪಿಸಿಯೇ ಇರುತ್ತದೆ. ಸಾಮಾನ್ಯಕ್ಕೆ ಭಿನ್ನವಾಗಿ ಯಾವ ವಿಶೇಷವೂ ಸ್ವತಂತ್ರವಾಗಿ ಇಲ್ಲ. ಆದ್ದರಿಂದ ವಿಶೇಷವೆಂಬುದು ಆಭಾಸ. ಪದಾರ್ಥಗಳೆರಡಿಲ್ಲ. ಸಾಮಾನ್ಯವೇ ಪ್ರಪಂಚವಾಗಿ ಭಾಸಿಸುತ್ತಿದೆ. ಅದೇ ಸ್ವರೂಪ. ಸ್ವರೂಪವು ವಿಸ್ತರಿಸಿ ವಿಶೇಷರೂಪವಾಗಿ ಭಾಸಿಸುತ್ತಿದೆ. ಈ ವಿಸ್ತಾರವೇ ವಿಭೂತಿ.

ಎಲ್ಲಕ್ಕೂ ಸಾಮಾನ್ಯವಾದದ್ದು ಆತ್ಮ. ಆತ್ಮವೆಂದರೆ ನಾನು ಎಂಬ ಸ್ಫುರಣೆ. ಎಂದರೆ ನನಗೆ ತೋರುವ ಜಗತ್ತನ್ನು ನಾನು ಎಂಬ ಭಾವನೆ ಯಿಂದಲೇ ನೋಡಬೇಕಿದೆ. ವಿಶೇಷರೂಪವಾಗಿ ಪ್ರತಿಯೊಂದೂ ನನ್ನಿಂದ ಹೊರಬಂದು ನನಗೆ ಗೋಚರಿಸುತ್ತಾ ಮತ್ತೆ ನನ್ನ ಸ್ವರೂಪದಲ್ಲಿ ಸೇರುತ್ತದೆ. ನನಗೆ ಭಿನ್ನವಾಗಿ ಏನೇನು ಕಂಡರೂ ಇಷ್ಟು ರೂಪಗಳಾಗಿ ತೋರುತ್ತಾ ನನಗೆ ನಾನೇ ಭಾಸಿಸುತ್ತಿದ್ದೇನೆ ಎಂಬ ಅನುಭವ ನನಗೆ ಉಂಟಾಗಬೇಕು. ಆಗಲೇ ಸರ್ವವೂ ಆತ್ಮವೇ ಎಂಬ ಅದ್ವೈತ ಸಿದ್ಧಾಂತ, ಕೇವಲ ಸಿದ್ಧಾಂತವಾಗಿರದೆ ಅನುಭವವಾಗಿಯೂ ಸಾಧಕನಿಗೆ ಋಜುವಾತಾಗುತ್ತದೆ.

ಅಖಂಡಾನುಭವ ನಮಗೇಕೆ ಆಗುತ್ತಿಲ್ಲ ?

ಆದರೆ ಇಂಥ ಅದ್ವೈತಾನುಭವ ಈಗ ಯಾರಿಗಾದರೂ ಆಗುತ್ತಿದೆಯೇ ? ವಿಶೇಷಗಳೆಲ್ಲದರಲ್ಲೂ ಹಾಸಿಕೊಂಡು ವ್ಯಾಪಿಸಿರುವುದು 'ನಾನಾ' ಆದಾಗ ಹೊಸದಾಗಿ ಏನನ್ನು ಸಾಧಿಸಿ ಹಿಡಿದುಕೊಳ್ಳಬೇಕಿದೆ ? ಆದರೆ ನಾವು ಈಗ ಆತ್ಮ ಎಂದು ಭಾವಿಸುತ್ತಿರುವುದು ಅಹಂಕಾರವಲ್ಲ, ಆತ್ಮವಲ್ಲ. ಉಪಾಧಿಗಳಿಂದ ಕೂಡಿದ ದೇಹವನ್ನೇ ಆತ್ಮವೆಂದು ಭ್ರಮಿಸುತ್ತಿದ್ದೇವೆ. ದೇಹೇಂದ್ರಿಯಮನೋಪ್ರಾಣಗಳು ನನ್ನ ಉಪಾಧಿಗಳೇ ಹೊರತು ವಾಸ್ತವವಾಗಿ ನಾನಲ್ಲ. ಇವನ್ನು ನನಗೆ ವಿಷಯವಾಗಿ ನೋಡಿಯೂ ಸಹ ಅವೇ ನಾನೆಂದು ಅವುಗಳೊಡನೆ ತಾದಾತ್ಮ್ಯ ಹೊಂದಿಬಿಟ್ಟಿದ್ದೇವೆ. ಕರ್ತಾ, ಭೋಕ್ತಾ ಎಂದು ನಮ್ಮನ್ನು ಭಾವಿಸಿಕೊಂಡಿದ್ದೇವೆ. ಆ ಭಾವನೆಯಿಂದ ಜೀವಿಸುತ್ತಿದ್ದಾಗ ಇದು ಶುದ್ಧಾತ್ಮವಲ್ಲ. ಇದನ್ನು ಅಹಂಕಾರ, ಕರ್ತ್ರಾತ್ಮ, ಜೀವಾತ್ಮ, ಚಿದಾಭಾಸ ಎಂದರು ವೇದಾಂತಿಗಳು. ಈ ಚಿದಾಭಾಸ ದಿನವೂ ಅನುಭವಕ್ಕೆ ಬರುತ್ತಾ, ಇದೇ ಆತ್ಮ ಎಂಬ ಭ್ರಮೆಯಿಂದಾಗಿ ಶುದ್ಧಾತ್ಮ ನಮಗೆ ತಾತ್ಕಾಲಿಕವಾಗಿ ದೂರವಾಗಿದೆ. ಅದಕ್ಕೆಂದೇ ಸರ್ವವೂ ನಾನೆಂಬ ಅಖಂಡಾನುಭವ ನಮಗೆ ಉಂಟಾಗುತ್ತಿಲ್ಲ. ಚಿದಾಭಾಸವು ಆತ್ಮವನ್ನು ಶರೀರಾದಿ ಉಪಾಧಿಗಳ ಮಟ್ಟಕ್ಕೇ ತಗ್ಗಿಸಿ ತೋರಿಸುತ್ತಿದೆ.

ಕೊನೆಗೆ ಉಳಿಯುವುದು ನಾಮರೂಪವಿಲ್ಲದ್ದು

ಆದ್ದರಿಂದ ಅಸಲಿಗೆ ಆತ್ಮ ಯಾವುದೋ ಗುರುತಿಸಬೇಕಾದ ಅಗತ್ಯವಿದೆ. ಹಾಗೆ ಮಾಡಲು ಆತ್ಮದಲ್ಲಿ ಪ್ರವೇಶಿಸಿದ ಅನಾತ್ಮ ಭಾಗಗಳನ್ನು ಒಂದೊಂದಾಗಿ ನೇತಿನೇತಿ (ಇದಲ್ಲ, ಇದಲ್ಲ) ಎಂದು ಬೇರೆ ಮಾಡಿ ಚೈತನ್ಯ ಭಾಗ ಯಾವುದಿದೆಯೋ ಅದನ್ನು ಆತ್ಮವಾಗಿ ಗ್ರಹಿಸಬೇಕಿದೆ. ಇದೇ ಆತ್ಮಾನಾತ್ಮವಿವೇಚನೆ. ನಿತ್ಯಾನಿತ್ಯ ವಸ್ತುವಿವೇಕ ಎಂಬ ಸಾಧನ ಚತುಷ್ಟಯದ ಮೊದಲ ಸಾಧನೆ. ಇದರಿಂದ ಆತ್ಮ ಅನಾತ್ಮ ಯಾವುದು ? ಎಲ್ಲಿಯವರೆಗೆ ? ಎಂಬ ಜ್ಞಾನ ಮೂಡುತ್ತದೆ.

ಆತ್ಮ ಎಂದರೆ ನಾನು ಎಂಬ ಸ್ಫುರಣೆ ಮಾತ್ರ ಎಂದೆವು. ಆ ನಾನು ದೇಹೇಂದ್ರಿಯಮನೋಪ್ರಾಣಯುಕ್ತವಾದ ಕರ್ತನೆಂಬ ಅಹಂಭಾವ ಕೂಡದು. ಈ ಕಲಾಪದಲ್ಲಿ ಬೆರೆತು ಅದನ್ನು ನೋಡಬಾರದು. ಹಾಗೆ ನೋಡಿದರೂ ಆತ್ಮಕ್ಕೇನೂ ಅಂಟದು. ಆತ್ಮವೆಂದರೆ ಜ್ಞಾನ, ಅದು ಆಕಾಶದಂತೆ ನಿರಾಕಾರ, ಅಸಂಹತ. ದೇಹೇಂದ್ರಿಯಾದಿ ಅಹಂ ಎಲ್ಲಾ ಸಾಕಾರ ಸಂಹತ. ಇವೆಲ್ಲ ಆ ನಾನು ಆಗವು. ಏಕೆ ? ಇವು ದೃಶ್ಯಗಳು, ನನಗೆ ಗೋಚರಿತವಾದಂಥವು. ಗೋಚರಿಸುವ ಅವು 'ನಾನು' ಹೇಗೆ ಆಗಬಲ್ಲವು ? ಗೋಚರಿಸುವ ಶರೀರ ನಾನಲ್ಲವಾದರೆ ನನಗೆ ಗೋಚರಿಸುವ ಭಾರ್ಯಾ ಪುತ್ರ ಗೃಹಾದಿಗಳೂ ಸಹ ನಾನಲ್ಲ. ಹಾಗಿರುವಾಗ ಶರೀರೇಂದ್ರಿಯಾದಿ ಗಳನ್ನು ಮಾತ್ರ ನಾನೆಂದು ಭಾವಿಸುವುದು ಹಾಸ್ಯಾಸ್ಪದವಲ್ಲವೆ ? ಹಾಗೆ ಭಾವಿಸಿದ್ದರಿಂದಲೇ ಇದರೊಡನೆ ತಾದಾತ್ಮ ಏರ್ಪಟ್ಟಿದೆ. ಈ ತಾದಾತ್ಮ್ಯದಿಂದ ಏರ್ಪಟ್ಟಿರುವುದು ಇಂದ್ರಿಯಾತ್ಮ, ಪ್ರಾಣಾತ್ಮ, ಬುದ್ಧ್ಯಾತ್ಮ, ಕರ್ತ್ರಾತ್ಮ (ಅಹಂ) ಎಂದು ಆಯಾ ಸ್ಥಾಯಿಗೆ ಜಾರಿಬಿದ್ದು ಎಲ್ಲಿಗಲ್ಲಿಗೆ ಪರಿಚ್ಛಿನ್ನವಾಗಿ ಕಲುಷಿತವಾಗಿದೆ. ಇದನ್ನೇ ಅದ್ವೈತಿಗಳು ಮಿಥ್ಯಾತ್ಮ ಎಂದರು. ಈಗ ನಾವು 'ನಾನು' ಎಂದು ನಿರ್ದೇಶಿಸುತ್ತಿರುವುದು ಮಿಥ್ಯಾತ್ಮವನ್ನೇ. ಇದು ಶರೀರಾದಿ ಸಂಘಾತವಾಗಿ ರೂಪುಗೊಂಡು ಅಲ್ಲಿಗೇ ನಿಂತುಹೋಗಿದೆ. ಇದನ್ನೇ ಅಸಲಾದ ಆತ್ಮವೆಂದು, ಶರೀರಾದಿ ಸರಿಹದ್ದನ್ನೂ ದಾಟಿರುವ ಪ್ರಪಂಚವನ್ನೇ

ಅನಾತ್ಮವೆಂದೂ, ಅನಾತ್ಮಕ್ಕೆ ಸೇರಿಸಬೇಕಾದ ದೇಹಾದಿಗಳನ್ನು ಆತ್ಮಕ್ಕೆ ಸೇರಿಸಿಬಿಟ್ಟಿದ್ದೇವೆ.

ಮಿಥ್ಯಾತ್ಮ - ಗೌಣಾತ್ಮ

ದಿಟವಾಗಿ ದೇಹಾದಿಗಳೂ ಸಹ ಘಟಪಟಗಳಂತೆ ಆತ್ಮಕ್ಕೆ ಸ್ಫುರಿಸುತ್ತಿರುವವೇ. ಆದ್ದರಿಂದ ಬಾಹ್ಯ ಜಗತ್ತಿನಂತೆ ಇವೂ ಅನಾತ್ಮದ ಲೆಕ್ಕದಲ್ಲೇ ಬರುತ್ತದೆ. ಅದರಲ್ಲಿ ಸ್ವಲ್ಪ ಅನಾತ್ಮಭಾಗವಾದ ಶರೀರವನ್ನು ಆತ್ಮವಾಗಿ ಭಾವಿಸುವುದು ದೊಡ್ಡ ಪ್ರಮಾದ. ಅದರ ಫಲಿತವೇ ಮಿಥ್ಯಾತ್ಮ. ದೇಹ ಜಗತ್ತು ಎರಡೂ ಅನಾತ್ಮವಾದರೂ ನಾನು ಮತ್ತು ನನ್ನದು ಎಂದು ಅನಾತ್ಮಪ್ರಪಂಚವನ್ನೇ ಎರಡಾಗಿ ನೋಡುತ್ತಿದ್ದೇವೆ. ನನ್ನದು ಎಂದು ಭಾವಿಸುವ ಅನಾತ್ಮ ಪ್ರಪಂಚವೇ ಗೌಣಾತ್ಮ. ಮಿಥ್ಯಾತ್ಮವಾದ ದೇಹ ಮತ್ತು ಗೌಣಾತ್ಮವಾದ ಪ್ರಪಂಚ ಇಬ್ಬರೂ ಕಳ್ಳರೇ. ಆತ್ಮವಲ್ಲ. ಅನಾತ್ಮವೇ. ಕರ್ತೃರೂಪವಾದ ಅಹಂಕಾರ ಮೊದಲುಗೊಂಡು ಶರೀರದವರೆಗೆ, ಶರೀರದಿಂದ ಮೊದಲಾಗಿ ಬಾಹ್ಯ ಪ್ರಪಂಚದವರೆಗೆ ಎಲ್ಲಾ ಅನಾತ್ಮ ಕ್ಷೇತ್ರವೇ. ಈ ಕ್ಷೇತ್ರವೆಲ್ಲಾ ಯಾವ ಜ್ಞಾನಕ್ಕೆ ಸ್ಫುರಿಸುತ್ತಿದೆಯೋ ಅದೊಂದೇ ಆತ್ಮ, ಕ್ಷೇತ್ರಜ್ಞ. 99 ಅದು 1 ಇದು. ಆ 99 ನಾಮರೂಪ ಕ್ರಿಯಾತ್ಮಕವಾಗಿ ವಿಭಕ್ತವಾಗಿ ತೋರುತ್ತಿವೆ. ಆತ್ಮತತ್ತ್ವ ಅವಿಭಕ್ತವಾಗಿ ಅದನ್ನು ದರ್ಶಿಸುತ್ತಿದೆ.

ಹಾಗಾಗಿ ಆತ್ಮಕ್ಕೆ ದೇಹಾದಿ ಸಂಘಾತ ಸಂಸರ್ಗವಿಲ್ಲ. ಅದು ಅಸಂಹತ ಮತ್ತು ನಿರಾಕಾರವಾಗಿ ಪ್ರತ್ಯೇಕವಾಗಿಯೇ ಇರುತ್ತದೆ. ಸಾಕಾರವಾದ ದೇಹಾದಿಗಳನ್ನು ಮುಂದಕ್ಕೆ ತಳ್ಳಿ ತಾನು ಹಿಂದೆ ಮರೆಯಾಗುತ್ತದೆ. ಹಿಂದೆ ತಾನಿಲ್ಲದೆ ತನ್ನ ಮುಂದೆ ಬಂದ ದೃಶ್ಯ ವರ್ಗವನ್ನು ತಾನೇ ದರ್ಶಿಸಲಾರದು. ಆದರೆ ಈಗ ದರ್ಶಿಸುತ್ತಲೇ ಇದೆ. ಎಂದರೆ ಇವುಗಳೆಲ್ಲದರ ಹಿಂದೆಯೂ ಅದು ಇರಬೇಕಾಗುತ್ತದೆ. ಇದೇ ಪ್ರತ್ಯಗಾತ್ಮ. ಸಾಕಾರದಲ್ಲಿ ನಿರಾಕಾರ ತತ್ತ್ವ ಎಂದಿಗೂ ಅಣಗುವುದಿಲ್ಲ. ಅದೊಂದು ಘಟಾಕಾಶದಂತೆ. ಶರೀರದಲ್ಲೆಷ್ಟಿದೆಯೋ ಹೊರಗೂ ಅಷ್ಟೇ ವ್ಯಾಪಿಸಬಲ್ಲದು. ಹಾಗೆ ವ್ಯಾಪಿಸುವ ಪ್ರತ್ಯಗಾತ್ಮನೇ ಪರಮಾತ್ಮ. ಬೇರೆಯಾಗಿ ಬಿಡಿಸಿಕೊಂಡಿದ್ದರಿಂದ ಪ್ರತ್ಯಕ್.

ವ್ಯಾಪಿಸಿರುವುದರಿಂದ ಪರಮ. ಆಗ ಅದರ ಸ್ವರೂಪವೇನು ? ಸತ್ ಚಿತ್. ಸತ್ ಅದರ ಅಸ್ತಿತ್ವ, ಸರ್ವಥಾ ಇರಬೇಕಾದ್ದರಿಂದ ದೇಹಾತ್ಮವಲ್ಲ. ಎಂದರೆ ಮಿಥ್ಯಾತ್ಮ ಇಲ್ಲವಾಯಿತು. ಮಿಥ್ಯಾತ್ಮನಿಲ್ಲದೆ ಗೌಣಾತ್ಮವೂ ಇಲ್ಲ. ಏಕೆ ? ದೇಹದವರೆಗೆ 'ನಾನು' ಎಂದು ಭಾವಿಸಿದರೆ ಮಾತ್ರ ನಾನಲ್ಲದ್ದು ಇದು ಎಂಬ ಭಾವ ಏರ್ಪಡುವುದು. ಎಲ್ಲೆಡೆಯೂ ನಾನೇ ವ್ಯಾಪಿಸಿದ್ದಾಗ ಪ್ರತ್ಯೇಕಿಸಿ ನನ್ನದೆಂಬುದೇ ಇಲ್ಲ. ಪ್ರತ್ಯೇಕವಾಗಿ ನಾನೆಂಬ ಮಿಥ್ಯಾತ್ಮನಾಗಲಿ ಸಂಸಾರವೆಂಬ ಗೌಣಾತ್ಮವಾಗಲಿ ಇಲ್ಲವೇ ಇಲ್ಲ.

ಈಗೇನಾಯಿತು ? ಅಹಂಕಾರ ಮಮಕಾರಗಳೆಂಬ ಎರಡು ಅಡ್ಡಗೋಡೆಗಳು ಬಿದ್ದವು. ಅವೆರಡರ ಬದಲು ಆತ್ಮವೊಂದೇ ಉಳಿಯಿತು. ಇದು ಗೌಣವಲ್ಲ, ಮಿಥ್ಯೆಯಲ್ಲ. ಮುಖ್ಯಾತ್ಮ. ಪ್ರತ್ಯಗಾತ್ಮನಾದರೂ ಪರಮಾತ್ಮನಾದರೂ ಇದೇ. ಇದು ಸಚ್ಚಿದ್ ವಿಶೇಷವಲ್ಲ. ಕೇವಲ ಸತ್–ಚಿತ್ತೇ. ಇದೇ ಮಹಾಸಾಮಾನ್ಯ. ಬ್ರಹ್ಮಾಂಡ (ಗೌಣಾತ್ಮ)–ಪಿಂಡಾಂಡ (ಮಿಥ್ಯಾತ್ಮ)ಗಳೆರಡೂ ಇದಕ್ಕೆ ವಿಶೇಷಗಳು. ಅದರಲ್ಲೂ ಸದ್ವಿಶೇಷವು ಪ್ರಪಂಚವಾದರೆ, ಚಿದ್ವಿಶೇಷವು ಜೀವ. ವಿಶೇಷ ಎಂದರೆ ಇಂಥಾದ್ದು ಎಂಬ ಅನುಭವ. ನಾನು ಇಂಥವನು ಎಂದು ಭಾವಿಸುವ ಜ್ಞಾನವೇ ಜೀವ. ಇಂಥಾ ವೃತ್ತಿಜ್ಞಾನದಿಂದ ದರ್ಶಿಸುವ ಬಾಹ್ಯ– ಜ್ಞೇಯಪ್ರಪಂಚವೆಲ್ಲಾ ಸದ್ವಿಶೇಷ. ಸುಮ್ಮನೆ ಇದೆ ಎಂದು ನೋಡಿದರೆ ವಿಶೇಷವಲ್ಲ. ಘಟವಾಗಿ ಇದೆ ಎಂದಾಗ ಅದು ಸದ್ವಿಶೇಷ. ಹಾಗೆ ಬಾಹ್ಯಪ್ರಪಂಚವೆಲ್ಲಾ ಸದ್ವಿಶೇಷ. ಈ ಸದ್ವಿಶೇಷಕ್ಕೇ ರೂಪವೆಂದು ಹೆಸರು. ಒಳಗೆ ಚಿದ್ವಿಶೇಷ ನಾಮದ ಜೀವ; ಹೊರಗೆ ಸದ್ವಿಶೇಷ ರೂಪದ ಜಗತ್ತು. ಒಂದು ಗ್ರಹಿಸುವ ದೃಕ್. ಮತ್ತೊಂದು ಗ್ರಹಿಸಲ್ಪಡುವ ದೃಶ್ಯ. ಒಂದು ನಾಮ ಮತ್ತೊಂದು ರೂಪ. ಎರಡಕ್ಕೂ ಇರುವ ಸಂಬಂಧವೇ ಕ್ರಿಯೆ. ನಾಮರೂಪಗಳು ಎರಡು ತೀರಗಳು. ಎರಡನ್ನೂ ಒಂದುಮಾಡುವ ದೋಣಿಯೇ ಕ್ರಿಯೆ. ಈ ತ್ರಿಗುಣಾತ್ಮಕವೇ ಸಂಸಾರ.

ಸಮಸ್ಯೆ ಯಾರಿಗೆ ?

ಈ ಸಂಸಾರವೇ ಈಗ ನಮ್ಮೆದುರಿಗಿರುವ ಸಮಸ್ಯೆ. ಇದರಿಂದಲೇ ಸುಖ ದುಃಖಾದ್ಯನುಭವ ಉಂಟಾಗುತ್ತಿದೆ. ಕೊನೆಗೆ ಜನನ ಮರಣಾನುಭವವೂ ಸಹ. ಸಮಸ್ಯೆ ಯಾರಿಗೆ? ಅನುಭವಿಸುವವರಿಗೆ. ಯಾರಾ ಅನುಭವಿ? ಆತ್ಮನಲ್ಲ. ಏಕೆ? ಅದು ಸರ್ವವ್ಯಾಪಕ ನಿರಾಕಾರ ಪರಿಪೂರ್ಣ. ಅನಾತ್ಮವೇ? ಅದು ಜಡ ಪರಿಚ್ಛಿನ್ನ. ಸಮಸ್ಯೆ ಪರಿಪೂರ್ಣವಾದ ದೇಹದ್ದೂ ಅಲ್ಲ, ಪರಿಚ್ಛಿನ್ನವಾದ ಜಡದ್ದೂ ಅಲ್ಲ. ಪರಿಪೂರ್ಣಕ್ಕೆ ವಿಶೇಷ ದೃಷ್ಟಿಯಿಲ್ಲ. ಪರಿಚ್ಛಿನ್ನಕ್ಕೆ ದೃಷ್ಟಿಯೇ ಇಲ್ಲ. ಸಂಸಾರಾನುಭವ ಎರಡಕ್ಕೂ ಇಲ್ಲ.

ಸಂಸಾರಾನುಭವ ಆತ್ಮ-ಅನಾತ್ಮ ಎರಡಕ್ಕೂ ಇಲ್ಲವಾದರೆ ಮತ್ತಾರಿಗೆ? ಜೀವನಿಗೇ ಅನುಭವ. ಆತ್ಮದಂತೆ ಜೀವವು ಸಾಮಾನ್ಯ ದೃಷ್ಟಿಯಲ್ಲ, ಅನಾತ್ಮಪ್ರಪಂಚದಂತೆ ಕೇವಲ ದೃಶ್ಯವೂ ಅಲ್ಲ. ದೃಕ್-ದೃಶ್ಯಗಳು ಇಲ್ಲಿ ಒಂದಾಗಿವೆ. ಇದನ್ನೇ ಗ್ರಂಥಿ, ಚಿಜ್ಜಡ ಗ್ರಂಥಿ ಎಂದರು. ದೃಶ್ಯದ ಸ್ವಲ್ಪಭಾಗದಲ್ಲಿ ನಾನೆಂದು ತನ್ನಲ್ಲಿ ಬೆರಸಿಕೊಂಡ ದೃಕ್ ಸಾಮಾನ್ಯ ಚೈತನ್ಯವಲ್ಲ, ವಿಶೇಷ ಚೈತನ್ಯ. ಇದೇ ಚಿದಾಭಾಸ ಅಥವ ಜೀವಾತ್ಮ. ಇದಕ್ಕಿರುವುದು ವಿಶೇಷ ದೃಷ್ಟಿ ಮಾತ್ರ. ಒದಗುವ ಸಮಸ್ಯೆ ಏನೆಂದರೆ ವಿಶೇಷ ದೃಷ್ಟಿಯಿಂದ ನೋಡಿದರೆ ತೋರುವುದೆಲ್ಲ ವಿಶೇಷ ದೃಶ್ಯಗಳೆ. ತೋರುವುದರ ಜೊತೆಗೆ ಈತ ತಾದಾತ್ಮ್ಯ ಹೊಂದುವುದರಿಂದಲೇ ವಿಶೇಷ ದೃಶ್ಯವಾದ ಜಗತ್ತಿನೊಂದಿಗೆ ಹೊಂದಿಕೊಂಡಿದ್ದಾನೆ. ಆ ಹೊಂದಿಕೆಯಿಂದ ಕಷ್ಟ ಸುಖಗಳು ಇವನಿಗೆ ಸಂಕ್ರಮಿಸಿವೆ. ಇದೇ ಸಂಸಾರಾನುಭವ. ವಿಶೇಷವೇ ನಾನೆಂದು ಭಾವಿಸಿದಾಗ ಆ ವಿಶೇಷಧರ್ಮಗಳೂ ನನ್ನದೇ ಆಗಿಹೋಗುತ್ತವೆ. ಯದ್ಭಾವ ಸ್ತದ್ಭವತಿ. ಈ ವಿಶೇಷ ಧರ್ಮಗಳೇ ಸುಖ ದುಃಖಗಳು – ಜನನ ಮರಣಗಳು.

ಜೀವಾತ್ಮ ಹೇಗೆ ಬಂದ ?

ಒಟ್ಟಿನಲ್ಲಿ ಇರುವವೆರಡೇ; ಆತ್ಮ – ಅನಾತ್ಮಗಳೆಂದಾದರೆ ಜೀವಾತ್ಮನೆಂಬ ಮೂರನೆಯವ ಹೇಗೆ ಬಂದ? ವಾಸ್ತವವಾಗಿ ಬರಲಿಲ್ಲ. ಬರಲು ಸಾಧ್ಯವೂ ಇಲ್ಲ. ಆದರೂ ಬಂದ ಎಂದರೆ ಆ ಬರುವಿಕೆ ವಾಸ್ತವವಲ್ಲ. ಮತ್ತೇನದು? ಆಭಾಸ. ಅದಕ್ಕೆ ಕಾರಣ ಅವಿದ್ಯೆ ಇಲ್ಲವೆ ಅಜ್ಞಾನ. ಸಾಮಾನ್ಯ ಚೈತನ್ಯಮಾತ್ರವೇ ನನ್ನ ಸ್ವರೂಪವೆಂದು ಗುರ್ತಿಸಲು ಹೋಗದಿರುವುದೇ ಅಜ್ಞಾನ. ಗುರುತಿಸಿದರೆ ಚಿದ್ವಿಶೇಷವಾದ ಜೀವನೂ ಇಲ್ಲ; ಸದ್ವಿವಿಶೇಷವಾದ ಜಗತ್ತೂ ಇಲ್ಲ. ಏಕೆಂದರೆ ವಿಶೇಷಗಳು ಸಾಮಾನ್ಯಕ್ಕಿಂತ ಭಿನ್ನವಾಗಿ ಇರಲಾರವು. ಆದ್ದರಿಂದ ಜೀವ ಜಗತ್ತುಗಳೆರಡೂ ಇಲ್ಲ. ಅವೆರಡೂ ಇಲ್ಲದಾಗ ಈಶ್ವರನೂ ಸಹ ಇರಲಾರ. ಈಶ್ವರನೆಂದರೆ ಜೀವ ಕಲ್ಪಿಸಿಕೊಂಡ ಒಂದು ಸಗುಣ ಸಮಷ್ಟಿ ಚೈತನ್ಯ.

ಆತ್ಮ ನಮ್ಮ ಸ್ವರೂಪವಾದರೂ ಅಲ್ಲ ಎಂದು ತಿಳಿದದ್ದೇಕೆ ?

ಜೀವ, ಜಗತ್ತು ಮತ್ತು ಈಶ್ವರ ಈ ಮೂರನ್ನೇ ತ್ರಿಪುಟಿ ಎಂದರು. ವಿಚಿತ್ರವೆಂದರೆ ಈ ತ್ರಿಪುಟಿ ಒಂದಕ್ಕೊಂದು ಬೆಸೆದುಕೊಂಡಿದೆ. ಅವಿದ್ಯೆ ಇಲ್ಲದಿದ್ದರೆ ಇದಕ್ಕೆ ಅಸ್ತಿತ್ವವಿಲ್ಲ. ಅವಿದ್ಯೆ ಎಂದರೆ ಅಜ್ಞಾನ. ಅಜ್ಞಾನವೆಂದರೆ ಜ್ಞಾನವಿಲ್ಲದಿರುವುದಲ್ಲ. ವಿಶೇಷ ರೂಪವಾದ ಜ್ಞಾನವೇ ಅಜ್ಞಾನ. ಇಂಥದ್ದು, ಇದು ಎಂಬ ದೃಷ್ಟಿಯಿಂದ ಒಂದನ್ನು ನೋಡುವುದು. ಹಾಗೆ ನೋಡಿದಾಗ ಇಂಥ ದೃಶ್ಯ ಇಂಥ ದೃಷ್ಟಿಗೆ ಬಂಧವಾಗಿ ಪರಿಣಮಿಸುತ್ತದೆ. ಇದೇ ನಮ್ಮನ್ನು ಕಾಡುತ್ತಿರುವ ಸಮಸ್ಯೆ. ನಾವೆಲ್ಲರೂ ಪ್ರಸ್ತುತದಲ್ಲಿ ಈ ಸಮಸ್ಯೆಯಿಂದ ತೊಳಲಾಡುತ್ತಿರುವ ಜೀವಿಗಳೇ. ವಾಸ್ತವವಾಗಿ ನಮ್ಮ ಸ್ವರೂಪ ಪರಮಾತ್ಮ ಚೈತನ್ಯವಾದರೂ, ಅದಲ್ಲ ಎಂದು ತಿಳಿದೆವು. ನಾನು ಸಾಮಾನ್ಯ ಚೈತನ್ಯವಲ್ಲ, ಎಂದು ತಪ್ಪಾಗಿ ತಿಳಿದು, ಎಲ್ಲೆಂದರಲ್ಲಿ ವಿಶೇಷ ರೂಪ ಚೈತನ್ಯವೇ ನನ್ನ ಸ್ವರೂಪವೆಂದು ಭಾವಿಸುತ್ತಿದ್ದೇವೆ. ಅದಕ್ಕೆ ನಿದರ್ಶನವೇ ನಮ್ಮ ಈ ದೇಹಾತ್ಮಾಭಿಮಾನ. ಎಂದರೆ ದೇಹದ ಮೇರೆಗೆ ಮಾತ್ರ ಪರಿಮಿತವಾಗಿದ್ದೇವೆ ಎಂಬ ಭಾವನೆ. ಇದು ನಮಗೆಲ್ಲರಿಗೂ ಈಗಲೂ ಅನುಭವಸಿದ್ಧವಲ್ಲವೆ! ಅನುಭವದಲ್ಲೇ ಇರುವಂಥದ್ದಕ್ಕೆ ವಿವರಣೆ ಅಗತ್ಯವಿಲ್ಲ.

ಸಹಜಾಧ್ಯಾರೋಪ ಏಕೆ

ಚೈತನ್ಯವನ್ನು ವಿಶೇಷವೆಂದು ತಿಳಿದದ್ದರಿಂದಾದ ಈ ಜೀವಭಾವ ನಮಗೆ ವಾಸ್ತವದ್ದಲ್ಲ. ನಿಜಕ್ಕೂ ಪರಮಾತ್ಮನೇ ನಾವು. ಹಾಗಿದ್ದಾಗ ಅವಾಸ್ತವವಾದ ಈ ಅಭಿಮಾನ ನಮಗೆ ಹೇಗೆ ಪ್ರಾಪ್ತವಾಯಿತು ? ಅಜ್ಞಾನದಿಂದ. ನಮ್ಮ ಸ್ವರೂಪವನ್ನು ಸಾಮಾನ್ಯ ಚೈತನ್ಯವಾಗಿ ನೋಡದೆ ವಿಶೇಷವಾಗಿ ಭಾವಿಸಿದ್ದೇ ನಡೆದ ಮೋಸ. ಆದರೆ ಸಾಮಾನ್ಯವೇ ವಸ್ತುತಃ ಎಲ್ಲಕ್ಕೂ, ಎಂದರೆ ಎಲ್ಲ ವಿಶೇಷಗಳಿಗೂ ಅಧಿಷ್ಠಾನ. ಅಧಿಷ್ಠಾನವೇ ಇವುಗಳ ಸ್ವರೂಪ. ಅಂಥ ಅಧಿಷ್ಠಾನ ಜ್ಞಾನವನ್ನು ಬಿಟ್ಟದ್ದೇ ಮೊದಲ ಅಪರಾಧ. ಅದಕ್ಕೆ ಬದಲಾಗಿ ವಿಶೇಷ ಜ್ಞಾನವನ್ನೇ ನಾನೆಂದು ಭಾವಿಸಿ, ವಿಶೇಷ ರೂಪವಾದ ದೇಹಾದಿಗಳನ್ನು ಬಾಹ್ಯವಾದ ಪೃಥಿವ್ಯಾದಿಗಳನ್ನು ತಲೆಯ ಮೇಲೆ ಹೊತ್ತು ಅವುಗಳೊಂದಿಗೆ ಹೆಣಗುತ್ತಿರುವುದು ಎರಡನೆ ಅಪರಾಧ. ಇದಕ್ಕೇ ಅಧ್ಯಾರೋಪವೆಂದು ಹೆಸರು. ಅದರಲ್ಲೂ ಇದು ಸಹಜಾಧ್ಯಾರೋಪ. ಯಾವಾಗ ಮಾಡಿಕೊಂಡೆವೋ ಏತಕ್ಕಾಗಿ ಮಾಡಿದೆವೋ ನಮಗೇ ತಿಳಿಯದು. ಕಾಲಿಗೆ ಮುಳ್ಳು ಹೇಗೆ ಚುಚ್ಚಿಕೊಂಡಿತೋ ತಿಳಿಯದು ಎಂದಂತೆಯೇ ಇದು. ಜನರಿಗೆಲ್ಲ ಇದು ಸಾಧಾರಣವಾದ್ದರಿಂದ ಇದನ್ನು ಸಹಜಾಧ್ಯಾರೋಪವೆಂದರು.

ಇದು ಎರಡು ಬಗೆ. ಆತ್ಮವನ್ನು ತಂದು ಅನಾತ್ಮದಮೇಲೆ ಆರೋಪಿಸುವುದೊಂದು. ಇದು ಮಿಥ್ಯಾತ್ಮ. ಹಾಗೆಯೇ ಅನಾತ್ಮವನ್ನು ಆತ್ಮದ ಮೇಲೆ ಆರೋಪಿಸಿಕೊಂಡಿರುವುದು ಇನ್ನೊಂದು – ಇದು ಗೌಣಾತ್ಮ. ಇದರಿಂದ ಅಸಲಾದ ಮುಖ್ಯಾತ್ಮ ಮರೆಯಾಯಿತು. ಅದು ಅಭಾವವಲ್ಲ, ಅನುಭಲಬ್ಧಿ. ಅಧಿಷ್ಠಾನ ಎಂದಿಗೂ ಅಭಾವವಾಗದು. ಅದು ಅಭಾವವಾದರೆ ಅದರ ಮೇಲೆ ಆರೋಪಿತವಾದ ಜೀವ ಜಗದ್ ಲೀಲೆ ಕಾಣಿಸುವುದು ಎಂದಿಗೂ ಸಂಭವವಲ್ಲ. ಇವು ಈಗ ನಮಗೆ ಭಾವರೂಪವಾಗಿ ಅನುಭವಕ್ಕೆ ಬರುತ್ತಿದೆ ಎಂದಾಗ, ಇವಕ್ಕೆ ಆಧಾರವಾದ ಮುಖ್ಯಾತ್ಮ ಹೇಗೆ ಅಭಾವವಾದೀತು ? ಭಾವರೂಪವಾಗಿ ತಪ್ಪದೆ ಇರಲೇ

ಬೇಕು. ಆದರೆ ನಾವದನ್ನು ಗುರುತಿಸುತ್ತಿಲ್ಲ. ಆದ್ದರಿಂದ ನಮಗದು ಮರೆಯಾಗಿದೆ.

ಆ ಮರೆಯಾಗಿರುವುದೇ ಆವರಣ. ಉಪಾಧಿಗಳಿಂದ ಆವೃತವಾಗಿದೆ ನಮ್ಮ ಆತ್ಮ. ಅದು ಆವೃತವಾಗಿ ಅಷ್ಟಕ್ಕೇ ನಿಲ್ಲಲಿಲ್ಲ. ಅದೇ ಮರಳಿ ಅನಾತ್ಮ ರೂಪವಾಗಿ ಭಾಸಿಸುತ್ತಿದೆ. ಇದನ್ನು ವಿಪರ್ಯಯ ಎಂದರು. ತನ್ನಿಮಿತ್ತವಾಗಿ ಸುಖ ದುಃಖಾದಿ ದ್ವಂದ್ವ ರೂಪವಾದ ಸಂಸಾರವೊಂದು ಅನುಭವಕ್ಕೆ ಬರುತ್ತಿದೆ. ಇದನ್ನೇ ವಿಕ್ಷೇಪ ಎಂದರು. ಆವರಣ ವಿಕ್ಷೇಪಗಳು ಒಂದರೊಳಗೊಂದು ಬಂದು ಹೋಗುವ ವಿಷವಲಯಗಳು. ಅವಸ್ಥಾತ್ರಯದಲ್ಲಿ ನಮಗೆ ಕಾಣಿಸುವ ವ್ಯವಹಾರ ಇದೇ. ಇವೆಲ್ಲಕ್ಕೂ ಕಾರಣ ಅಜ್ಞಾನ. ಎಂದರೆ ಅಧಿಷ್ಠಾನ ಜ್ಞಾನ ಇಲ್ಲದಿರುವುದು. ಅಧಿಷ್ಠಾನವೆಂಬುದು ಸಾಮಾನ್ಯವಾದ ಜ್ಞಾನ. ಅದನ್ನು ವಿಶೇಷ ಜ್ಞಾನವೆಂದು ಯಾವಾಗ ಭ್ರಮಿಸಿದೆವೋ ಆಗ ಅದೇ ವಿಶೇಷ ರೂಪವಾದ ಸಂಸಾರಾನುಭವಕ್ಕೆ ದಾರಿಯಾಯಿತು.

ವಿಶೇಷಾತ್ಮನ ಆಭಾಸ ನಾಟಕ

ಆದರೆ ಒಂದು ಪ್ರಶ್ನೆ. ಎಲ್ಲವೂ ಆತ್ಮವೇ, ಎಲ್ಲ ಒಂದೇ ಯಥಾರ್ಥ, ಅದು ಅಖಂಡ ಜ್ಞಾನ, ಅದೇ ನಮ್ಮ ಸ್ವರೂಪ ಎಂದಾಗ, ನಮಗೆ ಸಾಮಾನ್ಯಜ್ಞಾನವೇ ಸದಾ ಇರಬೇಕಲ್ಲದೆ ವಿಶೇಷರೂಪವಾದ ಅಜ್ಞಾನ ಹೇಗೆ ಪ್ರಾಪ್ತಿಯಾಯಿತು ? ಸೂರ್ಯನ ತೇಜಸ್ಸಿನಲ್ಲಿ ತಮಸ್ಸು ಎಂಬ ಮಾತಿಗೆ ಅರ್ಥವಿಲ್ಲದಂತೆ ಇದಕ್ಕೂ ಅರ್ಥವಿಲ್ಲ. ಹೌದು. ವಾಸ್ತವವಾಗಿ ಅರ್ಥವಿಲ್ಲ. ವಸ್ತುಸಿದ್ಧವಾಗಿ ಇಲ್ಲದಿದ್ದರೂ ಬುದ್ಧಿಸಿದ್ಧವಾಗಿ ಅನುಭವಕ್ಕೆ ಬರುತ್ತಿದೆ. ಯಾವುದನ್ನು ಇಲ್ಲವೆಂದರೂ ಅನುಭವವನ್ನು ಇಲ್ಲವೆನ್ನಲಾರೆವು. ಇಲ್ಲವೆಂದರೆ ಆತ್ಮವಂಚನೆಯಾದೀತು. 'ನಹಿ ದೃಷ್ಟೇ ಅನುಪಪನ್ನಂ ನಾಮ' ಎಂದರು ಶಂಕರರು. ಒಂದೆಡೆ ಕಣ್ಣಿಗೆ ಕಾಣಿಸುತ್ತಿದ್ದರೆ ಇದು ಹೇಗೆ ಎಂದು ಪ್ರಶ್ನೆ ಹಾಕಿ ಸುಖವಿಲ್ಲ. ಅನುಭವಕ್ಕೆ ಬರುವುದೇ ಋಜುವಾತು. ಹಾಗಿಲ್ಲದೆ ಅನುಭವಕ್ಕೇ ಬರದು ಅಲ್ಲವೆ !

ಅದಕ್ಕೋ ಏನೋ ಇದನ್ನು ವಿಜ್ಞರು ಅನಿರ್ವಚನೀಯವೆಂದು ವರ್ಣಿಸುತ್ತಾರೆ. ಇದೆ ಎನ್ನಲಾರೆವು. ಇಲ್ಲ ಎನ್ನಲೂ ಸಾಧ್ಯವಿಲ್ಲ. ಇದು ಸತ್ ಅಲ್ಲ. ಅಸತ್ತೂ ಅಲ್ಲ. ಘಟ ಅಸತ್ತಲ್ಲ. ಮೃತ್ತಿಕೆಯಾಗಿ ಅದು ಸತ್ಯವೇ. ಹಾಗೆ ಸತ್ ಎನ್ನಲೂ ಆಗದು. ಮೃತ್ತಿಕೆಗೆ ಭಿನ್ನವಾಗಿ ಮಡಕೆ ಎಂಬ ರೂಪ ಎಲ್ಲಿಯೂ ಇಲ್ಲ. ಹಾಗೆಯೇ ಈ ಜೀವನೆಂಬ ವಿಶೇಷ ದೃಷ್ಟಿ, ಜಗತ್ತೆಂಬ ವಿಶೇಷ ದೃಶ್ಯ ಘಟದಂತೆ, ಇದೆ ಎನ್ನಲಾಗದು. ಇಲ್ಲವೆನ್ನಲಾಗದು. ಸಚ್ಚಿದ್ರೂಪವಾಗಿ ಎರಡೂ ಸತ್ಯವೇ. ಸತ್–ಚಿತ್‌ಗಳಿಗೆ ಅನ್ಯವಾಗಿ ಎರಡೂ ಅಸತ್ಯವೇ. ಚಮತ್ಕಾರವೆಂದರೆ ಅಸತ್ಯವೂ ಭಾಸವಾಗುವುದು. ಅದೇ ಅಭಾಸ. ಅಭಾಸ ಎಂದರೆ ಒಂದು ಪದಾರ್ಥವು ಸ್ವತಂತ್ರವಾಗಿ ಇರುತ್ತಾ ಭಾಸಿಸುವುದಲ್ಲ. ಹಾಗೆ ಹೇಳಿದರೆ ವಿಶೇಷಕ್ಕೆ ಅಸ್ತಿತ್ವ ಹೇಳಿದಂತಾಗುತ್ತದೆ. ಸಾಮಾನ್ಯಕ್ಕೆ ಭಿನ್ನವಾಗಿ ವಿಶೇಷ ಇಲ್ಲವೆನ್ನುವುದೇ ಸಿದ್ಧಾಂತವಲ್ಲವೆ ? ಆದ್ದರಿಂದ ಆ ಭಾಸ ಯಾವುದರ ಆಭಾಸ ? ವಸ್ತುವಿನ ಆಭಾಸವೇ ಆಗಿರಬೇಕು. ವಸ್ತುವೇ ಮತ್ತೊಂದು ರೂಪದಲ್ಲಿ ಭಾಸಿಸುತ್ತಿದೆ. ಇದು ಪ್ರತೀತಿ ಮಾತ್ರ. ಯಥಾರ್ಥವಲ್ಲ. ಆದರೂ ಏಕೆ ಹಾಗೆ ಭಾಸಿಸುತ್ತಿದೆ ?

ಹಾಗೆ ಭಾಸಿಸುತ್ತಿರುವುದು ಆತ್ಮವಲ್ಲ. ಆತ್ಮ ಹಾಗೆ ಭಾಸಿಸುತ್ತಿದೆ ಎಂದು ಭಾವಿಸುವ ಒಂದು ವಿಶೇಷಾತ್ಮ. ಅದೇ ಜೀವ. ಈ ಅನಾತ್ಮವನ್ನು ನೋಡಿ ಆತ್ಮವೇ ಹೀಗೆ ಭಾಸಿಸುತ್ತಿದೆ ಎಂದು ಜೀವನೇ ಹೇಳುತ್ತಿದ್ದಾನೆ. ಅವನ ಭಾವನೆಯನ್ನು ಅನುಸರಿಸಿ ಈ ಆಭಾಸ. ಜೀವನೇಕೆ ಹೀಗೆ ಭಾವಿಸಬೇಕಾಗಿ ಬಂತು ? ದಿಟವಾದ ಆತ್ಮದೃಷ್ಟಿಯ ಅಭಾವದಿಂದಾಗಿ. ಆತ್ಮದೃಷ್ಟಿ ಇಲ್ಲದೆ ಜೀವನಾದನೋ, ಜೀವನಾಗಿ ತತ್ಕಾರಣದಿಂದ ಆತ್ಮದೃಷ್ಟಿಯನ್ನು ಕಳೆದುಕೊಂಡನೋ, ಜೀವ ಮೊದಲೋ ಅಜ್ಞಾನ ಮೊದಲೋ ಎಂಬ ಪ್ರಶ್ನೆಗಳು ಎದುರಾಗುತ್ತವೆ. ಇದಿರದೆ ಅದಿಲ್ಲ. ಅದಿರದೆ ಇದಿಲ್ಲ. ಇದು ಅನ್ಯೋನ್ಯಾಶ್ರಯದೋಷ, ಬೀಜವೃಕ್ಷನ್ಯಾಯದಂತೆ.

ಹಾಗಾದಲ್ಲಿ ಇದಕ್ಕೆ ಪರಿಷ್ಕಾರವೇನು ? ಇದೇನು ಜೀವನ ಕೋರಿಕೆಯೋ ಅಥವಾ ಆತ್ಮದ ಕೋರಿಕೆಯೋ ? ಆತ್ಮವಾದಲ್ಲಿ ಕೇಳುವ ಪ್ರಶ್ನೆಯೇ ಬರದು. ಏಕೆಂದರೆ ನಿನಗೆ ಆಗ ಅಜ್ಞಾನವೇ ಇರದು. ಜೀವನಾಗಿ ಕೇಳುತ್ತಿರುವೆ

ಎಂದಾದರೆ, ಜೀವನೆಂಬ ಭಾವನೆಯನ್ನು ಬಿಡದೆ ಕೇಳುತ್ತಿರುವೆ. ಆದ್ದರಿಂದ ಕೇಳಿದರೂ ಸುಖವಿಲ್ಲ. ನಾನು ಜೀವ ಎಂಬ ಭಾವದಿಂದ ಪರಿಷ್ಕಾರವನ್ನು ಹೊಂದಲಾರೆ. ಹೇಳಿದರೂ ಗ್ರಹಿಸಲಾರೆ.

ಕತ್ತಲು - ಬೆಳಕು ತೋರುವುದು ದೃಷ್ಟಿಭೇದದಿಂದ

ಇದು ಹೇಗೆಂದರೆ ಕನಸಿನಲ್ಲಿ ಒಬ್ಬ ಸ್ವಪ್ನ ಜಗತ್ತನ್ನು ನೋಡುತ್ತಿರುವಾಗ – ಇದು ಸ್ವಪ್ನ, ವಾಸ್ತವವಲ್ಲ ಎಂದು ಯಾರು ಹೇಳಿದರೂ ನಂಬುವುದಿಲ್ಲ. ಕಾರಣ ಅವನು ಸ್ವಪ್ನದಲ್ಲೇ ಇದ್ದಾನೆ. ಇದು ವಾಸ್ತವವಲ್ಲ ಎಂದು ಹೇಳುವವನನ್ನೂ ಅವನ ಹೇಳಿಕೆಯನ್ನೂ ಸಹ ಸ್ವಪ್ನವಾಗಿಯೇ ನೋಡುತ್ತಾನೆ. ಅದು ನಿಜವಲ್ಲವೆಂದು ಅವನಿಗೆ ಹೇಗೆ ತಿಳಿದೀತು ? ಹಾಗಲ್ಲದೆ ಅವನೇ ಕನಸು ಬಿಟ್ಟು ಜಾಗ್ರತ್ತಿಗೆ ಬಂದನೆಂದರೆ, ಅವನಿಗೆ ಇದೇನು ಎಂಬ ಪ್ರಶ್ನೆಯೇ ಉದ್ಭವಿಸದು. ಯಾರೂ ಬಗೆಹರಿಸದೆ ಸಮಸ್ಯೆಯನ್ನು ತಾನೇ ಬಗೆಹರಿಸಿಕೊಳ್ಳಬಲ್ಲ. ಇದು ಬೆಳಕು–ಕತ್ತಲೆಗಳಂತೆ. ಕತ್ತಲೆಯಲ್ಲಿರುವವರೆಗೂ ಇಗೋ ಇದು ಕಪ್ಪಾಗಿ ಕಾಣುತ್ತಿರುವುದೇ ವಾಸ್ತವ. ಬೆಳಕೆಲ್ಲಿ ? ಒಂದುವೇಳೆ ಇದೆ ಎಂದರೂ ಅದು ನಿನಗೆ ಕತ್ತಲಾಗಿ ಏಕೆ ಕಾಣಿಸುತ್ತಿದೆ ಎಂದು ನೀನು ಪ್ರಶ್ನಿಸುವೆ. ನೀನು ಕತ್ತಲನ್ನೇ ನೋಡುತ್ತಾ ಬೆಳಕು ಹೀಗೇಕೆ ಕತ್ತಲಾಯಿತು ಎಂದು ಪ್ರಶ್ನಿಸಿದರೆ ಲಾಭವೇನು ? ಕತ್ತಲೆಯ ದೃಷ್ಟಿ ಬಿಟ್ಟಿಲ್ಲ, ನಿನ್ನನ್ನು ಆ ದೃಷ್ಟಿ ಬಿಡದೆ ಹಿಡಿದಿರುವುದರಿಂದಲೇ ಬೆಳಕೇ ಕತ್ತಲಾಗಿ ಭಾಸಿಸುತ್ತದೆ. ಹಾಗಾದರೆ ಇದಕ್ಕೆ ಪರಿಹಾರವೇನು ? ಒಂದೇ. ಬೆಳಕನ್ನು ಸೇರುವುದು. ಆಗ ನಿನ್ನ ದೃಷ್ಟಿ ಬೆಳಕಾದ ಕಾರಣ ಅದಕ್ಕಿನ್ನು ಕತ್ತಲಿಲ್ಲ. ಎಲ್ಲ ಬೆಳಕೇ. ಇರುವುದೇ ಬೆಳಕು, ಅದು ಕತ್ತಲೆಯಾಗಿ ಹೇಗೆ ಬದಲಾಯಿತು ಎಂದು ನೀನು ಪ್ರಶ್ನಿಸುವುದಿಲ್ಲ. ಏಕೆಂದರೆ ಕತ್ತಲೆ ಎಂಬ ಭಾವವೇ ನಿನಗಿಲ್ಲ.

ಅಜ್ಞಾನ ಎಲ್ಲಿದೆ ? ಜೀವ ಎಲ್ಲಿಯವ, ಅದು ಮೊದಲಾ ಇದು ಮೊದಲಾ ಎಂಬ ವಿತರ್ಕವೆಲ್ಲ ಅನಾವಶ್ಯಕ. ಎಷ್ಟು ವಿತರ್ಕಿಸಿದರೂ ಅದಕ್ಕೆ ಉತ್ತರ ಎಂದಿಗೂ ಬರದು. ಉತ್ತರವೇ ಬೇಕೆಂದರೆ ಏಕೆ ಹೀಗಾಯಿತು ಎಂದಲ್ಲ

ನೀನು ಪ್ರಶ್ನಿಸಬೇಕಾದದ್ದು. ಹೇಗೆ ಇದು ತೊಲಗುತ್ತದೆ ಎಂದು. ಹೇಗೆ ತೊಲಗುವುದೋ ಆ ಉಪಾಯವನ್ನು ಹಿಡಿದು ಹೊರಟರೆ ಕೊನೆಗೇನು ಉತ್ತರ ದೊರೆಯುತ್ತದೋ ಅದೇ ಇದಕ್ಕೆ ಉತ್ತರ. ಇಂಥ ಉಪಾಯವೇ ಪ್ರಯತ್ನ ಅಥವ ಸಾಧನೆ. ಸಾಧನೆ ಮಾಡಿದರೆ ಮಾತ್ರ ಎಂದಿಗಾದರೂ ಸಿದ್ಧಿಯಾದೀತು. ಇಲ್ಲದಿದದ್ದರೆ ಸಿದ್ಧಿ ಅಪ್ರಾಪ್ತ. ಅಲ್ಲಿಯವರೆಗೆ ಅದು ಸಿದ್ಧಾಂತ ಮಾತ್ರವೆ ಆಗಿದ್ದು ಅನುಭವವೆನಿಸದು.

ಸಿದ್ಧವಸ್ತುವಿಗೆ ಸಾಧನೆಯೇ !

ಆದರೆ ಅದ್ವೈತದಲ್ಲಿ ಸಾಧನೆ ಎಂಬುದು ಉಂಟೇ ಎಂದು ಪ್ರಶ್ನೆ. ಈಗ ಅಲಭ್ಯವಾದ ಪದಾರ್ಥವನ್ನಾದರೆ ಸಾಧನೆಯಿಂದ ತಯಾರು ಮಾಡಿಕೊಳ್ಳಬೇಕು. ಇದಾದರೋ ಸಿದ್ಧವಸ್ತು, ಅದನ್ನು ಹೊಸದಾಗಿ ಸಾಧಿಸಿಕೊಳ್ಳುವುದೇನು ? ಮೊದಲಿಗೇ ಇಲ್ಲದಿದ್ದರೆ ಅದು ಆತ್ಮವೇ ಅಲ್ಲ. ಯಾವುದೋ ಒಂದು ಪದಾರ್ಥವಾದೀತು. ಅಲ್ಲೆಲ್ಲೋ ದೂರದಲ್ಲಿದೆ, ಅದನ್ನು ಹತ್ತಿರಕ್ಕೆ ತಂದುಕೊಳ್ಳುವ ಪ್ರಯತ್ನವಿರುತ್ತದಲ್ಲ ಎನ್ನಬಹುದು. ಅದು ನಮಗೆ ಎಂದಿಗೂ ದೂರವಾಗಿಲ್ಲ. ನಮ್ಮ ಸ್ವರೂಪವೇ ಅದಲ್ಲವೆ ? ಅಲ್ಲದೆ ಒಳಗೆ ಹೊರಗೆ ಎಂಬ ವ್ಯತ್ಯಾಸವಿಲ್ಲದೆ ಅದು ಸ್ವತಂತ್ರವಾಗಿ ವ್ಯಾಪಿಸಿದೆ. ಹೀಗಿರುವಾಗ ಈ ಸಾಧನೆ ಎಂಬುದು ಏನಿಲ್ಲಿ ?

ಪ್ರತ್ಯಭಿಜ್ಞೆಯೇ ಅದ್ವೈತ ಸಾಧನೆ. ಅದು ನಮ್ಮ ಸ್ವರೂಪ. ಅದನ್ನು ಮರೆತಿರಬಹುದು. ಮರೆತಾಗ ಅದು ನಮ್ಮದೇ ಆದರೂ ಮರೆಯಾಗಿರಬೇಕು ಎನ್ನುವೆಯೋ ! ಆಗ ಅದು ಕ್ರಿಯಾರೂಪವಾದ ಸಾಧನೆಯಲ್ಲ. ಕೇವಲ ಗುರುತಿಗೆ ತಂದುಕೊಂಡರೆ ಸರಿಹೋದೀತು. ಸಾಧನೆಯಲ್ಲದ ಸಾಧನೆ. ಇಂಥ ಸಾಧನೆಯಾದರೆ ನಾವು ಬೇಡವೆನ್ನುವುದಿಲ್ಲ ಎನ್ನುತ್ತಾರೆ ಅದ್ವೈತಿಗಳು. ಇದಕ್ಕೇ ಪ್ರತ್ಯಭಿಜ್ಞ ಎಂದು ಹೆಸರಿಟ್ಟರು. ಮರೆತ ಸತ್ಯವನ್ನು ಗುರುತಿಸುವುದೇ ಪ್ರತ್ಯಭಿಜ್ಞೆ, ಜೀವ ಜಗತ್ ಈಶ್ವರರೆಂಬ ಮೂರರ ಸ್ವರೂಪ ನಾನೇ, ನನ್ನ ಚೈತನ್ಯವೇ, ಅಧಿಷ್ಠಾನ ಜ್ಞಾನವೇ ಎಂಬ ವಿಷಯವನ್ನು ನಾವೆಲ್ಲರೂ ಮರೆತಿದ್ದೇವೆ. ಅದರ ಬದಲಿಗೆ ಎಲ್ಲೆಲ್ಲೂ ವಿಶೇಷ ರೂಪದಿಂದ ನೋಡುತ್ತ,

ವಿಶೇಷ ಜ್ಞಾನವೃತ್ತಿಯೇ ನನ್ನ ಸ್ವರೂಪವೆನ್ನುತ್ತಾ ಜೀವಿಸುತ್ತಿದ್ದೇವೆ. ಈ ವೃತ್ತಿಗಳೇ ನಾವು. ಇದೇ ಜೀವ. ಈ ಮೂಲಕ ನೋಡುತ್ತಾ ಹೋದರೆ ಆತ್ಮವು ವಿಶೇಷರೂಪವಾಗಿಯೇ ಕಾಣುತ್ತದೆ. ಅದೇ ಜಗತ್ತು. ಎರಡರ ನಡುವಿನ ವ್ಯವಹಾರವೇ ಕ್ರಿಯೆ. ಇದೇ ಸಂಸಾರ ಬಂಧನ.

ಈಗ ಇದೆಲ್ಲ ನಿರ್ಮೂಲವಾಗಬೇಕೆಂದರೆ ಇದರ ಮೂಲ ಯಾವುದೋ ಅದನ್ನು ಹೋಗಲಾಡಿಸಬೇಕು. ಅಜ್ಞಾನವೇ ಇದಕ್ಕೆ ಮೂಲ. ಸಾಮಾನ್ಯ ಜ್ಞಾನಾಭಾವವೇ ಅಜ್ಞಾನ. ಅದು ಕತ್ತಲೆಯಂಥದ್ದು. ಕತ್ತಲೆ ಹೋಗಬೇಕಾದರೆ ಒರೆಸುವುದು, ತೊಳೆಯುವುದು ಇಂಥ ಪ್ರಯತ್ನ ವ್ಯರ್ಥ. ದೀಪವನ್ನು ಬೆಳಗುವುದೊಂದೇ ಉಪಾಯ. ಬೆಳಗಿತೋ ಇನ್ನು ಕತ್ತಲೆಯಿಲ್ಲ. ಕತ್ತಲೆಯೂ ಆ ಬೆಳಕಿನಲ್ಲಿ ಸೇರಿ ಬೆಳಕಾಗಿಯೇ ದರ್ಶನ ಕೊಡುತ್ತದೆ. ಅಂತೆಯೇ ಸಚ್ಚಿದಾತ್ಮವಾದ ಸಾಮಾನ್ಯಜ್ಞಾನವನ್ನು ಅವಲಂಬಿಸಿದರೆ ಸಾಕು. ಅದೇ ಪ್ರಕಾಶ. ಅ ಪ್ರಕಾಶದಲ್ಲಿ ನಾಮರೂಪಗಳೆಂಬ ತಮಸ್ಸು ಕರಗಿ ಹೋಗಿ ಆತ್ಮ ಚೈತನ್ಯ ಪ್ರಕಾಶಮಾತ್ರವೇ ತೋರಿಕೊಳ್ಳುತ್ತದೆ. ಜ್ಞಾನವೇ ಅಜ್ಞಾನಕ್ಕೆ ಉತ್ತರ. ಜ್ಞಾನವೆಂದರೆ ಒಂದು ವೃತ್ತಿ. ಅದಿಲ್ಲಿ ಸವಿಶೇಷವಲ್ಲ. ಆತ್ಮಾಕಾರ – ಅಖಂಡಾಕಾರ – ಬ್ರಹ್ಮಾಕಾರ ನಿರ್ವಿಶೇಷ ವೃತ್ತಿ. ಶಂಕರರೂ ಈ ವೃತ್ತಿಯನ್ನೇ ವಿದ್ಯೆಯೆಂದೂ ಜ್ಞಾನವೆಂದೂ ಹೇಳಿದರು.

ಸರ್ವವೃತ್ತಿಗಳ ಸ್ಥಾನ ಮನಸ್ಸೇ

ಈ ವೃತ್ತಿ ಎಲ್ಲಿ ಉಂಟಾಗಬೇಕು ? ಮಿಕ್ಕೆಲ್ಲ ವೃತ್ತಿಗಳು ಎಲ್ಲಾಗುತ್ತವೋ ಅಲ್ಲೇ. ಮನಸ್ಸಿನಲ್ಲೇ ಅಲ್ಲವೆ ಎಲ್ಲ ವೃತ್ತಿಗಳೂ ತೋರಿಕೊಳ್ಳುವುದು. ಪ್ರಾಪಂಚಿಕ ವೃತ್ತಿಯಾಗಲಿ ಪಾರಮಾರ್ಥಿಕ ವೃತ್ತಿಯಾಗಲಿ ಮನಸಿನಲ್ಲೇ ಮೂಡಬೇಕು. 'ಮನ ಏವ ಮನುಷ್ಯಾಣಾಂ ಕಾರಣಂ' ಎಂದು ಪ್ರೌಢೋಕ್ತಿ. ಆದರೆ ಮಿಕ್ಕ ವೃತ್ತಿಗಳೆಲ್ಲ ಖಂಡ ವೃತ್ತಿಗಳಾದರೆ ಇದೊಂದೇ ಅಖಂಡ ವೃತ್ತಿ. ಅವು ಅನೇಕವಾದರೆ ಇದು ಏಕ. ಅವು ಅನಾತ್ಮಕ್ಕೆ ಸಂಬಂಧಿಸಿದ್ದಾದರೆ ಇದು ಆತ್ಮಕ್ಕೆ ಸಂಬಂಧಿಸಿದ್ದು. ವೃತ್ತಿಯಾದರೂ ಇದಕ್ಕೂ ಅದಕ್ಕೂ ಹಸ್ತಿಮಶಕಾಂತರವಿದೆ.

ಈಗ ಮತ್ತೊಂದು ಪ್ರಶ್ನೆ, ಈ ವಿಶೇಷವೃತ್ತಿಗಳು ದೊರೆತಷ್ಟು ಸುಲಭವಾಗಿ ಆ ಬ್ರಹ್ಮಾಕಾರ ವೃತ್ತಿ ದೊರೆಯುವುದೇ ? ಆ ಭಯ ಅನಗತ್ಯ. ಅದನ್ನು ಮೊದಲೇ ಹೇಳಿಯಾಗಿದೆ. ಆತ್ಮ ಮತ್ತು ಅನಾತ್ಮ ಒಂದನ್ನೊಂದು ವಿರೋಧಿಸಿ ಮಾತುಬಿಟ್ಟು ಬೇರೆಯಾಗಿಲ್ಲ. ಪ್ರತಿ ಪದಾರ್ಥದಲ್ಲೂ ಅವು ಕಲೆತಿರುತ್ತವೆ. ಒಂದು ಸಾಮಾನ್ಯ ರೂಪವಾಗಿ, ಮತ್ತೊಂದು ವಿಶೇಷರೂಪವಾಗಿ. ಇದರಲ್ಲಿ ಅಸ್ತಿಭಾತಿಗಳು ಸಾಮಾನ್ಯವಾದರೆ ನಾಮರೂಪವೆಂಬುವು ವಿಶೇಷ.

ಈ ಎರಡಂಶಗಳು ಬೆರೆತಿರದ ಯಾವ ಪದಾರ್ಥವೂ ಇಲ್ಲ, ಭಾವವೂ ಇಲ್ಲ. ಮತ್ತೇಕೆ ಭಯ ? ನಾಮರೂಪಗಳನ್ನು ನೋಡಿ ತದಾಕಾರವಾಗಿ ನಮ್ಮ ಮನಸ್ಸು ಹೇಗೆ ಬದಲಾಗುವುದೋ ಅಲ್ಲೇ ಇರುವ ಸತ್ ಚಿತ್‌ಗಳನ್ನು ದರ್ಶಿಸಿ ಅಂತೆಯೇ ಬದಲಾಯಿಸಿ ಕೊಳ್ಳಬಹುದಲ್ಲ !

ಆತ್ಮವಿಷಯಿಕ ವೃತ್ತಿ - ಅನಾತ್ಮ ವೃತ್ತಿ

ಮನಸ್ಸಿಗೊಂದು ಲಕ್ಷಣವಿದೆ ಏನನ್ನು ಭಾವಿಸಿದರೂ ಆರೀತಿಯಾಗಿಯೇ ಅದು ಬದಲಾಗಬಲ್ಲದು. ಮನಸ್ಸಿಗೆ ಸಾಕಾರವೇ ಆಗಬೇಕಿಲ್ಲ. ನಿರಾಕಾರವನ್ನೂ ಭಾವಿಸಬಲ್ಲದು. ಪೃಥಿವ್ಯಾದಿಗಳನ್ನು ಹೇಗೆ ನೋಡುತ್ತಿದ್ದೇವೋ ವಾಯು–ಆಕಾಶಗಳನ್ನೂ ಕಾಣಬಲ್ಲವರಾಗಿದ್ದೇವೆ. ಕೊನೆಗೆ ಸುಖ ದುಃಖಾದಿ ಭಾವಗಳು ಎಷ್ಟು ನಿರಾಕಾರವಾದರೂ ಅನುಭವಕ್ಕೆ ಬರುತ್ತಿವೆಯಲ್ಲವೆ ! ಹಾಗೆ, ಆತ್ಮವೂ ಸಹ ನಿರಾಕಾರವಾದರೂ ಆ ಲಕ್ಷಣವು ಪ್ರತಿಬಂಧಕವೇನೂ ಅಲ್ಲ. ಆಕಾಶವನ್ನು ಅನುಭವಕ್ಕೆ ತಂದುಕೊಂಡಂತೆ ಅದನ್ನೂ ತಂದುಕೊಳ್ಳಬಹುದು. ಯಾವ ಅಡತಡೆಯೂ ಇಲ್ಲ. ಮೇಲಾಗಿ ಆತ್ಮವೆಂಬುದು ಆಕಾಶದಂತೆ ವಿಷಯವಲ್ಲ. ಅದು ನನ್ನ ಸ್ವರೂಪ. ಆದ್ದರಿಂದ ಇನ್ನೂ ಸನ್ನಿಹಿತ. ಏನೆಂದರೆ ಈ ವಿಶೇಷ ವೃತ್ತಿಗಳನ್ನು ಭಾವಿಸಿದ ಹಾಗೆ ಮಹಾಸಾಮನ್ಯವಾದ ಆತ್ಮವನ್ನು ಭಾವಿಸಲು ನಮಗೆ ಅಭ್ಯಾಸವಿಲ್ಲ. ಅಭ್ಯಾಸ ಮಾಡಿಕೊಂಡರೆ ಬರುವಂಥಾದ್ದು. ಪಾಕ ಸಿದ್ಧತೆಯಿಂದ ಹಿಡಿದು ಸಂಗೀತ ಸಾಹಿತ್ಯಾದಿಗಳ ವರೆಗೂ ಎಲ್ಲವೂ ನಮ್ಮ

ಅಭ್ಯಾಸವನ್ನು ಅವಲಂಬಿಸಿವೆ. ಅದೇ ಇಲ್ಲಿಗೆ ಸೂತ್ರ. ಆದರೆ ಪಟ್ಟುಬಿಡದೆ ನಮ್ಮ ಪ್ರಯತ್ನ ಸಾಗಬೇಕು. ಅದಕ್ಕೆಂದೇ ಶ್ರವಣ–ಮನನ–ನಿದಿಧ್ಯಾಸನಗಳೆಂಬ ಮೂರನ್ನು ಹೇಳಿರುವುದು. ಮೊದಲಿಗೆ ಶ್ರವಣ, ನಮ್ಮ ದೃಷ್ಟಿಯನ್ನು ಆತ್ಮನತ್ತ ಹೊರಳಿಸುವುದು. ಅದರಿಂದ ಆತ್ಮವಿಷಯಕವಾದ ವೃತ್ತಿ ಇಲ್ಲವೆ ಜ್ಞಾನ ಏರ್ಪಡುತ್ತದೆ. ಆದರೆ ಅದರೊಂದಿಗೆ ಅನಾತ್ಮ ವೃತ್ತಿಗಳೂ ಮೂಡುತ್ತಿರುತ್ತವೆ. ಅದನ್ನು ನಿವಾರಿಸಲು ಮನನ ಸಾಗಬೇಕು. ಇದರಿಂದಾಗಿ ಅನಾತ್ಮವೆಂದರೆ ಏನೋ ಅಲ್ಲ, ಆತ್ಮವೇ ಹಾಗೆ ಭಾಸಿಸುತ್ತಿದೆ ಎಂಬ ತಿಳಿವಿನಿಂದ ಎರಡಕ್ಕೂ ಇರುವ ವೈರುದ್ಧ್ಯ ತೊಲಗುತ್ತದೆ. ಶ್ರವಣವು ಅಜ್ಞಾನಕ್ಕೆ ಉತ್ತರವಾದರೆ ಮನನವು ಸಂಶಯ ನಿವರ್ತಕ. ಮಾನಸಿಕವಾಗಿ ಇಂಥ ನಿಶ್ಚಯ ಜ್ಞಾನ ಏರ್ಪಟ್ಟರೂ ಬಾಹ್ಯವಾಗಿ ಮತ್ತೆ ಅನಾತ್ಮ ಪ್ರಪಂಚದೊಡನೆ ವ್ಯವಹರಿಸುವುದು ತಪ್ಪಿದ್ದಲ್ಲ. ಆದ್ದರಿಂದ ವಿಜಾತೀಯ ಭಾವಗಳು ಇಣುಕಿ ನೋಡುತ್ತಲೇ ಇರುತ್ತವೆ. ಶರೀರವಿರುವವರೆಗೆ ಈ ವ್ಯವಹಾರ ತಪ್ಪಿದ್ದಲ್ಲ. ಪ್ರಾರಬ್ಧ ಕಳೆಯುವವರೆಗೆ ಶರೀರ ಸಂಪರ್ಕ ತಪ್ಪದು. ಆದ್ದರಿಂದ ದೇಹಪಾತವಾಗುವವರೆಗೂ ಆತ್ಮವೃತ್ತಿಗೂ ಅನಾತ್ಮವೃತ್ತಿಗಳಿಗೂ ಹೋರಾಟ ನಡದೇ ಇರುತ್ತದೆ. ಅದಕ್ಕೆ ಪರಿಷ್ಕಾರವನ್ನು ಹುಡುಕಿ ಕಂಡುಕೊಳ್ಳಬೇಕಿದೆ. ಆ ಪರಿಷ್ಕಾರವೇ ಸಾಧನ ಮಾರ್ಗದಲ್ಲಿ ಮೂರನೆಯದಾದ ನಿದಿಧ್ಯಾಸನ. ಅನಾತ್ಮವೃತ್ತಿಗಳು ಮೂಡುತ್ತಿದ್ದರೆ ಆ ಕೂಡಲೇ ಅವನ್ನು ಆತ್ಮವೃತ್ತಿಯಾಗಿ ಬದಲಾಯಿಸುತ್ತಾ ತದೇಕ ನಿಷ್ಠೆಯಿಂದ ಜೀವಿಸುವುದೇ ನಿದಿಧ್ಯಾಸನ. ಅಕ್ಕಿ ಲಭ್ಯವಾಗುವವರೆಗೂ ಬತ್ತವನ್ನು ಕುಟ್ಟಬೇಕಾದದ್ದೇ. ಆತ್ಮ ದೃಷ್ಟಿ ನಿಲ್ಲುವವರೆಗೂ ಈ ಶ್ರವಣಾದಿ ತ್ರಯವನ್ನು ಆಚರಿಸುತ್ತಾ ಸಾಗಬೇಕಾದದ್ದೇ. ದೃಷ್ಟಿ ಅಲ್ಲಿ ನಿಂತರೆ ಅದೇ ನಿಷ್ಠೆ. ಅದೇ ಸಾಕ್ಷಾತ್ಕಾರ. ಇದು ಸಿದ್ಧಿಸಿದರೆ ಅದೇ ಜೀವನ್ಮುಕ್ತಿ. ದೇಹಪಾತವಾಗಿ ಮತ್ತೊಂದು ದೇಹಧಾರಣೆಯ ಪ್ರಶ್ನೆಯೇ ಇಲ್ಲವೆಂದಾಗ, ಅದೇ ವಿದೇಹಮುಕ್ತಿ.

ಆತ್ಮಾಕಾರ ವೃತ್ತಿ

ಆದರೆ ಒಂದು ಮಾತು. ಆತ್ಮಾಕಾರ ವೃತ್ತಿ ಎನ್ನುವುದು ಮನಸ್ಸಿನಲ್ಲಿ ಮೂಡುವುದಲ್ಲವೆ! ಅದರಿಂದ ಬಾಹ್ಯವಾದ ಅನಾತ್ಮಪ್ರಪಂಚ ಆತ್ಮವಾಗಿ ಬದಲಾಗುವುದು ಹೇಗೆ ಸಂಭವ? ಒಂದು 'ನಗರ'ದ ವೃತ್ತಿ, ಅದರ ಹೆಸರು, ಅದಕ್ಕೆ ಸಂಬಂಧಿಸಿದ ವೃತ್ತಿಯೇ ನಗರವಲ್ಲ. ಇದು ಅದರ ಪ್ರತಿಚ್ಛಾಯೆ. ನಗರ ಬಾಹ್ಯವಾಗಿರುವ ಪದಾರ್ಥ. ಅದು ಬಿಂಬವಾದರೆ ಅದರ ಪ್ರತಿಬಿಂಬವೇ ನಮ್ಮ ಮನಸ್ಸಿನಲ್ಲಿ ಏರ್ಪಡುವ ವೃತ್ತಿ. ಅದೇ ಬಿಂಬವಲ್ಲ. ಈ ಪ್ರತಿಬಿಂಬವನ್ನು ಹಿಡಿದು ಆ ಬಿಂಬ ಎಲ್ಲಿದೆಯೋ ಅನ್ವೇಷಿಸುತ್ತಾ ಹೋಗಬೇಕು. ಆಗಲೇ ಅದನ್ನು ನಾವು ನೋಡಬಲ್ಲೆವು. ಈಗ ನೀವು ಹೇಳುವುದು ವಿಚಿತ್ರವಾಗಿ ಕಾಣಿಸುತ್ತಿದೆ. ಆತ್ಮಾಕಾರ ವೃತ್ತಿ ಎನ್ನುತ್ತಿದ್ದೀರಿ. ಈ ವೃತ್ತಿಯೇ ಹೇಗೆ ಆತ್ಮವಾಗುತ್ತದೆ? ವೃತ್ತಿ ಮಾನಸಿಕವಾದರೆ ಆತ್ಮ ತದ್ವಿಲಕ್ಷಣವಲ್ಲವೆ ?

ಇದು ಪ್ರತಿಯೊಬ್ಬರನ್ನೂ ಕವಿಯುವ ಸಂದೇಹ. ಇದಕ್ಕೆ ಸಮಾಧಾನವೇನು? ಲೋಕದಂತಲ್ಲ ಇಲ್ಲಿನ ವ್ಯವಹಾರ. ಲೋಕದಲ್ಲಿ ವಸ್ತುವೆಲ್ಲೋ ಇದ್ದರೆ ಅದಕ್ಕೆ ಸಂದ ಭಾವಮಾತ್ರವೇ ಮನಸ್ಸಿಲ್ಲಿ ಏರ್ಪಡುತ್ತದೆ. ಎರಡಕ್ಕೂ ಎಷ್ಟೊ ಅಷ್ಟು ದೂರವಿರುತ್ತದೆ. ಆದ್ದರಿಂದ ಇದೇ ಅದಲ್ಲ. ಆದರೆ ಇಲ್ಲಿ ವಸ್ತು ಸತ್–ಚಿತ್ ಎಂದೆವು. ಸತ್–ಚಿತ್ ಸಾಮಾನ್ಯವಾದ್ದರಿಂದ ಒಳಗೆ ಹೊರಗೆ ಎಂಬ ವ್ಯತ್ಯಾಸವಿಲ್ಲದೆ ಸರ್ವತ್ರಾ ವ್ಯಾಪಿಸಿರುತ್ತದೆ. ಹಾಗೆಂದಾಗ ತದಾಕಾರವಾದ ಜ್ಞಾನಕ್ಕೆ ಭಿನ್ನವಾಗಿ ಅದು ಇನ್ನೆಲ್ಲಿ ಇರಬಲ್ಲದು? ಅದು ಜ್ಞೇಯವೂ ಅಲ್ಲದ ಕೇವಲ ಜ್ಞಾನ. ನಿರಾಕಾರವಾದ್ದರಿಂದ ಸರ್ವವ್ಯಾಪಕ. ಸರ್ವವ್ಯಾಪಕವೆಂಬ ವೃತ್ತಿಯೇ ನಮಗೆ ಏರ್ಪಡುವ ವೃತ್ತಿಯೂ ಸಹ. ಹೀಗಿರುವಾಗ ಎರಡೂ ವ್ಯಾಪಕಗಳು ಹೇಗೆ ಇರಬಲ್ಲವು? ಎರಡೂ ಬೆರೆತು ಒಂದಾಗಬೇಕಿದೆ. ಪ್ರಮಾಣವಾದ ವೃತ್ತಿಗೆ ಭಿನ್ನವಾಗಿ ಪ್ರಮೇಯವಾದ ಆತ್ಮ ಇಲ್ಲ. ಆತ್ಮ ಪ್ರಮೇಯವೂ ಅಲ್ಲ. ಆದ್ದರಿಂದಲೇ ಆತ್ಮಾಕಾರವಾದ ವೃತ್ತಿಯನ್ನು ಅಖಂಡ ಎಂದದ್ದು.

ಅಖಂಡವಾದ ಜ್ಞಾನವೇ ಆತ್ಮವಲ್ಲವೆ! ಆದ್ದರಿಂದ ಪ್ರಮಾಣವಾದರೂ ಅದೇ, ಪ್ರಮೇಯವಾದರೂ ಅದೇ. ತಾನೇ ಪ್ರಮಾಣವಾಗಿ ತಾನೇ ಅದಕ್ಕೆ ಪ್ರಮೇಯವಾಗಿ ತನ್ನನ್ನು ತಾನೇ ಹಿಡಿದುಕೊಳ್ಳುತ್ತಿದೆ. 'ಧ್ಯಾನೇ ನಾತ್ಮನಿ ಪಶ್ಯಂತಿ ಕೇಚಿದಾತ್ಮನ ಮಾತ್ಮನಾ' ಎಂದು ಶಾಸ್ತ್ರೋಕ್ತಿ. ತಾನೇ ಎಂದು ತಿಳಿಯದೆ ತನ್ನ ಸ್ವರೂಪವನ್ನು ವೃತ್ತಿಜ್ಞಾನವೆಂಬ ಪ್ರಮಾಣದೊಡನೆ ಅನ್ವೇಷಿಸಿ, ಅನ್ವೇಷಣೆ ಪೂರ್ತಿಯಾಗುವ ಹೊತ್ತಿಗೆ ಅದು ತಾನೇ ಎಂದು ಗ್ರಹಿಸುವುದೇ ಕೊನೆಗೆ ಅದ್ವೈತ ಸಾಧನೆ. ಒಂದು ರೀತಿಯಲ್ಲಿ ಸಿದ್ಧ ಸಾಧನೆ ಇದು.

ಪ್ರಾಪ್ತಸ್ಯ ಪ್ರಾಪ್ತಿಃ

ಇಷ್ಟಕ್ಕೂ ನಾವು ಬೆಟ್ಟವನ್ನು ತೋಡಿ ಇಲಿಯನ್ನು ಹಿಡಿದಂತಾಯಿತು. ನಮ್ಮ ಸ್ವರೂಪವನ್ನು ನಾವೇ ಮರೆತು ಮತ್ತೆ ನಾವೇ ಅದನ್ನು ಇದು ಎಂದು ಗುರುತಿಸಿದೆವು. ಇಲ್ಲೊಂದು ರಹಸ್ಯವನ್ನು ನೆನಪಿನಲ್ಲಿಡಬೇಕು. ಅದ್ವೈತದಲ್ಲಿ ಯಾವುದೋ ಪ್ರಯತ್ನದಿಂದ ಹೊಸದಾಗಿ ವಸ್ತುವನ್ನು ಕೈವಶ ಮಾಡಿಕೊಳ್ಳುತ್ತೇವೆ ಎಂಬ ಪ್ರಶ್ನೆಯೇ ಇಲ್ಲ. ಇರುವುದೇನೋ ಅದೇ ಇದೆ. ಇಲ್ಲದ್ದು ನಿಜವಾಗಿಯೂ ಇಲ್ಲ. ಇಲ್ಲದ್ದನ್ನು ಇಲ್ಲವೆಂದು ಭಾವಿಸಿ, ಇರುವುದನ್ನು ಇದೆಯೆಂದು ಭಾವಿಸುವುದೇ ಅದ್ವೈತಿಗಳು ಹೇಳುವ ಸಾಧನೆ. ಕೊರಳಲ್ಲಿ ಮುತ್ತಿನ ಹಾರವಿದ್ದರೂ ಮರೆತು, ಎಲ್ಲಿ ತೆಗೆದಿಟ್ಟಿದ್ದೇವೆಂದು ಹುಡುಕುತ್ತಾ ಹೋಗಿ, ಹಾರ ನನ್ನ ಕೊರಳಲ್ಲೇ ಇದೆ ಎಂದು ಗುರುತಿಸಿ ಹುಡುಕುವುದನ್ನು ಬಿಟ್ಟಂತೆ ಆತ್ಮಾನ್ವೇಷಣೆ. 'ಪ್ರಾಪ್ತಸ್ಯ ಪ್ರಾಪ್ತಿಃ' – ಇರುವದನ್ನೇ ಗಳಿಸಿಕೊಳ್ಳುವುದು, 'ಪರಿಹೃತಸ್ಯ ಪರಿಹಾರಃ' – ಬಿಟ್ಟದ್ದನ್ನೇ ಮತ್ತೆ ಬಿಡಿಸಿಕೊಳ್ಳುವುದು, ಇಂಥದ್ದೇ ಅನಾತ್ಮದ ವಿಷಯ. ಆನಾತ್ಮ ನನಗೆ ಅನ್ಯವಾಗಿದ್ದರೂ ಹಾಗೆಂದು ನಾವು ಭಾವಿಸುವುದಿಲ್ಲ. ಬಿಸುಟ ಹೂಮಾಲೆ ಕಾಲಿಗೆ ಸೋಕಿ ಹಾವೆಂದು ಬೆಚ್ಚಿಬಿದ್ದಂತೆ. ಬೆಳಕಿನಲ್ಲಿ ನೋಡಿ ಹಾವಿಲ್ಲವೆಂದು ತಿಳಿದಂತೆಯೇ ಈ ಅನಾತ್ಮ ಜಗತ್ತು ಇಲ್ಲವೆಂದು ಗ್ರಹಿಸುತ್ತೇವೆ.

ಆತ್ಮವನ್ನು ಹಿಡಿದೇ ಅನಾತ್ಮದ ನಿವಾರಣೆ

ಇಲ್ಲಿ ವಿಷಯವೇನೆಂದರೆ ಅನಾತ್ಮ ಇರುವುದೆಂಬ ಭ್ರಮೆ ಒಂದು – ಆತ್ಮ ಇಲ್ಲವೆಂಬ ಭ್ರಮೆ ಒಂದು. ಎರಡೂ ನಮಗೆ ಭ್ರಮೆಯೇ. ಇವೆರಡೂ ಹೋಗುವವರೆಗೆ ಸಮಸ್ಯೆಯು ಸಮಸ್ಯೆಯಾಗಿಯೇ ಉಳಿಯುತ್ತದೆ. ಭ್ರಮೆಯನ್ನು ತೊಲಗಿಸುವುದೇ ಪರಿಷ್ಕಾರ. ಎರಡರಲ್ಲಿ ಆತ್ಮ ಇಲ್ಲವೆನ್ನುವ ಭ್ರಮೆಯನ್ನು ಮೊದಲು ತೊಲಗಿಸಿಕೊಳ್ಳಬೇಕು. ಏಕೆಂದರೆ ಒಂದನ್ನು ಹಿಡಿಯದೆ ಮತ್ತೊಂದನ್ನು ಬಿಡಲು ಸಾಧ್ಯವಿಲ್ಲ. ಆತ್ಮವನ್ನು ಹಿಡಿದೇ ಅನಾತ್ಮ ಭಾವವನ್ನು ತೊಡೆಯಬೇಕು. ಆತ್ಮನನ್ನು ಹೇಗೆ ಹಿಡಿಯುವುದು ? ನನ್ನ ಸ್ವರೂಪವನ್ನು ದೇಹಾದಿ ಸಂಘಾತವಾಗಿಯಲ್ಲದೆ ಸಚ್ಚಿದಾಕಾರವಾಗಿ ಭಾವಿಸುತ್ತಾ ಹೋಗಬೇಕು. ಹಾಗೆ ಭಾವಿಸಿದರೆ ಮನಸ್ಸಿನಲ್ಲಿ ತದಾಕಾರ ವೃತ್ತಿ ಏರ್ಪಡುತ್ತದೆ. ಅದು ಮಹಾಸಾಮಾನ್ಯವಾದ್ದರಿಂದ ಆ ದೃಷ್ಟಿಯಿಂದ ನೋಡಿದರೆ ದೃಶ್ಯ ಪ್ರಪಂಚವೆಲ್ಲ ತದಾಕಾರವಾಗಿಯೇ ಬದಲಾಯಿಸಿ ತೋರುತ್ತದೆ. ವಸ್ತುವೋ ಬದಲಿಸದು. ಆಭಾಸವಾದಾಗಲೇ ಬದಲಾಗುವುದು. ಪ್ರಪಂಚ ಎನ್ನುವುದು ಆತ್ಮಕ್ಕೆ ಆಭಾಸವೇ ಆದ್ದರಿಂದ ಆತ್ಮ ಇದೆಂದು ಗುರುತಿಸಿದರೆ ಸಾಕು. ಅದರಲ್ಲೇ ಅನಾತ್ಮವೂ ಸಹ ಲಯವಾಗುತ್ತದೆ.

ಆದರೆ ಇಲ್ಲೊಂದು ಪ್ರಶ್ನೆ. ಮನಸ್ಸೆಂಬ ಪ್ರಮಾಣ ನಮ್ಮ ಬಳಿಯೇ ಇದೆ. ಪರಮಾತ್ಮ ಎಂಬ ಪ್ರಮೇಯ ಎಲ್ಲೆಂದರಲ್ಲಿದೆ. ಆದರೂ ಮನಸ್ಸು ಅದನ್ನು ಹಿಡಿಯಲಾರದೆ ಹೋಗುತ್ತಿದೆ ಎಂದರೆ ತದಾಕಾರ ವೃತ್ತಿ ಏರ್ಪಡುವುದು ಅಸಾಧ್ಯವಲ್ಲವೆ ? ಸಾಧ್ಯವಾದಲ್ಲಿ ಶ್ರವಣ ಮಾಡಿದ ಪ್ರತಿಯೊಬ್ಬನಿಗೂ ಆ ವೃತ್ತಿ ಮೂಡಬೇಕಲ್ಲವೆ ? ಆ ವೃತ್ತಿ 'ಮನುಷ್ಯಾಣಾಂ ಸಹಸ್ರೇಷು' ಎಂದಂತೆ ಕೋಟಿಗೊಬ್ಬನಿಗೆ ಉಂಟಾದರೆ ಹೆಚ್ಚು. ಇದಕ್ಕೇನು ಕಾರಣ ?

ಅದು ಪ್ರಮೇಯದ ತಪ್ಪಲ್ಲ. ಪ್ರಮೇಯವು ಸರ್ವತ್ರಾ ಪ್ರಕಾಶಿಸುತ್ತಲೇ ಇದೆ. ಹಾಗಾದರೆ ಅದನ್ನು ಹಿಡಿಯಲು ಹೊರಟಿರುವ ಮನಸ್ಸೆಂಬ

ಪ್ರಮಾಣದ ದೋಷವೇ ಇರಬೇಕು. ವಸ್ತುವು ಸಿದ್ಧವಾಗಿದ್ದರೂ ಬುದ್ಧಿಯು ಸಿದ್ಧವಾಗುತ್ತಿಲ್ಲ. ಆಗದಿರುವದಕ್ಕೆ ಬುದ್ಧಿಯದೇ ದೋಷ. ಅದು ಎರಡು ಬಗೆ. ಒಂದು ಆವರಣ–ಮತ್ತೊಂದು ವಿಕ್ಷೇಪ (ಆವರಣವೆಂದರೆ ಧರ್ಮಾಧರ್ಮ ಕಾಮಾದಿಗಳ ಅಡ್ಡಿಯಿಂದ ಜೀವರ ಜ್ಞಾನ ಹೊರತೋರದಿರುವುದೆಂದು ಶಂಕರರು ಅಲ್ಲಲ್ಲಿ ಹೇಳಿರುತ್ತಾರೆ – (ಸೂಭಾ 1.1.5, ಗೀಭಾ 3–29,4–5). ವಿಕ್ಷೇಪ ಎಂಬ ಶಬ್ದವು ಶಂಕರೋತ್ತರ ಕಾಲದ್ದು. ಆವರಣ ವಿಕ್ಷೇಪಗಳ ಅಡ್ಡಿಗಿಂತಲೂ ಬೇರೆಯಾದ ಮೂಲಾವಿದ್ಯಾ ಶಕ್ತಿ ಇದೆ ಎಂಬ ವ್ಯಾಖ್ಯಾನಕಾರರ ಅಭಿಪ್ರಾಯಕ್ಕೆ ಭಾಷ್ಯದಲ್ಲಿ ಆಧಾರವಿಲ್ಲ–ಈ ಪದಗಳ ಸೂಚನಾರ್ಥವನ್ನು ಪ್ರಸ್ತುತಕ್ಕೆ ಗಮನಿಸಿದರೆ ಸಾಕು).

ಆವರಣವೆಂದರೆ ಮಾಲಿನ್ಯ. ಕನ್ನಡಿಗೆ ಅಂಟಿದ ಧೂಳಿನಂಥದ್ದು. 'ಯಥಾದರ್ಶೋ ಮಲೇನಚ (ಗೀತೆ)'. ಹಾಗೆ ಕೊಳೆ ಹತ್ತಿದ ಕನ್ನಡಿಯಲ್ಲಿ ದರ್ಶನ ಅಸ್ಪಷ್ಟ. ಹಾಗೆ ಕೆಲವರ ಬುದ್ಧಿಯು ಸಹಜವಾಗಿ ಅಸಮರ್ಥವಾಗಿದ್ದು ಒಂದು ಉನ್ನತವಾದ ಭಾವವನ್ನು ಎಷ್ಟು ವಿವರಿಸಿದರೂ ಅವರು ಅದನ್ನು ಗ್ರಹಿಸುವುದಿಲ್ಲ. ಅಂತಯೇ ಕೆಲವರ ಬುದ್ಧಿ ಏನನ್ನಾದರೂ ಕೇಳಿದ ಕೂಡಲೆ ಗ್ರಹಿಸಲು ಸಮರ್ಥವಾಗಿರುತ್ತೆ. ಆದರೆ ಕೆಲವರು ಹೇಳಿದ ವಿಷಯವನ್ನು ಬಿಟ್ಟು ಅದಕ್ಕೆ ಭಿನ್ನವಾಗಿ ಮತ್ತೇನನ್ನೋ ಹಿಡಿದು ತೊಳಲಾಡುತ್ತಾರೆ. ಇದು ಒಡೆದ ಕನ್ನಡಿಯಂತೆ. ಬಿಂಬ ಕಾಣಿಸುತ್ತಾದರೂ ಛಿನ್ನಾಭಿನ್ನವಾದ ಚೂರುಗಳಾಗಿ ಕಾಣಿಸುತ್ತವೆ. ಇದರಲ್ಲಿ ಮೊದಲನೆಯದು ಆವರಣ; ಎರಡನೆಯದು ವಿಕ್ಷೇಪ. ಹಲವರಿಗೆ ದಿಟಕ್ಕೂ ವಿಷಯ ಸ್ಫುರಿಸುವುದೇ ಇಲ್ಲ. ಕೆಲವರಿಗೆ ವಿಷಯಕ್ಕಿಂತ ಭಿನ್ನವಾಗಿ ಸ್ಫುರಣೆಯಾದೀತು. ಇದೇ ನಮಗೆ ಅವಸ್ಥಾತ್ರಯ ರೂಪವಾಗಿ ತಯಾರಾಗಿದೆ. ಸುಷುಪ್ತಿಯಲ್ಲಿ ಸ್ಫುರಣೆಯೇ ಇಲ್ಲ. ಜಾಗ್ರತ್ ಸ್ವಪ್ನದಲ್ಲಿದ್ದರೂ ಅದು ಆಯಾ ವಿಶೇಷ ರೂಪವಾಗಿ ಸ್ಫುರಿಸುತ್ತಿದೆ.

ಚಿತ್ತಶುದ್ಧಿ - ಏಕಾಗ್ರತೆ : ಆವರಣ - ವಿಕ್ಷೇಪ

ಆದ್ದರಿಂದ ಆತ್ಮಾಕಾರ ವೃತ್ತಿ ಉಂಟಾಗಬೇಕೆಂದರೆ ಶ್ರವಣಾದಿಗಳನ್ನು ಸ್ವಲ್ಪಕಾಲ ಪಕ್ಕಕ್ಕಿಟ್ಟು ಮೊದಲು ಮನಸ್ಸನ್ನು ಸಂಸ್ಕರಿಸಿಕೊಳ್ಳಬೇಕು. ಅದಕ್ಕೆಂದೇ ಶಾಸ್ತ್ರವು ಕರ್ಮಯೋಗ ಮತ್ತು ಭಕ್ತಿಯೋಗ / ಉಪಾಸನಾ ಯೋಗವನ್ನು ವಿಧಿಸಿರುವುದು. ನಿಷಿದ್ಧ ಕಾಮ್ಯ ಕರ್ಮಗಳೆರಡನ್ನು ಬಿಟ್ಟು ಸತ್ಕರ್ಮಗಳನ್ನು ಮಾತ್ರ ಆಚರಿಸುತ್ತಾ ಹೋದಲ್ಲಿ ಮನಸ್ಸಿಗೆ ಶುದ್ಧಿ ಏರ್ಪಡುತ್ತದೆ ಎನ್ನುತ್ತಾರೆ. ಆದರೆ ಕೇವಲ ಕರ್ಮಾನುಷ್ಠಾನಕ್ಕಿಂತ ಕರ್ಮಯೋಗ ಒಳಿತು. ಅದರಲ್ಲಿ 'ಅಹಂ' 'ಮಮ'ಗಳಿರುವುದಿಲ್ಲ. ಹಾಗೆಯೇ ಸಮಾಧಿ, ಭಕ್ತಿ ಯೋಗಗಳಿಂದ ಮನಸ್ಸಿಗೆ ಒಂದು ಲಕ್ಷ್ಯದ ಮೇಲೆ ಏಕಾಗ್ರತೆ ಏರ್ಪಡುತ್ತದೆ.

(ಸಮಾಧಿ ಎಂದರೆ ಮನಸ್ಸನ್ನು ಆತ್ಮನಲ್ಲಿಯೇ ನಿಲ್ಲಿಸಿಕೊಳ್ಳುವಿಕೆ, ಚಿತ್ತಸಮಾಧಾನ. ಗೀತೆಯಲ್ಲಿ ಸಮಾಧಿ ಶಬ್ದಕ್ಕೆ 'ಅಂತಃಕರಣ, ಆತ್ಮ, ವಿವೇಕ ಪ್ರಜ್ಞೆ, ಜ್ಞಾನ ಎಂಬ ಅರ್ಥಗಳಿವೆ. ಇಲ್ಲಿ ಸಮಾಧಿಯೆಂದರೆ ದ್ವೈತ ಗ್ರಂಥವಾದ ಪಾತಂಜಲದ ನಿರ್ವಿಕಲ್ಪ ಸಮಾಧಿಯಲ್ಲ).

ಮಾಲಿನ್ಯ ರೂಪವಾದ 'ಆವರಣ'ಕ್ಕೆ ಚಿತ್ತಶುದ್ಧಿ ಉತ್ತರವಾದರೆ – ವಿಕ್ಷೇಪಕ್ಕೆ ಪರಿಷ್ಕಾರ ಏಕಾಗ್ರತೆ. ಇದರಿಂದ ಮನಸ್ಸು ಚೆನ್ನಾದ ಪರಿಪಾಕಕ್ಕೆ ಬಂದು, ಹರಿತಗೊಂಡು, ಶ್ರವಣಾದಿಗಳನ್ನು ಮಾಡಲು ಉನ್ಮುಖವಾಗುತ್ತದೆ. ಆದ್ದರಿಂದ ಆತ್ಮಾಕಾರ ವೃತ್ತಿ ಮೂಡಲು ಅಭ್ಯಂತರವಿಲ್ಲ.

ಕರ್ಮ-ಭಕ್ತಿ-ಸಮಾಧಿ

ಆದರೆ, ಅದು ಸಾಂಪ್ರದಾಯಿಕವಾಗಿ ಹೇಳಿದ ಮಾತು. ಸಾಧಕನಾದವನು ಕರ್ಮ, ಭಕ್ತಿ ಸಮಾಧಿಗಳನ್ನು ಪ್ರತ್ಯೇಕವಾಗಿ ಒಂದೊಂದನ್ನೇ ಅಭ್ಯಸಿಸುತ್ತ ಸಾಗಿದರೆ ಅದರಲ್ಲೇ ಮುಳುಗಿ ಹೋಗುವ ಪ್ರಮಾದವುಂಟು. ಇವು ಜ್ಞಾನಕ್ಕೆ ದಾರಿಯನ್ನು ತೋರುವ ಆಲಂಬನಗಳೇ ಹೊರತು ಗಮ್ಯವಲ್ಲ. ಏನನ್ನು

ಅಭ್ಯಾಸ ಮಾಡಿಕೊಂಡರೂ ಅದನ್ನು ಬಿಡುವುದು ಬಹು ಕಠಿಣ. ಆದ್ದರಿಂದ ಅವೇನೋ ಭಿನ್ನವಾಗಿವೆ ಎಂದು ಭಾವಿಸದೆ ಆತ್ಮವನ್ನು ಕುರಿತು ಹೇಳುವ ಮಾತುಗಳನ್ನು ನಿರಂತರವೂ ಕೇಳುತ್ತಿರುವ ಕರ್ಮವನ್ನು ಮಾಡುತ್ತಿದ್ದರೆ ಸಾಕು. ಅದು ಕರ್ಮಯೋಗವೇ. ಸತ್ಸಂಗ, ಸದ್ಗೋಷ್ಠಿ, ಸದ್ಗ್ರಂಥ ಪಠನಗಳೇ ಕರ್ಮಯೋಗ. ಜ್ಞಾನಕ್ಕೆ ಉಪಕರಿಸುವ ಕರ್ಮವೇ ನಿಜವಾದ ಯೋಗ. ಹಾಗೆ ಆ ಸ್ವರೂಪದಮೇಲೇ ಮನಸ್ಸನ್ನು ನಿಲ್ಲಿಸಿಕೊಳ್ಳುವುದು ಸಮಾಧಿ ಯೋಗ. ನಿರಾಕಾರವಾದ ಅದನ್ನೇ ಸಾಕಾರವಾದ ಪ್ರತಿ ಪದಾರ್ಥಗಳಲ್ಲೂ ದರ್ಶಿಸುತ್ತಾ ಹೋಗುವುದೇ ವಾಸ್ತವವಾಗಿ ಭಕ್ತಿಯೋಗ. ಈ ವಿಧವಾಗಿ ಈ ಮೂರೂ ಜ್ಞಾನದಲ್ಲಿ ಮೂರು ಭಾಗಗಳಾಗಿ ಅದರೊಂದಿಗೆ ಕೂಡಿಕೊಳ್ಳುವುದೇ ಯೋಗವೆಂಬ ಮಾತಿನ ಅರ್ಥ. ಆಗಲೇ ಎಲ್ಲವನ್ನೂ ಸೇರಿಸಿ ಏಕವಾಕ್ಯತ್ವ ಇಲ್ಲವೆ ಏಕ ಸೂತ್ರತೆ ಏರ್ಪಡುತ್ತದೆ. ಒಂದೇ ಸೂತ್ರದಲ್ಲಿ ಈ ಮೂರೂ ಮಣಿಗಳಂತೆ ಕಾಣಿಸುತ್ತವೆ. ಇದೇ ನಿಜವಾದ ಅದ್ವೈತ ಸಾಧನೆ.

ಪ್ರಾರಬ್ಧ - ಪ್ರಯತ್ನ

ಆದರೆ ಈ ಸಾಧನಾ ಮಾರ್ಗದಲ್ಲೊಂದು ಸಂಕ್ಲಿಷ್ಟ ಎದುರಾಗಿದೆ. ಇದೇನೂ ಹೇಳಿದಷ್ಟು ಸುಲಭವಲ್ಲ. ಕಾಗೆಗಳನ್ನು ಗಣನೆ ಮಾಡುವಂತೆ ನಿಖರವಾಗಿ ಸಿದ್ಧಾಂತವನ್ನು ಹೇಳಿದರೂ ಕಾರ್ಯರಂಗಕ್ಕೆ ಇಳಿದಾಗ ಎಷ್ಟೋ ಸಮಸ್ಯೆಗಳು ಎದುರಾಗುತ್ತವೆ. ಈ ಮೊದಲು ಹೇಳಿದ ಆವರಣ ಮತ್ತು ವಿಕ್ಷೇಪಗಳನ್ನು ಹಾಗೇ ಇಟ್ಟು ನಾವು ಸಾಧನೆಯನ್ನು ಮಾಡಲು ಸಾಧ್ಯವೆ ಎಂದು ಸಂದೇಹ. ಏಕೆಂದರೆ ಪ್ರಾರಬ್ಧವೆಂಬುದು ನಮ್ಮ ಜೀವನದಲ್ಲಿ ಒಂದು ದೆವ್ವದಂತೆ ತಯಾರಾಗಿದೆ. ಬಾಳೆಲ್ಲ ರಾಜ್ಯವನ್ನಾಳುತ್ತಿರುವುದು ಅದೇ. ಪ್ರಾಪ್ತವಿಲ್ಲದೆ ಯಾವುದನ್ನೂ ಆಲೋಚಿಸಲಾರೆವು, ಮಾಡಲಾರೆವು. ಫಲಿತವನ್ನೂ ಬಯಸಲಾರೆವು. ಎಲ್ಲವೂ ನಮ್ಮ ಅಧೀನದಲ್ಲೇ ಇದ್ದರೆ, ಎಲ್ಲರೂ ಎಲ್ಲವನ್ನೂ ಸಾಧಿಸಬಹುದಲ್ಲವೆ! ಆದೇನು ಸಾಧನೆಯೋ ದೈವವೇ ಬಲ್ಲದು!

'ಶ್ರವಣಾಯಾಪಿ ಬಹುಭಿರ್ಯೋ ನಲಭ್ಯಃ – ಎಷ್ಟೋ ಮಂದಿಗೆ ತತ್ತ್ವವನ್ನು ತಿಳಿಯಬೇಕೆಂಬ ಬುದ್ಧಿಯೇ ಹುಟ್ಟದು. ಹಾಗಿದ್ದಾಗ ನಮ್ಮ ಪ್ರಯತ್ನವೇನು, ಫಲಿತವೇನು ? ಪ್ರಾಪ್ತಿಯಿಲ್ಲದೆ, ಹಣೆಬರಹವಿರದೆ ಏನೂ ಲಭ್ಯವಲ್ಲ. ಜೀವನದಲ್ಲಿ ಧನ–ಧಾನ್ಯ–ವಸ್ತು–ವಾಹನ–ಪುತ್ರ–ಪೌತ್ರ–ಸುಖ–ದುಃಖಾದಿ ಭಾವಗಳು ಹೇಗೆ ಪ್ರಾರಬ್ಧಕ್ಕೆ ಅಧೀನವೋ ಹಾಗೆಯೇ ಆಧ್ಯಾತ್ಮ ಜೀವನದಲ್ಲಿಯೂ ಶ್ರವಣ ಸಾಧನ ಫಲಾನುಭವಾದಿಗಳೂ ಸಹ ಪ್ರಾರಬ್ಧಾಧೀನವೇ. ಹಾಗಿದ್ದಾಗ ಎಲ್ಲವನ್ನೂ ಅದಕ್ಕೇ ಬಿಟ್ಟುಕೊಟ್ಟರೆ ಸರಿಹೋಗದೇ ? ಪ್ರಯತ್ನವನ್ನು ಮಾಡುವ ಚಿಂತೆಯೇಕೆ ?

ಇದು ಮತ್ತೊಂದು ಆಕ್ಷೇಪಣೆ. ಇದು ಕಿರಿಯರು, ಹಿರಿಯರು ಬಹಳಮಂದಿಗೆ ಹಿಡಿದ ಜಿಡ್ಡು. ಯಥಾರ್ಥ ತಿಳಿಯದೆ ಎಲ್ಲರಿಗೂ ಗಾಬರಿ. ಪ್ರಾರಬ್ಧವು ಇರುವುದೆನ್ನುವ ಮಾತು ನಿಜ. ಅದು ಲೌಕಿಕರಿಗಷ್ಟೇ ಅಲ್ಲ. ಆ ಮಾತಿಗೆ ಬಂದರೆ ಜೀವನ್ಮುಕ್ತನಿಗೂ ಉಂಟು. ಆದರೆ ಪ್ರಾರಬ್ಧದ ಜೊತೆಗೆ ಪುರುಷಪ್ರಯತ್ನವೂ ಇದೆ ಎಂಬ ಸತ್ಯವನ್ನು ಮರೆತುಹೋಗುತ್ತಿದ್ದಾರೆ. ಪ್ರಾರಬ್ಧವು ನಮ್ಮ ಪ್ರಯತ್ನಕ್ಕೆ ಅಡ್ಡಿಯಾಗದು. ಹೇಗೆಂದರೆ, ಪ್ರಾರಬ್ಧ ಭೂತಕಾಲಕ್ಕೆ ಸಂಬಂಧಿಸಿದ್ದು. ಪ್ರಯತ್ನವು ಭವಿಷ್ಯಕ್ಕೆ ಸಂಬಂಧಿಸಿದ್ದು. ಪ್ರಾರಬ್ಧವು ಅತೀತವೆನಿಸಿದರೆ ಪ್ರಯತ್ನ ವರ್ತಮಾನ. ಜೀವನು ಭೋಕ್ತನಷ್ಟೇ ಅಲ್ಲ ಕರ್ತನೂ ಹೌದು. ಭೋಕ್ತನಾಗಿ ಪ್ರಾರಬ್ಧಫಲವನ್ನು ಒಂದು ಪಕ್ಕದಲ್ಲಿ ಅನುಭವಿಸುತ್ತಿರುತ್ತಾನೆ. ಕರ್ತನಾದ್ದರಿಂದ ಮತ್ತೊಂದು ಪಕ್ಕದಲ್ಲಿ ಪ್ರಯತ್ನವನ್ನು ಸಾಗಿಸುತ್ತಿರುತ್ತಾನೆ. ಹಾಗೆ ಆಗದ ಪಕ್ಷದಲ್ಲಿ ಈ ಪ್ರಾರಬ್ಧ ತಯಾರಾದದ್ದು ಹೇಗೆ ? ಒಮ್ಮೆ ಮಾನವ ಸೃಷ್ಟಿಮಾಡಿದ್ದರಿಂದಲೇ ಅಲ್ಲವೆ !. ಆದ್ದರಿಂದ ಅನುಭವಿಸುವ ಗುಣ ನಮ್ಮಲ್ಲಿ ಹೇಗುಂಟೋ, ಕೈಗೊಂಡು ಮಾಡುವ ಲಕ್ಷಣವೂ ಸಹ ನಮಗುಂಟು. ಎರಡರ ಸಂಗಮಸ್ಥಾನವೇ ನಮ್ಮ ಈ ವರ್ತಮಾನ ಜೀವನ.

ಆದ್ದರಿಂದ ನಾವಿನ್ನು ದೈನ್ಯತೆಯ ಮಾತನ್ನು ಬಿಡೋಣ. ಪ್ರಾರಬ್ಧ ಫಲಾನುಭವವನ್ನು ತಪ್ಪಿಸಿಕೊಳ್ಳುವ ಶಕ್ತಿ ಮಾನವನಿಗಿಲ್ಲವಾದರೂ ಪ್ರಯತ್ನ ಮಾಡಿ ಜೀವನದ ಗಮ್ಯವನ್ನು ಸೇರಲು ಯಥೇಚ್ಛವಾಗಿ ಅವಕಾಶವಿದೆ.

ಗತವು ನಮ್ಮ ವಶದಲ್ಲಿಲ್ಲ ನಿಜವೇ, ಆದರೆ ಭವಿಷ್ಯವು ನಮ್ಮ ಅಧೀನವಲ್ಲವೆ ? ಅದ್ದರಿಂದ ಪ್ರಾರಬ್ಧದಂತೆ ಆಗಾಗ ಸುಖ–ದುಃಖಾದಿಗಳನ್ನು ಅನುಭವಿಸುತ್ತಿದ್ದರೂ ಅದರ ಜೊತೆಗೆ ಆಗಾಗ ಶ್ರವಣ ಮನನಾದಿಗಳನ್ನೂ ನಮ್ಮ ಪ್ರಯತ್ನದಿಂದ ನಡೆಸಬಹುದು. ಇಷ್ಟಕ್ಕೂ ಪ್ರಾರಬ್ಧವೆಂಬುದು ಹಿಂದೆ ಮಾಡಿದ ಸಾಲ. ಅನುಭವಿಸಿದರೆ ತೀರುತ್ತದೆ. ಸರ್ವಕಾಲವೂ ಬಾಧಿಸದು. ಪ್ರಯತ್ನವೆಂಬುದು ಹಾಗಲ್ಲ. ಆದು ನಿತ್ಯವಾದ ಆತ್ಮನಿಗೆ ಸಂಬಂಧಿಸಿದ ನಿಕ್ಷೇಪ. ಅದು ಕ್ಷಯಿಸುವುದಲ್ಲ, ಅಕ್ಷಯ ಧನ.

ಆದ್ದರಿಂದ ನಾವು ದೃಷ್ಟಿಯಿಡಬೇಕಾದದ್ದು ಪ್ರಾರಬ್ಧದ ಮೇಲಲ್ಲ. ಇಟ್ಟರೆ ಅದೇ ನಮಗೊಂದು ಪ್ರಾರಬ್ಧವಾಗಿಬಿಟ್ಟೀತು. ನಮ್ಮ ದೃಷ್ಟಿಯಿರಬೇಕಾದದ್ದು ಶಕ್ತಿವಂಚನೆಯಿಲ್ಲದ ಪ್ರಯತ್ನದ ಮೇಲೆ. ಮೊದಲನೆಯ ಮಾರ್ಗ ಪ್ರತಿಲೋಮವಾದರೆ ಎರಡನೆಯದು ಅನುಲೋಮ. ಆದ್ದರಿಂದ ಎಷ್ಟು ಪ್ರಯತ್ನವೋ ಅಷ್ಟು ಫಲಿತ. ಪ್ರಾರಬ್ಧ ಎನ್ನುವುದು ಫಲಾನುಭವದಿಂದ ಸವೆದುಹೋಗುವುದು. ಪ್ರಯತ್ನವೆಂಬುದು ಸವೆದುಹೋಗದ ಫಲಾನುಭವ. ಅದ್ದರಿಂದ ಆತ್ಮಸಾಧಕನಾದನವು ಇನ್ನು, ಹಿಂದಕ್ಕೆ ನೋಡದೆ, ಮುಂದಕ್ಕೆ ಸಾಗಿ ಹೋಗುತ್ತಿರುವುದೇ ಮಾರ್ಗ. ಹಿಂತಿರುಗಿ ನೋಡಿದರೆ ಪ್ರಾರಬ್ಧ ಕಾಣುತ್ತದೆ. ಮುಂದಕ್ಕೆ ಸಾಗಿದರೆ ಪ್ರಯತ್ನ ಫಲಿಸುತ್ತದೆ. ಕೊನೆಗೆ ಮೋಕ್ಷವೆಂಬ ಮಹಾಫಲವನ್ನೇ ಸಾಧಕ ಆಸ್ವಾದಿಸಬಹುದು.

ಪ್ರಯತ್ನ - ಫಲ

ಸರಿ, ಪ್ರಯತ್ನವೆಂದಿರಿ, ಎಷ್ಟು ಕಾಲ ಅದನ್ನು ಮಾಡಬೇಕು ? ಹೇಗೆ ಮಾಡಬೇಕು ? ಎಲ್ಲ ಕೆಲಸಗಳನ್ನೂ ಬಿಟ್ಟು ಅದೊಂದನ್ನೇ ಹಿಡಿದು ಕೂರಬೇಕೆ ? ಇಲ್ಲವೆ, ಮಿಕ್ಕದ್ದೆಲ್ಲವನ್ನೂ ಮಾಡುತ್ತಾ ಇದನ್ನು ಮಾಡಬಹುದೋ ? ಹಾಗೆ ಮಾಡುತ್ತಾ ಹೋದಲ್ಲಿ ಫಲಿತ ಯಾವಾಗ ? ಬದುಕಿದ್ದಾಗಲೇ ಫಲಪ್ರಾಪ್ತಿಯೋ ? ಇಲ್ಲ, ಮರಣಾನಂತರವೋ ? ಹೇಗಿರುತ್ತದೆ ಆ ಫಲಿತ ? ಅದು ಮರಣಕ್ಕೆ ಮುನ್ನವೇ ಫಲಿಸಿದರೆ ಮರಣ ಹೇಗೆ ಪ್ರಾಪ್ತಿಯಾಗುತ್ತದೆ ? ಮರಣಾನಂತರ ಪ್ರಾಪ್ತಿಯಾಗುತ್ತದೆ ಎಂದರೆ

ಫಲಿಸಿತೋ ಇಲ್ಲವೋ ಹೇಗೆ ನಂಬುವುದು ? ಈಗ ಈ ಪ್ರಶ್ನೆಗಳ ಪರಂಪರೆ ಎದುರಾಗುತ್ತದೆ.

ಒಂದೊಂದನ್ನೂ ಪರಿಶೀಲಿಸಿ ನೋಡೋಣ. ಎಷ್ಟು ಕಾಲ ಪ್ರಯತ್ನಿಸುತ್ತಿರಬೇಕು ? 'ಸತು ದೀರ್ಘ ಕಾಲ ನೈರಂತರ್ಯ ಸೇವಿತೋ ದೃಢ ಭೂಮಿಃ' ಎಂದು ಪತಂಜಲಿಯ ಮಾತು. ಇಷ್ಟು ಕಾಲವೆಂಬ ಪರಿಮಿತಿಯಿಲ್ಲ. ಫಲಿತವನ್ನು ಆಧರಿಸಿ ಪ್ರಯತ್ನ ನಡೆಯಬೇಕು. ಬತ್ತ ಕುಟ್ಟಿದಂತೆ ಎಂದು ಹಿಂದೆ ಹೇಳಿದ್ದಾಗಿದೆ. ಅಕ್ಕಿ ತೋರಿಕೊಳ್ಳುವವರೆಗೆ ಕುಟ್ಟುವ ಕೆಲಸ (ಕೊಟ್ಟಣ) ನಡೆಯುತ್ತಿರಬೇಕು. ಹಾಗೆ, ಆತ್ಮದರ್ಶನ ವಾಗುವವರೆಗೂ ಸಾಧನೆ ನಡೆಯಬೇಕು. ಅದೇ ನೈರಂತರ್ಯ. ಎಂದರೆ ಹತ್ತು ದಿನಕ್ಕೊಮ್ಮೆ, ಹತ್ತು ತಿಂಗಳಿಗೊಮ್ಮೆ, ಯಾವಾಗಲೋ ಒಮ್ಮೆ ಅಲ್ಲದೆ ಪ್ರತಿ ಕ್ಷಣವೂ, ಕನಿಷ್ಠಪಕ್ಷ ಪ್ರತಿದಿನವೂ ಪ್ರಯತ್ನ ಸಾಗಬೇಕು. ಹಾಗೆಂದು ಮುಡುಪು ತೀರಿಸುವಂತಲ್ಲದೆ, ಇದು ನಮ್ಮ ಬಾಳು ಎಂಬ ಸತ್ಕಾರ ಬುದ್ಧಿಯಿಂದ ಪ್ರಯತ್ನ ನಡೆಯಬೇಕು. ಹಾಗಾದರೆ ಮಾತ್ರ ಫಲ ಗಟ್ಟಿಗೊಳ್ಳುತ್ತದೆ.

ಅಷ್ಟೇ ಅಲ್ಲ. ಪ್ರತಿ ದಿನದ ಸಮಸ್ತ ಕಾಲವೂ ನಮ್ಮದಲ್ಲ. ಸ್ವಪ್ನ ಸುಷುಪ್ತಿಗಳೆರಡೂ ಪ್ರಾರಬ್ಧಕ್ಕೆ ಅಧೀನ. ಪ್ರಯತ್ನಕ್ಕೆ ಅಲ್ಲಿ ಅವಕಾಶವಿಲ್ಲ. ಇನ್ನುಳಿದದ್ದು ಜಾಗ್ರತ್ತು. ಅದರಲ್ಲೂ ರೋಗ-ರುಜಿನ, ಮದುವೆ, ಮುಂಜಿ, ಮನೆ-ಮಟ್ಟು, ವ್ಯವಸ್ಥೆ, ನಿರ್ವಹಣೆ, ಸುತ್ತಮುತ್ತಣ ವ್ಯವಹಾರಗಳು ಹೀಗೆ ಎಷ್ಟೋ ಅಗತ್ಯಗಳು ಏರ್ಪಡುತ್ತವೆ. ಹಾಗಿದ್ದಾಗ ಈ ಆತ್ಮಾಕಾರವೃತ್ತಿಯನ್ನೇ ಹಿಡಿದುಕೊಂಡು ಕೂಡಲಾದೀತೆ ? ಜಾರಿಹೋಗುತ್ತದೆ. ಅಲ್ಲದೆ ಅದು ಪತ್ತೆಯೇ ಇಲ್ಲದೆ ಮಾಯವಾದರೂ ಅಚ್ಚರಿಯಿಲ್ಲ. ಆದ್ದರಿಂದ ನಮ್ಮ ಕೆಲಸಗಳೊಂದಿಗೆ ಅದನ್ನೂ ಸಹ ನಡೆಸಿಕೊಂಡು ಹೋಗುವುದು ಆಗುವಂಥದ್ದಲ್ಲ. ಹೋಗಲಿ, ಈ ಕೆಲಸಗಳನ್ನೆಲ್ಲ ಬಿಟ್ಟುಬಿಡೋಣ ಎಂದರೆ ಬಾಳಿನ ಅಗತ್ಯಗಳಿಗೆ ಸ್ವಸ್ತಿಯನ್ನು ಹೇಳಿ ಬದುಕಲಾರೆವು. ಕೆಲಸವೆಲ್ಲ ಮುಗಿದಮೇಲೆ ಈ ಪ್ರಯತ್ನವನ್ನು ಸಾಗಿಸೋಣವೇ ಎಂದರೆ ಮತ್ತೆ ಕೆಲಸ ಒದಗಿದರೆ ಇದು ಮಾಸುತ್ತದೆ. ಅದು ಕೇವಲ ಗಜಸ್ನಾನವಷ್ಟೆ.

ಹಾಗಿರುವಾಗ ಇದಕ್ಕೆ ಪರಿಷ್ಕಾರವೇನು ? ಅದಕ್ಕೆಂದೇ ಅತ್ಯಗತ್ಯವಾದ ಕೆಲಸಗಳನ್ನು ಮಾತ್ರ ಇಟ್ಟುಕೊಳ್ಳಬೇಕೆಂದರು ಶಾಸ್ತ್ರಜ್ಞರು. 'ಯುಕ್ತ ಚೇಷ್ಟಸ್ಯ ಕರ್ಮಸು' ಹಾಗಾದಲ್ಲಿ ಅವಕಾಶ ಅಲ್ಲಿಗಲ್ಲಿಗೆ ಹೆಚ್ಚೇ ದೊರೆಯುತ್ತದೆ. ಆಗ ಚೆನ್ನಾಗಿ ಅಭ್ಯಾಸವನ್ನೂ ಮಾಡುತ್ತಾ ಸಾಗಬಹುದು. ಅದು ಬಲವನ್ನು ಸೆಳೆದುಕೊಂಡು ಸಂಸ್ಕಾರವಾಗಿ ಪರಿಣಮಿಸಿ ಇತರೆ ಕಾರ್ಯಗಳನ್ನು ಮಾಡುವಾಗಲೂ ಕೆಲಸ ಮಾಡುತ್ತದೆ. ಕೆಲಸದಿಂದ ಆಗುವ ಭಾರ ಈ ಸಂಸ್ಕಾರದಿಂದ ತಗ್ಗುತ್ತಾ ಹೋಗುತ್ತದೆ. ಇದೇ ಉಪಾಯವೇ ಹೊರತು ಮತ್ತೊಂದಿಲ್ಲ. ಸ್ವಲ್ಪಕಾಲ ಕಳೆದಂತೆ ಜ್ಞಾನಾನುಷ್ಠಾನ ಮತ್ತು ಜೀವನಾಗತ್ಯ ಕಾರ್ಯಗಳು ಎರಡೂ ಪರಸ್ಪರ ವಿರೋಧವಿಲ್ಲದೆ ಹೊಂದಿಕೊಂಡು ಏಕಕಾಲದಲ್ಲೇ ಜೋಡಿ ಕುದುರೆಗಳಂತೆ ದೌಡಾಯಿಸುತ್ತವೆ. ಭಯವಿಲ್ಲವಾಗಿ, ಆತ್ಮವು, ವ್ಯವಹಾರಕ್ಕೆ ಅಡ್ಡಬರದು. ಅದು ಇದಕ್ಕೆ ಅಡ್ಡಿಯಾಗದು. ಸಾಧನೆ ಮಾಡುವವನಿಗಲ್ಲದೆ ಈ ರಹಸ್ಯ ಅನ್ಯರಿಗೆ ತಿಳಿಯದು.

ಸಾಧನೆ ಹೇಗೆ ಮಾಡಬೇಕು ? ಇದು ಯೋಗಿಗಳಂತೆ ಕಣ್ಮುಚ್ಚಿ ಮಾಡುವ ಸಾಧನೆಯಲ್ಲ. ಉಪಾಸಕರಂತೆ ಒಂದು ಮಂತ್ರವನ್ನೋ ದೇವತೆಯನ್ನೋ ಹಿಡಿದು ಕೂಡುವುದೂ ಅಲ್ಲ. ಕರ್ಮಿಷ್ಠರಂತೆ ಮುಡುಪು ತೀರಿಸಿದಂತೆ, ಆಯಾ ಕರ್ಮಗಳನ್ನು ಆಯಾ ಸಮಯದಲ್ಲಿ ಆಚರಿಸಿ ಮಿಕ್ಕ ಸಮಯವನ್ನೆಲ್ಲ ವ್ಯಾಸಂಗದಲ್ಲೇ ಕಳೆಯುವದೂ ಅಲ್ಲ. ಮತ್ತೇನು ? ಆ ಸಾಧನೆಗಳೆಲ್ಲ ಏಕ ದೇಶ ದೃಷ್ಟಿಯವು. ನಾನು ಬೇರೆ – ಈ ಕಾಣುವ ಜಗತ್ತು ಬೇರೆ – ಆ ಈಶ್ವರನೆಲ್ಲೋ ಇದ್ದಾನಲ್ಲ ಅವನು ಬೇರೆ – ಏನೋ ಮಾಡಿ ಏನನ್ನೋ ಹಸ್ತಗತ ಮಾಡಿಕೊಳ್ಳಬೇಕೆಂದು ಭೇದ ಭಾವನೆ ಬಿಡದೆ ಮಾಡುವ ಸಾಧನೆಗಳವು. ಅದ್ವೈತ ಸಾಧನೆ ಎಂದರೇನು ? ನಾನೇನು ? ನನ್ನದೇನು ? ಮತ್ತೊಂದೇನು – ಯಾವುದು ಸ್ಫುರಿಸಿದರೂ ಅದೆಲ್ಲ ನನ್ನ ಸ್ವರೂಪವೇ – ಅದೇ ಸರ್ವತ್ರಾ ಹಾಸಿಕೊಂಡಂತೆ ಕಾಣಿಸುತ್ತಾ ಇದೆಯೆಂದೂ, 'ಅಹಂ' 'ಮಮ' ಎರಡೂ ಎರಡಾಗಲ್ಲದೆ ಒಂದಾಗಿ, ಅದು ನನ್ನ ಸ್ವರೂಪವೆಂದು ಆತ್ಮ ದೃಷ್ಟಿಯಿಂದ ನೋಡುತ್ತಾ ಸಾಗುವುದೇ ನಮ್ಮ

ಸಾಧನೆ. ಆತ್ಮವನ್ನು ಪ್ರಪಂಚವಾಗಿ ಅಲ್ಲ, ಪ್ರಪಂಚವನ್ನು ಆತ್ಮವಾಗಿ ದರ್ಶಿಸಬೇಕು.

ಪರಮಾತ್ಮನು ಪ್ರಪಂಚವಾದರೆ ಪ್ರಮಾದ. ಆಗ ಏಕವೆಂಬುದು ಅನೇಕ ಆಗಿಹೋಗುತ್ತದೆ! ನಿರಾಕಾರವು ಸಾಕಾರವಾಗಿಬಿಟ್ಟೀತು! ಪರಿಪೂರ್ಣವು ಪರಿಚ್ಛಿನ್ನವಾದೀತು! ಹಾಗಲ್ಲದೆ ಪ್ರಪಂಚವನ್ನೇ ಪರಮಾತ್ಮನನ್ನಾಗಿ ನೋಡಿದರೆ ಆ ಮೂರು ದೋಷಗಳೂ ತೊಲಗುತ್ತವೆ. ದ್ವೈತವಾಗಲ್ಲದೆ ಆಗ ಅದ್ವೈತವಾಗಿ ಅನುಭವ ಏರ್ಪಡುತ್ತದೆ. ದ್ವೈತಾನುಭವ ನಮಗೆ ಈಗಾಗಲೇ ಇದೆ. ಹೊಸದಾಗಿ ಅದಕ್ಕೆಂದು ತೆವಳಿ ಸಾಗುವ ಬವಣೆಯೇಕೆ? ಮೊದಲಿಗೆ ಹೆಸರಿಸಿದ ಸಾಧನೆಗಳೆಲ್ಲಾ ಇಂಥ ದ್ವೈತ ಸಾಧನೆಗಳೇ. ಆದ್ದರಿಂದಲೇ ಅವು ಸಮಸ್ಯೆಗೆ ಪರಿಷ್ಕಾರವಾಗುವುದಿಲ್ಲ. ಈಗ ಹೇಳಿದ ಅದ್ವೈತ ಸಾಧನೆಯೇ ಸಮಸ್ಯೆಗೆ ಪರಿಷ್ಕಾರ. ಈ ಸಾಧನೆ ಜೀವ-ಜಗತ್-ಈಶ್ವರರೆಂಬ ಮೂರನ್ನೂ ಆತ್ಮಾಕಾರವಾಗಿ ಬದಲಾಯಿಸಿ ತೋರಿಸುವುದರಿಂದ ಇದೇ ಪರಿಷ್ಕಾರವೆಂದು ನಮ್ಮ ಹಿರಿಯಲು ಸಿದ್ಧಾಂತ ಮಾಡಿದರು.

ಸರಿ, ಏನಾ ಪ್ರಕ್ರಿಯೆ ಎಂದು ಕೇಳಿದರೆ, ಸಾಧಕರಿಗಾಗಿ ಕೆಲವು ಮಾತನ್ನು ಹೇಳಬಹುದು. ಹೇಳಬೇಕಾದ್ದೂ ಇದೆ. ಸಾಮಾನ್ಯ ಮತ್ತು ವಿಶೇಷಗಳೆರಡೂ ಜೊತೆಯಾಗಿಯೇ ಇರುತ್ತವೆಂದು ಹೇಳುತ್ತಲೇ ಬಂದಿದ್ದೇವೆ. ಸಾಮಾನ್ಯದ ಸ್ಪರ್ಶವೇ ಇಲ್ಲದ ವಿಶೇಷವಂತೂ ಯಾವದೂ ಇಲ್ಲ. ಆದರೆ ನಮ್ಮ ದೃಷ್ಟಿಗೆ ಯಾವಾಗಲೂ ವಿಶೇಷಕ್ಕೇ ಅಂಟುವ ಅಭ್ಯಾಸವಾಗಿ ಹೋಗಿದೆ. ಅದಕ್ಕೇ ಅವುಗಳಲ್ಲೇ ತಳಮುಟ್ಟುತ್ತಿರುತ್ತದೆ. ಇದು ಎಷ್ಟೆಷ್ಟು ಒಳಗಿಳಿಯುತ್ತದೋ ಅಷ್ಟಷ್ಟು ಸಾಮನ್ಯಕ್ಕೆ ದೂರವಾಗುತ್ತಾ ಹೋಗುತ್ತದೆ. ಸಾಮಾನ್ಯವು ಅಲ್ಲಿಲ್ಲದ ಕಾರಣದಿಂದಲ್ಲ. ವಸ್ತುಸಿದ್ಧವಾಗಿ ಇದ್ದೇ ಇದೆ. ಹೇಳಿಕೇಳಿ ಅದು ನಮಗೆ ಬುದ್ಧಿ ಸಿದ್ಧವಾಗುತ್ತಿಲ್ಲ. ಬುದ್ಧಿಯನ್ನು ಅದರ ಮೇಲಿರಿಸಿದರೆ ಸರಿ, ಪ್ರತಿಫಲಿಸಲು ಅದು ಸಿದ್ಧವಾಗಿಯೇ ಇದೆ. ಪ್ರತಿಫಲಿಸಿದರೆ ಸಾಕು, ಬುದ್ಧಿ ದರ್ಪಣವು ಅದರಿಂದ ತುಂಬಿಕೊಳ್ಳುತ್ತದೆ. ಹಾಗೆ ಸಾಮಾನ್ಯ ತುಂಬಿಕೊಂಡ ಮೇಲೆ ಅದಿನ್ನು ಬುದ್ಧಿಯಲ್ಲ, ಆತ್ಮವೇ ಆಗುತ್ತದೆ. ಅದು ಮಹಾಸಾಮಾನ್ಯವಾದ್ದರಿಂದ, ಒಳಗೆ ಆಲೋಚನೆ - ಹೊರಗೆ ಪದಾರ್ಥ

ಎಂಬ ವ್ಯತ್ಯಾಸವಿಲ್ಲ. ಹೆಚ್ಚೆಂದರೆ ಒಳಗದು ಚಿತ್ಸಾಮಾನ್ಯ, ಹೊರಗೆ ಸತ್ಸಾಮಾನ್ಯವಾದೀತು. ಅದರಿಂದ ಸಾಮಾನ್ಯವನ್ನೇ ನೋಡುತ್ತಾ ಸಾಗುವುದರಿಂದ, ವಿಶೇಷಗಳು ಅದರಲ್ಲಿ ಬೆರೆತು ಸಚ್ಚಿದಾಕಾರವಾಗಿ ಒಂದೇ ಅಖಂಡವಾದ ಅನುಭವ ಖಚಿತವಾಗಿ ಉಂಟಾಗುತ್ತದೆ. ಅದು ಅಸಾಧ್ಯವೇನಲ್ಲ.

ಆಭರಣಗಳೆಲ್ಲದರಲ್ಲೂ ಚಿನ್ನವನ್ನು, ಮೃತ್ಪಾತ್ರೆಗಳೆಲ್ಲದರಲ್ಲೂ ಮೃತ್ತಿಕೆಯನ್ನು ನೋಡಿದಂತೆಯೇ ವಿಶೇಷ ರೂಪವಾಗಿ ಕಾಣಿಸುವ ಚರಾಚರ ಪದಾರ್ಥಗಳೆಲ್ಲದರಲ್ಲೂ, ಕೇವಲ ಸ್ಥಿತಿರೂಪವಾಗಿ (ಅಸ್ತಿ-ಭಾತಿ) ವಿಸ್ತರಿಸಿದ ಮಹಾಸಾಮಾನ್ಯವನ್ನು ದರ್ಶಿಸಬಹುದು. ಆಯಾ ವ್ಯವಹಾರಗಳು ನಡೆಯುತ್ತಿದ್ದಾಗ ಅಚಲವಾದ ಆ ಸ್ಥಿತಿಯೇ ಚಲಿಸುತ್ತಿರುವಂತೆ ಭಾವಿಸಬೇಕು. ಜಲವಾಗಿ ಅಚಲ ತರಂಗವಾಗಿ ಚಲಿತವೆಂದು ಒಂದು ಕಡಲನ್ನು ನೋಡಿದಂತೆ, ನಮ್ಮ ದೇಹದಿಂದ ಮೊದಲ್ಗೊಂಡು ಪ್ರಪಂಚದವರೆಗೆ ಎಲ್ಲದರಲ್ಲೂ ಒಂದೇ ಒಂದು 'ಅಸ್ತಿ-ಭಾತಿ' ಎಂಬ ಸೂತ್ರದೊಡನೆ ಸೇರಿಸಿ ಹಿಡಿದಿಟ್ಟುಕೊಳ್ಳಬೇಕು. ಜಾರಿಹೋಗುತ್ತಿದ್ದರೆ ಮತ್ತೆ ಅದರಲ್ಲೇ ಸೇರಿಸಿಕೊಳ್ಳಬೇಕು. ಜಾರಿದಾಗ ಅದು ವಿಶೇಷವಾಗಿ ತೋರುತ್ತದೆ. ಜಾರದಿದ್ದರೆ ಮತ್ತೆ ಸಾಮಾನ್ಯವಾಗಿಯೇ ನಮಗೆ ದರ್ಶನ ಕೊಡುತ್ತದೆ.

ಆದರೆ ಎಷ್ಟೋ ಆಲೋಚನೆಗಳನ್ನು, ಕಾರ್ಯಗಳನ್ನು ಇಟ್ಟುಕೊಂಡು ಅವುಗಳಲ್ಲೇ ನಿರಂತರವಾಗಿ ತಲೆಹಾಕುತ್ತಿದ್ದರೆ ಪ್ರಯೋಜನವಿಲ್ಲ. ಧಾರಣೆ ಸಾಲದಾಗುತ್ತದೆ. ಅಗ್ಗಿಷ್ಟಿಕೆಯಲ್ಲಿ ಹಾಕಿದ ಇದ್ದಿಲು ಕೆಂಡವಾಗಲು, ಅಗ್ನಿಕಣದ ಶಕ್ತಿಗೆ ಮೀರಿ ಅದರಲ್ಲಿ ಇದ್ದಿಲನ್ನು ಹಾಕಬಾರದು. ಹಾಕಿದರೆ ಕೆಂಡವಾಗುವುದಿರಲಿ, ಕೆಂಡವೇ ಇದ್ದಿಲಾಗಿಬಿಡುತ್ತದೆ! ನಾಮರೂಪಗಳೇ ಇದ್ದಿಲು. ಅದು ಸತ್-ಚಿತ್ ರೂಪಕ್ಕೆ ಬದಲಾಗಲು, ಸಚ್ಚಿದಾಕಾರ ವೃತ್ತಿಯನ್ನು ಮುಚ್ಚಿ ಮರೆಮಾಡುವ ಕಾರ್ಯದಿಂದ ಪ್ರಯೋಜನವಿಲ್ಲ. ಸಾಧಕನಾದವನು ಜೀವನಕ್ಕೆ ಅತ್ಯಗತ್ಯವಾದ ಕಾರ್ಯಗಳನ್ನಷ್ಟೇ ಇಟ್ಟುಕೊಳ್ಳಬೇಕು. ಮಿಕ್ಕ ಸಮಯದಲ್ಲಿ ಆತ್ಮಾಕಾರವೃತ್ತಿಯನ್ನು ಅವಲಂಬಿಸಿ

ನಿಲ್ಲಬೇಕು. ಆಗ ಲೌಕಿಕ ವೃತ್ತಿಗಳ ಬಲ ತಗ್ಗಿ ಆತ್ಮಾಕಾರ ವೃತ್ತಿ ಬಲವನ್ನು ಹೀರಿ ಬೆಳೆಯುತ್ತದೆ. ಆಗ ನಾವೂ ಸಹ ಉತ್ಸಾಹದಿಂದ ಮುಂದಕ್ಕೆ ಸಾಗಬಲ್ಲೆವು.

ಇವೆಲ್ಲ ಜಾಗ್ರತ್ತಿನ ಸಮಾಚಾರ, ನಿದ್ರೆಯಲ್ಲಿ, ರೋಗಾದಿಗಳು ಸಂಕ್ರಮಿಸಿದ ವೇಳೆಯಲ್ಲಿ ನಮಗೆ ಯಾವ ಸ್ಫುರಣೆಯೂ ಇರುವುದಿಲ್ಲವಲ್ಲಾ ಎಂಬ ಸಂದೇಹ ಬೇಡ. ಇದು ನಿರಂತರವಾಗಿ ನಮ್ಮ ವೃತ್ತಿಯಾದರೆ, ಆತ್ಮವೃತ್ತಿಯಿಂದ ಏರ್ಪಡುವ ಸಂಸ್ಕಾರ ವ್ಯರ್ಥವಾಗದು. ಅಲ್ಲೂ ಇದು ಕೆಲಸ ಮಾಡುತ್ತದೆ. ಒಂದು ತೈಲಬಿಂದುವಿನಂತೆ ಎಲ್ಲೆಡೆ ವಿಸರಿಸುತ್ತದೆ. ಆದರೂ ಮನಸ್ಸು ಮೊಂಡಾದಾಗ, ಮರಣವೇ ಸಂಭವಿಸಿದಾಗ ಈ ಆತ್ಮವೃತ್ತಿ ನಿಲ್ಲುತ್ತದೆಯೆ ? ನಾವು ನಿಲಿಸಿಕೊಳ್ಳಲು ಶಕ್ತರೆ ? ಜೀವನ್ಮುಕ್ತನಿಗೂ ಮರಣ ತಪ್ಪದು ಎನ್ನುತ್ತಿದ್ದೀರಿ, ಆಗ ಆತ್ಮಜ್ಞಾನವೇನಾಯಿತು ? ಜೀವನದಲ್ಲಿ ದಾಖಲೆಯಾಗದೆ ಮರಣಾನಂತರ ಮುಕ್ತನಾದಾನೆ ? ಆಗಿದ್ದರೆ, ಅದು ಸತ್ಯವೆಂದು ನಂಬುವುದು ಹೇಗೆಂಬ ಪ್ರಶ್ನೆ ಹುಟ್ಟುತ್ತದೆ, ನಿಜವೇ. ಆತ್ಮವೃತ್ತಿಯು ನಿದ್ರಾದಿ ದೆಸೆಗಳಲ್ಲಿ ನಿಂತಿರುವಂತೆ ನಮಗೆ ಕಾಣಿಸದು. ಅಷ್ಟೇಕೆ ಆ ಜ್ಞಾನವು ಬಾಲ್ಯದಲ್ಲೇ ಇಲ್ಲ. ನಂತರ ಯಾವಾಗಲೋ ಶ್ರವಣಾದಿಗಳಿಂದ ಉದಯಿಸುತ್ತಿದೆ. ಮತ್ತೆ ಅವಸಾನದಲ್ಲಿ ಸಡಿಲವಾಗಿ ಹೋಗುತ್ತಿದೆ. ಹೀಗಿರುವುದರಿಂದ ಜನರಿಗೆಲ್ಲ ಇದರ ವಿಷಯದಲ್ಲಿ ಸಹಜವಾಗಿ ಶಂಕೆ ಏರ್ಪಡುತ್ತದೆ. ಎಲ್ಲರಿಗೂ ಇದು ಪ್ರತ್ಯಕ್ಷ ಸಿದ್ಧವಾದ ವಿಷಯ.

ಇದಕ್ಕಿಂತಲೂ ಪ್ರತ್ಯಕ್ಷ ಸಿದ್ಧವಾದದ್ದು ಮತ್ತೊಂದಿದೆ. ಬಾಲ್ಯಾದಿ ವಾರ್ಧಕ್ಯಪರ್ಯಂತ ಎಲ್ಲಾ ದೆಸೆಗಳಲ್ಲೂ ನಾನಿದ್ದೇನೆ. ನಾನೇ ಇಲ್ಲದೆ ವ್ಯಾಧಿ ಯಾರಿಗೆ ? ಮೂರ್ಛೆ ಮೊದಲಾದುವನ್ನು ಅನುಭವಿಸುವವರು ಯಾರು ? ಅವಸ್ಥೆಗಳನ್ನು ಅವೇ ಅನುಭವಿಸುವುದಿಲ್ಲ. ಜ್ಞಾನವೇ ಸದಾ ಜ್ಞೇಯವನ್ನು ಅನುಭವಿಸುವುದು. ಜ್ಞಾನವೇ ನೀನು. ನೀನು ಇಲ್ಲವಾಗುವುದೇನು, ಇಲ್ಲದಂತಾಗುವುದು ಜ್ಞೇಯಗಳು. ಅವು ಬರುತ್ತವೆ, ಇರುತ್ತವೆ, ಹೋಗುತ್ತವೆ. ಹುಟ್ಟು ಎಂದೋ ಕಳೆಯಿತು, ಈಗಲ್ಲ. ಮರಣ

ಈಗಿದೆಯೇ ? ಯಾವಾಗಲೋ ಬರುತ್ತದೆ. ನೀನೋ ಅವೆರಡನ್ನೂ ಅನುಭವಿಸಬೇಕಾದ್ದರಿಂದ ಆಗಲೂ ಇರುವೆ ನಂತರವೂ ಇರುತ್ತೀಯೆ. ಈಗ ಹೇಗೂ ಇರುತ್ತಲೇ ಇದ್ದೀಯೆ, ಸರ್ವದಾ ವರ್ತಮಾನವೇ ನಿನ್ನ ಸ್ವಭಾವ. ಭೂತಭವಿಷ್ಯಗಳಲ್ಲ. ಭೂತ ಭವಿಷ್ಯಗಳು ನೀನು ಅನುಭವಿಸುವ ಜ್ಞೇಯಪ್ರಪಂಚಕ್ಕೆ ಸಂಬಂಧಿಸಿದ ಅನುಭವಗಳು.

ಈಗ ಕುಳಿತು ನೀನು ಎಂದೋ ಹುಟ್ಟಿದೆಯೆಂದು, ಯಾವಗಲೋ ಮರಣಿಸುತ್ತೀಯೆಂದು ಆಲೋಚಿಸುತ್ತಿದೇಯೆ. ಈ ಮೊದಲು ಗತಿಸಿದ ನಿನ್ನ ಹಿರಿಯರೆಲ್ಲರೂ ಗುರುತಿಗೆ ಬರುತ್ತಿರುತ್ತಾರೆ. ನಾವು ಹೋದಮೇಲೂ ಈ ಪ್ರಪಂಚ ಇರುತ್ತದೆಂದೂ – ಹೋಗುವುದಾದರೆ ತಂದೆ ತಾತಂದಿರ ಜೊತೆಗೇ ಈಗಾಗಲೇ ಹೊರಟುಹೋಗಿರ ಬೇಕಾಗುತ್ತಲ್ಲವೆ ! ಹಾಗೆಯೇ ನಾಳೆ ನನ್ನ ವಿಚಾರವೂ ಎಂದು ಭಾವಿಸಿ, ಏನೇನೋ ಭಯಗಳು ನಿನ್ನನ್ನು ಅನುಕ್ಷಣವೂ ಬಾಧಿಸುತ್ತಿರುತ್ತವೆ. ಆದರೆ ಒಂದು ಸಂಗತಿಯನ್ನು ಆಲೋಚಿಸಿದರೆ ಸಾಕು, ಇವೆಲ್ಲ ನಿನ್ನ ಭ್ರಮೆ ಎಂಬ ಸತ್ಯ ತಿಳಿಯಾಗಿ ತೇಲಿಬರುತ್ತದೆ.

ಹೇಗೆಂದರೆ, ಅಸಲು ಏನನ್ನು ಯೋಚಿಸಿದರೂ ನೀನೇ ಅಲ್ಲವೆ ಆಲೋಚಿಸುವುದು ? ನಿನ್ನ ಜನ್ಮವನ್ನು ನೀನು ನೋಡಿಲ್ಲ. ಈಗದು ಮನಸ್ಸಿಗೆ ಬಂದರೆ ಅದು ನಿನ್ನ ಆಲೋಚನೆ. ಹಾಗೆಯೇ, ನಿನ್ನ ಮರಣ ಇನ್ನೂ ಪ್ರಾಪ್ತವಾಗಿಲ್ಲ. ಯಾವಾಗಲೋ ಸಂಭವಿಸುತ್ತದೆ ಎಂದು ಈಗ ನಿನಗೆ ಮೂಡುವ ಆಲೋಚನೆ. ನೀನು ಇದ್ದ ಕಡೆಯೇ ಇರುತ್ತ, ನಿನ್ನ ಆಲೋಚನೆ ಅತ್ತ ಇತ್ತ ತಿರುಗುತ್ತಿರುತ್ತದೆ. ನೀನು ಸ್ಥಿತಿ, ನಿನ್ನ ಆಲೋಚನೆ ಗತಿ. ಸ್ಥಿತಿಯೇ ಆಲೋಚಿಸಿದಾಗ ಗತಿಯಾಗಿ ಬದಲಾಗುತ್ತವೆ. ಆಲೋಚನೆಯನ್ನೇ ನಿಲ್ಲಿಸಿಬಿಟ್ಟಾಗ, ಸ್ಥಿತಿಯಾಗಿಯೇ ಅನುಭವಕ್ಕೆ ಬರುತ್ತದೆ. ಆದ್ಯಂತ ಗಳಲ್ಲಿರುವುದು ಸ್ಥಿತಿಯೇ ಹೊರತು ಗತಿಯಲ್ಲ. ಜನನ ಮರಣಗಳು ಈಗ ನೀನಿರುವ ಸ್ಥಿತಿಗೆ ಆದ್ಯಂತಗಳಲ್ಲವೆ ! ನೀನು ಚಲಿಸದಿದ್ದರೆ ಅವು ಕಾಣಿಸವು. ಆಗ ನಿನಗೆ ನೀನೆ ಕಾಣಿಸುತ್ತೀಯೆ. ಏನೋ ಕಾಣಿಸುತ್ತಿದೆ ಎಂದು

ಭಾವಿಸುವುದರಿಂದ ಆ ಅವಸ್ಥೆಯಲ್ಲಿ ನೀನು ಬೀಳುವೆ. ಹಾಗೆಂದುಕೊಳ್ಳದಿದ್ದರೆ ನಿನ್ನ ಪಾಡಿಗೆ ನೀನಿರುತ್ತೀಯೆ. ಆಗ ಜನನ ಮರಣಾದಿ ಅವಸ್ಥೆಗಳು ನಿನ್ನ ಮನಸ್ಸಿಗೆ ಬರುವುದಿಲ್ಲ.

ಸಾಧನೆ-ಸಿದ್ಧಿ

ಆದರೆ ಇಲ್ಲಿ ಮುಖ್ಯವಾದ ಸಂಗತಿ ಏನೆಂದರೆ, ನೀನು ಏನನ್ನು ಆಲೋಚಿಸಿದರೂ ಅದು ಆಭಾಸವೇ. ವಸ್ತು ಒಂದೇ, ಅದು ನಿನ್ನ ಜ್ಞಾನ. ನಿನ್ನ ಸ್ವರೂಪವೇ ಅದು. ಹುಟ್ಟಿನಿಂದ ಮರಣದವರೆಗೂ ಇರುತ್ತಲೇ ಇದೆ. ಇರುತ್ತದೆ ಎಂದು ನಿನಗೆ ಹೇಳುವ ಅಗತ್ಯವಿಲ್ಲ. ಅದು ನಿನ್ನ ಅನುಭವ. ಅದಕ್ಕೇನು ಸೋಕಿದರೂ ಬಿಟ್ಟರೂ ಅದು ಆಭಾಸವೆ ಅಲ್ಲವೆ! ಇದನ್ನು ಆಧರಿಸಿ ಒಂದು ಕಷ್ಟ ಎನ್ನು, ಸುಖ ಎನ್ನು, ಪುಣ್ಯ ಎನ್ನು, ಪಾಪ ಎನ್ನು, ಲೋಕಾಂತರಗಳೆನ್ನು, ಜನ್ಮಾಂತರಗಳೆನ್ನು, ನಿನ್ನ ಮನಸ್ಸಿಗೆ ಬರುವುದೇ ಅಲ್ಲವೆ ಈ ಭಾವಗಳೆಲ್ಲ? ಯಾರು ಇವನ್ನು ನಿನಗೆ ತಂದಿತ್ತವರು? ಲೋಕವೇ, ಶಾಸ್ತ್ರವೇ? ಅವೂ ಸಹ ನಿನ್ನ ಜ್ಞಾನಕ್ಕೆ ಸೋಕುವ ಭಾವಗಳೇ ಅಲ್ಲವೆ. ಜ್ಞಾನಕ್ಕೆ ಸೋಕುವಂಥದ್ದು ನಿನ್ನ ಸ್ವರೂಪ ಹೇಗಾಗುತ್ತದೆ? ಅಸ್ತಿತ್ವವು ಸ್ವರೂಪಕ್ಕೇ ಅಲ್ಲದೆ ಅದರ ಆಭಾಸವಾದ ಯಾವ ಭಾವಕ್ಕೂ ಸ್ವಂತ ಅಸ್ತಿತ್ವವಿಲ್ಲ.

ರಜ್ಜುಸರ್ಪಕ್ಕೆ, ತರಂಗ-ಬುದ್ಬುದಗಳಿಗೆ ಹೇಗೆ ಸ್ವತಂತ್ರವಾದ ಅಸ್ತಿತ್ವವಿಲ್ಲವೋ ಅಂತೆಯೇ ಆತ್ಮಕ್ಕೆ ಭಿನ್ನವಾದ ಯಾವ ಆಲೋಚನೆಗೂ ಅಸ್ತಿತ್ವ ಇರುವುದಿಲ್ಲ. ಪ್ರಸ್ತುತ ಇಹಪರಕ್ಕೆ ಸಂಬಂಧಪಟ್ಟದ್ದೆಲ್ಲ ನಿನ್ನ ಆಲೋಚನೆಗಳೇ ಆದ್ದರಿಂದ, ಜನನ ಮರಣಾಧಿಕವಾದ ಯಾವುದಕ್ಕೂ ಅಸ್ತಿತ್ವ ಇಲ್ಲವೆಂದು ಹೇಳುವ ಅಗತ್ಯವಿಲ್ಲ. ಆದ್ದರಿಂದ ನೀನು ಅವುಗಳನ್ನು ಜ್ಞಾಪಿಸಿಕೊಂಡು ಭಯಪಡುತ್ತಿರುವೆ ಎಂದರೆ, ನಿನ್ನ ನೆರಳನ್ನು ನೋಡಿ ನೀನೇ ಭಯಪಟ್ಟ ಹಾಗೆಯೇ. ನೀನು ಹಿಡಿಯಬೇಕಾದದ್ದು ನಿನ್ನ ನೆರಳನ್ನಲ್ಲ, ನಿನ್ನನ್ನೇ. ನಿನ್ನ ಸ್ವರೂಪವನ್ನೇ ನೀನು ಗಟ್ಟಿಯಾಗಿ ಹಿಡಿದುಕೊಂಡರೆ, ನಿನಗೆ ಮೂಡುವ ಇತರ ಭಾವಗಳೆಲ್ಲಾ, ನಿನ್ನ

ಸ್ವರೂಪವೆಂಬ ತೆರೆಯ ಮೇಲೆ ಬಂದು ಹೋಗುವ ಚಿತ್ರಗಳಂತೆ ಅಲ್ಲಿಗಲ್ಲಿಗೆ ಮಸುಕಾಗಿ ಮರೆಯಾಗುವುದನ್ನು ನೀನು ನೋಡಬಲ್ಲೆ.

ಆದರೂ ಮನಸಿಗೆ ಧೈರ್ಯವಿಲ್ಲವಲ್ಲ! ಅದಕ್ಕೆ ಕಾರಣ, ಶರೀರಾದಿ ಉಪಾಧಿಗಳಿಗೆ ವಿಲಕ್ಷಣವಾಗಿ ನಮ್ಮ ಸ್ವರೂಪವನ್ನು ಗುರುತಿಸದಿರುವುದೇ. ಗುರುತಿಸಿದೆ ಎಂದರೆ, ಜನಿಸಿದಾಗ ಹುಟ್ಟಿದ್ದು ನಾನಲ್ಲ, ಉಪಾಧಿ, ನಾಳೆ ಸತ್ತಾಗಲೂ ಉಪಾಧಿಯೇ ಹೋಗುತ್ತದೆ, ನಾನಲ್ಲವೆಂಬ ನಿಶ್ಚಯದಿಂದ ಜೀವಿಸುತ್ತೀಯೆ. ನಿನಗೆ ಸ್ಥಿತಿಯೇ ಹೊರತು ಗತಿ ಇಲ್ಲವೆಂಬುದು ಅಕ್ಷರಸತ್ಯ.

ಈ ಸತ್ಯವನ್ನ ದಕ್ಕಿಸಿಕೊಳ್ಳಬೇಕಾದರೆ ನಾನು ಸರ್ವವ್ಯಾಪಕ ಎಂಬ ಸ್ಮೃತಿ ಯಾವಾಗಲೂ ಸಡಿಲಗೊಳ್ಳಬಾರದು. ಹಾಗೆ ಸಡಿಲಗೊಳ್ಳದವನೇ ಜೀವನ್ಮುಕ್ತ. ಅವನು ಜೀವನದಲ್ಲಿ ಒದಗುವ ಎಲ್ಲಾ ದೆಸೆಗಳಲ್ಲೂ ಆತ್ಮಸ್ಮೃತಿಯಿಂದಲೇ ಇರುತ್ತಾನೆ. ಜೀವನಪರ್ಯಂತವೂ ಹಾಗೆ ಅದನ್ನು ವಿಸ್ತರಿಸಿಕೊಂಡೇ ಹೋಗುತ್ತಾನೆ. ಹಾಗಿರುತ್ತಾನೋ ಇಲ್ಲವೋ ಹೇಗೆ ನಂಬುವುದು! ಇಷ್ಟುಮಂದಿಗಿಲ್ಲದ ಸ್ಮೃತಿ ಅವನಿಗೆ ಮಾತ್ರ ಹೇಗೆ ಪ್ರಾಪ್ತಿಯಾಯಿತೆನ್ನುವೆಯಾ? ಅದಕ್ಕೆ ನಮ್ಮ ಸಮಾಧಾನ ಒಂದೇ.

ಚಂದ್ರಮಂಡಲಕ್ಕೆ ಹೋಗಿ ಬಂದ ಅಂತರ್ಯಾಮಿಯ ಅನುಭವ ಅವನದಲ್ಲದೆ ನಮ್ಮೆಲ್ಲರಿಗೂ ಆ ಅನುಭವವಿಲ್ಲ. ಅದನ್ನು ಹೇಗೆ ನಂಬಿದೆ? ಹತ್ತು ಮಂದಿ ಆ ಬಗ್ಗೆ ಹೇಳುತ್ತಿದ್ದರೆ ಕೇಳಿ ನಂಬುತ್ತಿದ್ದೀಯೆ. ಅಂತೆಯೇ ಹತ್ತು ಮಂದಿ ಬ್ರಹ್ಮವೇತ್ತರು ಹೇಳುತ್ತಿದ್ದಾರೆ, ಏನೆಂದು, ಜೀವನ್ಮುಕ್ತನಾದವನೂ ಸಹ ಒಂದು ಚಿದಾಕಾಶದಲ್ಲಿ ಸದಾ ಸಾಗುತ್ತಿರುತ್ತಾನೆ, ಅಲ್ಲೇ ಅವನ ನಿತ್ಯ ನಿವಾಸ ಎಂದು.

ಇದನ್ನೂ ನಂಬಬೇಕಲ್ಲವೆ! ಅವನಾ ಚಿದಾಕಾಶದಲ್ಲಿ ಹೇಗೆ ನಿವಸಿಸಬಲ್ಲವನಾದ? ಚಿದಾಕಾಶವೇ ತನ್ನ ಶರೀರವೆಂದು ಅರಿತು, ಈ ಭೌತಿಕ ಶರೀರವನ್ನು ಬಿಟ್ಟು ಅದರಲ್ಲಿ ಪ್ರವೇಶಿದ. ಹೊಸದಾಗಿ ಪ್ರವೇಶಿಸುವ ಅಗತ್ಯವೂ ಇಲ್ಲ.

ಚಿದಾಕಾಶ ಎಂದರೆ ಆಕಾಶದಂತೆ ವಿಸ್ತರಿಸಿದ ನಿನ್ನ–ನನ್ನ ಜ್ಞಾನವೇ ಅಲ್ಲವೆ. ಈ ಶರೀರವನ್ನು ನಾನೆಂದುಕೊಂಡು ಇದರಲ್ಲೇ ಕುಳಿತಿದ್ದರೂ ಅದು ಈಗಲೂ ನಿನಗೆ ಸಿದ್ಧವಾಗಿಯೇ ಇದೆ. ನೀನೇ ಅದು. ಹಾಗಿದ್ದರೂ ಜ್ಞೇಯವಾದ ಈ ಶರೀರವೇ ನಾನೆಂದು ಬಹಳ ಕಾಲದಿಂದ ಕಟ್ಟುಬಿದ್ದಿದ್ದೀಯೆ. ಆ ಕಾರಣದಿಂದ ಇದನ್ನು ಬಿಟ್ಟು ಅದು ನಾನೆಂದು ಅದರೊಂದಿಗೆ ತಾದಾತ್ಮ್ಯ ಹೊಂದಲಾರದೆ ಹೋಗಿದ್ದೀಯೆ. ಅದಕ್ಕೆಂದೇ ನಾವು ನಿದಿಧ್ಯಾಸನಾ ರೂಪವಾಗಿ ಅಭ್ಯಾಸ ಮಾಡಬೇಕಿದೆ.

ಅಭ್ಯಾಸ ಹೆಚ್ಚಿದಂತೆ ಶರೀರಾತ್ಮ ವಾಸನೆ ದೂರವಾಗಿ, ಅದಕ್ಕೆ ಪರ್ಯಾಯವಾಗಿ ಚಿದಾತ್ಮ ವಾಸನೆ ಧೃಢವಾಗುತ್ತಾ ಬರುತ್ತದೆ. ಅಲ್ಲದೆ, ಜಡವಾದ ಈ ಶರೀರ ಅಸಲಿಗೆ ವಸ್ತುರೂಪವಲ್ಲ, ಅಭಾಸ. ಇಲ್ಲದ ಆಭಾಸವೇ ಇಷ್ಟು ಬಲವಾಗಿ ನಿನ್ನನ್ನು ಹಿಡಿದಿಟ್ಟುಕೊಂಡರೆ, ಇರುವ ವಸ್ತು, ನಿನ್ನ ಚೈತನ್ಯ ನಿನ್ನನ್ನು ಹಿಡಿಯದೆ? 'ಶ್ರದ್ಧಾವಾನ್ ಲಭತೇ ಜ್ಞಾನಂ', ಆದ್ದರಿಂದ ನಿದ್ರೆಯೆಂದೋ, ರೋಗವೆಂದೋ, ಮರಣ, ಪುನರ್ಜನ್ಮ ವೆಂದೂ, ನಿನ್ನನ್ನು ಪ್ರತಿಲೋಮವಾಗಿ ನೋಡಿ ಭಯಪಡುವುದನ್ನು ಬಿಟ್ಟು, ಅನುಲೋಮವಾಗಿ, ಸರ್ವ ದಶೆಗಳಲ್ಲೂ ನಾನು ಸದ್ರೂಪವಾಗಿ, ಚಿದ್ರೂಪವಾಗಿ, ಇದ್ದೇ ಇರುವೆನೆಂದು ನಿನ್ನನ್ನು ನೀನು ಗಟ್ಟಿಯಾಗಿ ಹಿಡಿದಿರು.

ಆ ಸ್ಥಿರಗ್ರಹಣದಿಂದ, ಅದು ತನ್ನ ಕಳೆದ ಬಲವನ್ನು ಪುನಃ ಸ್ಥಾಪಿಸಿಕೊಂಡು ಅಸದ್ರೂಪವಾದ ಈ ಸಮಸ್ತವನ್ನೂ ತನ್ನಲ್ಲೇ ಸಮ್ಮಿಶ್ರ ಮಾಡಿಕೊಂಡು, ಆತ್ಮವೇನು, ಅನಾತ್ಮವೇನು, ಎಲ್ಲವನ್ನು ತನ್ನ ಸ್ವರೂಪವಾಗಿಯೇ ಅನುಸಂಧಾನ ಮಾಡಿಕೊಳ್ಳಬಲ್ಲದು. ಎಂದಿಗೂ ಹಾಗೆ ನಿಲ್ಲಬಲ್ಲದು. ಹಾಗಿದ್ದಾಗ ನನಗಾಗಲಿ ನಿನಗಾಗಲಿ ಜನನವಿಲ್ಲ, ಮರಣವಿಲ್ಲ, ಇಹವಿಲ್ಲ, ಪರವಿಲ್ಲ, ಏನೂ ಇಲ್ಲ. ನನಗೆ ನಾನೇ, ನನ್ನದೂ ನಾನೇ, ನಾನೂ ನಾನೇ ಎಂಬ ಅಖಂಡಾದ್ವಯಾತ್ಮಭಾವವು ಅನುಕ್ಷಣವೂ ಅನುಭವಕ್ಕೆ ಬರುತ್ತಿರುತ್ತದೆ.

ಇದನ್ನೇ ಏಕಾತ್ಮಭಾವವೆಂದು, ಸರ್ವಾತ್ಮ ಭಾವವೆಂದು ಪ್ರಾಜ್ಞರು ಹೇಳಿರುವುದು. ಇದನ್ನು ಎಟುಕಿಸಿಕೊಳ್ಳಬಲ್ಲೆವಾದರೆ, ಜನನ ಮರಣಾದಿ ಜೀವನ ಸಮಸ್ಯೆಗಳೆಲ್ಲವನ್ನು ಪರಿಷ್ಕರಿಸಿಕೊಂಡು, ಸಾಧಕರಾದ ನಾವು ಈ ಜೀವನದಲ್ಲೇ ಸಿದ್ಧಪುರುಷರಾಗಿ ಕೊನೆಗೆ ಮೋಕ್ಷ ಸಾಮ್ರಾಜ್ಯಕ್ಕೆ ಪಟ್ಟಾಭಿಷಿಕ್ತರಾಗಬಲ್ಲೆವು.

* * * * * * * * *